ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 15 ಶುಕ್ರವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 29 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4


ಕೆಪಿಸಿಸಿ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯದ ಉಪ ಮುಖ್ಯ ಮಂತ್ರಿಗಳಾದಂತಹ
ಶ್ರೀ ಡಿ.ಕೆ. ಶಿವಕುಮಾರ್ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 15 ಶುಕ್ರವಾರ 2026

47

ಸಂಪುಟ: 47 | ಸಂಚಿಕೆ: 29

ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com


ಮೇ 30ರಿಂದ 3ನೇ ಹಂತದ ಎಸ್ಐಆರ್

ಕರ್ನಾಟಕ ಸೇರಿ 16 ರಾಜ್ಯ, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ

ಮತದಾರರ ಪಟ್ಟಿ ಪರಿಷ್ಕರಣೆ

ನವದೆಹಲಿ: ಮಹತ್ವದ ಬೆಳವಣಿಗೆಯಲ್ಲಿ ಈ ಹಿಂದೆ ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ಭಾರೀ ಸದ್ದು ಮಾಡಿದ್ದ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್)ಯ ಮೂರನೇ ಹಂತ ಆರಂಭಿಸುವುದಾಗಿ ಕೇಂದ್ರ ಚುನಾವಣಾ ಆಯೋಗ ಮಾಹಿತಿ ನೀಡಿದೆ.

ಕೇಂದ್ರ ಚುನಾವಣಾ ಆಯೋಗದ ಮುಖ್ಯಸ್ಥ ಜ್ಞಾನೇಶ್ ಕುಮಾರ್ ಅವರು ಗುರುವಾರ ಕರ್ನಾಟಕ ಸೇರಿದಂತೆ 16 ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಹಂತ–3 ಪ್ರಕ್ರಿಯೆಯನ್ನು ಆರಂಭಿಸಲಾಗುವುದು ಎಂದು ಘೋಷಿಸಿದರು. ಈ ಅಭಿಯಾನದಲ್ಲಿ ಮತದಾರರು ಉತ್ಸಾಹದಿಂದ ಭಾಗವಹಿಸಿ ತಮ್ಮ ಎಣಿಕೆ ಫಾರ್ಮ್‌ಗಳನ್ನು ಭರ್ತಿ ಮಾಡಬೇಕು ಎಂದು ಅವರು ಮನವಿ ಮಾಡಿದ್ದಾರೆ.



ಈ ಪರಿಷ್ಕರಣೆಯ ಉದ್ದೇಶ ಅರ್ಹ ಮತದಾರರು ಮಾತ್ರ ಮತದಾರರ ಪಟ್ಟಿಯಲ್ಲಿ ಉಳಿಯುವಂತೆ ಮಾಡುವುದು ಮತ್ತು ಅನರ್ಹ ಹೆಸರುಗಳನ್ನು ತೆಗೆದುಹಾಕುವುದು ಎಂದು ಅವರು ತಿಳಿಸಿದ್ದಾರೆ.

ಭಾರತೀಯ ಚುನಾವಣಾ ಆಯೋಗ ಬಿಡುಗಡೆ ಮಾಡಿದ ಅಧಿಕೃತ ಪ್ರಕಟಣೆಯ ಪ್ರಕಾರ, ಹಂತ–3 ಅಭಿಯಾನವು ಹಂತ ಹಂತವಾಗಿ ಸುಮಾರು 36 ಕೋಟಿ ಮತದಾರರನ್ನು ಒಳಗೊಂಡಿರಲಿದೆ. ಪ್ರಸ್ತುತ ನಡೆಯುತ್ತಿರುವ ಜನಗಣತಿಯ ಮನೆ ಪಟ್ಟಿ ಪ್ರಕ್ರಿಯೆಯೊಂದಿಗೆ ಇದನ್ನು ಸಂಯೋಜಿಸಲಾಗಿದ್ದು, ಕ್ಷೇತ್ರ ಸಿಬ್ಬಂದಿಯ ಬಳಕೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶ ಹೊಂದಿದೆ ಎನ್ನಲಾಗಿದೆ.

ಆಯೋಗದ ಪ್ರಕಾರ, ಹಿಮಾಚಲ ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರ, ಕೇಂದ್ರಾಡಳಿತ ಪ್ರದೇಶ ಲಡಾಕ್ ಅನ್ನು ಹೊರತುಪಡಿಸಿ ದೇಶದ ಬಹುತೇಕ ಭಾಗಗಳಲ್ಲಿ ಈ ಹಂತದ ಪರಿಷ್ಕರಣೆ ನಡೆಯಲಿದೆ. ಹಿಮ ಪ್ರದೇಶಗಳಲ್ಲಿ ಹವಾಮಾನ ಪರಿಸ್ಥಿತಿ ಹಾಗೂ ನಡೆಯುತ್ತಿರುವ ಜನಗಣತಿ ಕಾರ್ಯಾಚರಣೆಗಳ ಹಿನ್ನೆಲೆಯಲ್ಲಿ ಆ ಪ್ರದೇಶಗಳ ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು.

ಈ ಅಭಿಯಾನ ನಡೆಯಲಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ರಾಜಧಾನಿ ದೆಹಲಿ, ಒಡಿಶಾ, ಮಿಜೋರಾಂ, ಸಿಕ್ಕಿಂ, ಉತ್ತರಾಖಂಡ, ಆಂಧ್ರ ಪ್ರದೇಶ, ■10ನೇ ಪುಟಕ್ಕೆ

ಶಾಲಾ-ಕಾಲೇಜಲ್ಲಿ ಹಿಜಾಬ್ ಹಾಕಬಹುದು! ಕೇಸರಿ ಶಾಲು, ಪೇಟಾ ಹಾಕಬಾರದು!!

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

- ಜನಿವಾರ, ಉಡುದಾರ, ಶಿವದಾರ, ರುದ್ರಾಕ್ಷಿಗೆ ಅವಕಾಶವಿದೆ
- ಸಾಂಪ್ರದಾಯಿಕ ಧಾರ್ಮಿಕ ಸಂಕೇತ ಅನುಸರಿಸಬಹುದು

ಮೈಸೂರು, ಮೇ14(ಬಿಎಲ್‌ಯು)– ಪ್ರಾಥಮಿಕ ಶಾಲೆಯಿಂದ ಪಿಯುಸಿವರೆಗೆ ವಿದ್ಯಾರ್ಥಿಗಳು ಹಿಜಾಬ್ ಧರಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ ಕೇಸರಿ ಶಾಲು, ಕೇಸರಿ ಪೇಟ ಧರಿಸಲು ಅವಕಾಶವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಮೈಸೂರಿನ



ಟಿ.ಕೆ.ಬಡಾವಣೆಯ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಾಥಮಿಕ ತರಗತಿಯಿಂದ 12ನೇ ತರಗತಿವರೆಗೆ ಜನಿವಾರ, ಉಡುದಾರ, ಶಿವದಾರ, ರುದ್ರಾಕ್ಷಿ, ಹಿಜಾಬ್ ಧರಿಸಬಹುದು ಎಂದು ತಿಳಿಸಿದರು. ಈ ಮೊದಲಿನಿಂದಲೂ ಪ್ರ್ಯಾಕ್ಟೀಸ್‌ನಲ್ಲಿರುವಂತೆ ಸಾಂಪ್ರದಾಯಿಕವಾಗಿ ಅನುಸರಿಸುವ ಧಾರ್ಮಿಕ ಸಂಕೇತಗಳನ್ನು ಧರಿಸಲು ಅವಕಾಶವಿದೆ. ಆದರೆ, ಹೊಸದಾಗಿ ಕೇಸರಿ ಶಾಲು, ಕೇಸರಿ ಪೇಟ ಧರಿಸುವಂತಿಲ್ಲ ಎಂದು ಸಿದ್ದರಾಮಯ್ಯ ತಾಕೀತು ಮಾಡಿದರು. ನಾವು ಹಿಜಾಬ್ ಧರಿಸಲು ಮಾತ್ರ ಅವಕಾಶ ನೀಡದೆ ಮೊದಲಿನಿಂದಲೂ ಅನುಸರಿಸಿಕೊಂಡು ಬರುತ್ತಿರುವ ಸಾಂಪ್ರದಾಯಿಕ ಧಾರ್ಮಿಕ ಸಂಕೇತ ಪಾಲಿಸಲು ಕೂಡ ಅವಕಾಶ ನೀಡಿದ್ದೇವೆ. ಆದರೆ ಈಗ ಪೇಟಕ್ಕೆ ಬಣ್ಣ ಬದಲಾವಣೆ ಮಾಡುವುದು ಹಾಗೂ ಹೊಸ ರೂಪದ ಪೇಟ ಧರಿಸಲು ■10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಸಾಫ್ಟ್‌ವೇರ್ ಅಪ್ಪ ಮಗನಿಗೆ ಕೋಪದಿಂದ ಕೊತ್ತಂಬರಿ ಸೊಪ್ಪು ತಗೊಂಡ್ ಬಾ ಅಂದರೆ ಪುದಿನ ಸೊಪ್ಪು ತಂದಿದ್ದೀಯಲ್ಲಾ...
ನಿಂಗೇನ್ ಅಷ್ಟು ಗೊತ್ತಾಗಲ್ವಾ.
ಮಗ : ಬಾ ಅಪ್ಪ ಇಬ್ರು ಒಟ್ಟಿಗೆ ಮನೆ ಬಿಟ್ಟು ಹೋಗೋಣ.
ಅಪ್ಪ : ಯಾಕೋ?
ಮಗ : ಅಮ್ಮ ಹೇಳ್ತಿದ್ದಾಳೆ ಇದು ಮೆಂತ್ಯ ಸೊಪ್ಪಂತೆ.

ಮೈಸೂರು ಮಿತ್ರ

ಶುಕ್ರವಾರ, ಮೇ 15, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕೆತ್ತಿಸಿಕೊಳ್ಳುವ ತಾಳ್ಮೆ ಇಲ್ಲದವರು ವಿಗ್ರಹವಾಗಲು ಹಂಬಲಿಸಬಾರದು. ಕಲ್ಲಾಗಿಯೇ ಇದ್ದು ಬಿಡಬೇಕು!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಮಣದಷ್ಟು ಮಾತಿಗಿಂತ ಕಣದಷ್ಟು ಕೆಲಸ ಲೇಸು.

ನಿಮ್ಮ ಪತ್ರಗಳು

ಪಾಲಿಕೆಯ ಗಮನಕ್ಕೆ

ಮಾನ್ಯರೆ,



ಮೈಸೂರಿನ ಕುವೆಂಪುನಗರದ ನೃಪತುಂಗ ರಸ್ತೆ ಮೇಘಾ ಮೆಡಿಕಲ್ಸ್ ಎದುರು ಇರುವ ಎರಡು ಮರಗಳು ರಸ್ತೆಗೆ ಬಾಗಿ ರಸ್ತೆಯ ಅರ್ಧ ಭಾಗವನ್ನೇ ನುಂಗಿ ಹಾಕಿವೆ. ಈ ಎರಡು ಮರಗಳ ಕೆಳಗೆ ಯಾವುದೇ ವಾಹನಗಳೂ ಸಂಚರಿಸಲು ಸಾಧ್ಯವಾಗುತ್ತಿಲ್ಲ. ನಾಗರಿಕರು ನಡೆದುಕೊಂಡು ಹೋಗಲೂ ಸಹ ಸಾಧ್ಯವಾಗುತ್ತಿಲ್ಲ. ಈ ಮರಗಳು ಪೊದೆಗಳಂತೆ ಆವರಿಸಿ ರಸ್ತೆಯ ಕಡೆಗೆ ಬಾಗಿ ಬೆಳೆದಿರುವುದರಿಂದ ಪಾದಚಾರಿ ಮಾರ್ಗ ಹಾಗೂ ಈ ರಸ್ತೆಯ ಅರ್ಧ ಭಾಗವೇ ಬಂದ್ ಆದಂತಾಗಿದೆ. ಬಸ್ಸು, ಕಾರು, ಆಟೋಗಳು ಈ ಮರಗಳಿಂದ ಬಚಾವಾಗಲು ಅಡ್ಡಾದಿಡ್ಡಿ ಚಲಿಸುವಂತಾಗಿದೆ. ಈ ಮರಗಳ ನೆರಳಿನಡಿ ತೂರಿ ಕೆಲವು ಕಾರುಗಳು ನಿದ್ರಿಸುತ್ತಿರುತ್ತವೆ. ಇದರಿಂದ ತೂಕಡಿಸುತ್ತಿರುವವರಿಗೆ ದಿಂಬು ನೀಡಿದಂತಾಗಿದೆ. ಈ ಕೂಡಲೇ ಪಾಲಿಕೆಯು ಎಚ್ಚೆತ್ತು ಈ ಎರಡೂ ಮರಗಳಿಗೆ ಸಿಂಗಾರ–ಬಂಗಾರ ಮಾಡಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಾಗಿದೆ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಐಪಿಎಲ್‌ನಲ್ಲಿ ಘನತೆಗಿಂತ ಗ್ಲಾಮರ್ ಅಬ್ಬರ

ಮಾನ್ಯರೆ,

ಬಿಸಿಸಿಐ ನೀಡಿರುವ ಇತ್ತೀಚಿನ ಎಚ್ಚರಿಕೆ ಐ.ಪಿ.ಎಲ್. ನಲ್ಲಿ ಅಡಗಿರುವ ಗಂಭೀರ ಶಿಸ್ತಿನ ಕೊರತೆಯನ್ನು ಎತ್ತಿ ತೋರಿಸುತ್ತಿದೆ. ಆಟಗಾರರು ಡ್ರೆಸ್ಸಿಂಗ್ ರೂಮ್‌ನಲ್ಲಿ ಧೂಮಪಾನ ಮಾಡುವುದು ಮತ್ತು ಮೈದಾನದಲ್ಲಿ ರೀಲ್ಸ್ ಮಾಡುವುದರಲ್ಲಿ ಮಗ್ನರಾಗಿರುವುದು ಖಂಡನೀಯ. ಅತಿ ದೊಡ್ಡ ಆತಂಕವೆಂದರೆ ಬಿಸಿಸಿಐ ಮೊದಲ ಬಾರಿಗೆ ಹನಿ ಟ್ರ್ಯಾಪಿಂಗ್ ಬಗ್ಗೆ ಎಚ್ಚರಿಸಿದೆ. ಇದು ಆಟಗಾರರ ನೈತಿಕ ಪತನದ ಪರಮಾವಧಿ. ಹಣ ಮತ್ತು ಪ್ರಸಿದ್ಧಿಯ ಅಮಲಿನಲ್ಲಿ ಯುವ ಆಟಗಾರರು ತಮ್ಮ ಜವಾಬ್ದಾರಿಯನ್ನು ಮರೆಯುತ್ತಿದ್ದಾರೆ. ಹೋಟೆಲ್‌ಗಳಲ್ಲಿ ಅನಧಿಕೃತ ವ್ಯಕ್ತಿಗಳ ಪ್ರವೇಶವು ಕೇವಲ ಶಿಸ್ತಿನ ಉಲ್ಲಂಘನೆಯಲ್ಲ ಇದು ಭ್ರಷ್ಟಾಚಾರಕ್ಕೆ ಮುಕ್ತ ಆಹ್ವಾನ. ಬಿಸಿಸಿಐ ಬರಿ ಎಚ್ಚರಿಕೆ ನೀಡಿದರೆ ಸಾಲದು. ಕಟ್ಟುನಿಟ್ಟಿನ ನಿಷೇಧ ಮತ್ತು ಭಾರೀ ದಂಡ ಹೇರಬೇಕು. ಶಿಸ್ತು ಕಾಪಾಡದಿದ್ದರೆ ಕ್ರಿಕೆಟ್‌ನ ಪಾವಿತ್ರ್ಯತೆ ನಾಶವಾಗಿ ಐಪಿಎಲ್ ಕೇವಲ ಒಂದು ಅಗ್ಗದ ಮನರಂಜನಾ ಪ್ರದರ್ಶನವಾಗಿ ಉಳಿಯುತ್ತದೆ.

–ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.

ನಾಮಕಾವಸ್ಥೆಯ ಸಿಸಿ ಕ್ಯಾಮರಾಗಳು

ಮಾನ್ಯರೆ,

ಮೈಸೂರು ನಗರದ ಕ್ಯಾತಮಾರನಹಳ್ಳಿಯಲ್ಲಿ ಹಲವು ವೃತ್ತಗಳ ಕಡೆ ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದಾರೆ. ಅದರಲ್ಲಿ ದೊಡ್ಡಗರಡಿ ಹಾಗೂ ಕಿತ್ತೂರು ಚೆನ್ನಮ್ಮ ಶಾಲೆಗೆ ಹೋಗುವ ರಸ್ತೆಗೆ ಹೊಂದಿಕೊಂಡಿರುವ ವೃತ್ತದಲ್ಲಿ ಸಿಸಿ ಕ್ಯಾಮರಾ ವಿದ್ಯುತ್ ಕಂಬದ ಕಡೆ ತಿರುಗಿದೆ. ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳು ಕ್ಯಾಮರಾ ಸರಿಪಡಿಸಿ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಚುನಾವಣೆ : ಬಹುಮತ ಕಾನೂನಿಗೆ ತಿದ್ದುಪಡಿ ಅಗತ್ಯ

ಮಾನ್ಯರೆ,

'ಪ್ರಜಾಪ್ರಭುತ್ವ'ದಲ್ಲಿ ಅತ್ಯಧಿಕ ಸ್ಥಾನ ಪಡೆದ ಪಕ್ಷಕ್ಕೆ ಸರ್ಕಾರ ರಚನೆಗೆ ಅವಕಾಶ ಬೇಕಿದೆ. ಆದ್ದರಿಂದ ಪ್ರಸಕ್ತ ಬಹುಮತ ಕಾನೂನಿಗೆ ತಿದ್ದುಪಡಿ ಅಗತ್ಯವಿದೆ. ಒಬ್ಬ ಅಭ್ಯರ್ಥಿ ಎರಡು ಕಡೆಗಳಲ್ಲಿ ಸ್ಪರ್ಧಿಸದಂತೆ, ಚುನಾವಣಾ ಕಾನೂನಿಗೆ ತಿದ್ದುಪಡಿ ಆಗಲೇಬೇಕಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಅಭಿಮತ ಮುಖ್ಯ, ಅಲ್ಲವೇ?

– ಅರವಿಂದ ಆರ್ಯ ಗುರೂಜಿ, ಪಿರಿಯಾಪಟ್ಟಣ

ಕೆವಿಸಿ ಆಸ್ಪತ್ರೆಯ ಎದುರು ವಾಹನ ನಿಲುಗಡೆ ಶಾಶ್ವತ ರದ್ದಾಗಲಿ




ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನ ಕೃಷ್ಣವಿಲಾಸ ರಸ್ತೆಯಲ್ಲಿರುವ ಆಸ್ಪತ್ರೆಯೊಂದರ ಮುಂಭಾಗದ ರಸ್ತೆಯ ಬದಿಗಳಲ್ಲಿ ವಾಹನ ನಿಲುಗಡೆಗೆ ಅವಕಾಶ ಇಲ್ಲದಿದ್ದರೂ ಆಸ್ಪತ್ರೆಯ ಆಡಳಿತ ಮಂಡಳಿಯ ಸೂಚನೆ ಮೇರೆಗೆ ಕರ್ತವ್ಯ ನಿರ್ವಹಿಸುವ ಸೆಕ್ಯೂರಿಟಿಗಳು ರೋಗಿಗಳು ಮತ್ತು ರೋಗಿಗಳನ್ನು ನೋಡಲು ಬರುವವರು ಸ್ಕೂಟರ್ ಮತ್ತು ಕಾರುಗಳನ್ನು ರಸ್ತೆ ಬದಿಗಳಲ್ಲಿ ಅಡ್ಡಾ ದಿಡ್ಡಿಯಾಗಿ ನಿಲ್ಲಿಸುತ್ತಾರೆ. ಈ ಆಸ್ಪತ್ರೆಯ ಸುತ್ತಮುತ್ತ ರೋಟರಿ ಶಾಲೆ, ಮಹಾರಾಣಿ, ಮರಿಮಲ್ಲಪ್ಪ, ಸದ್ವಿದ್ಯಾ ಶಾಲಾ ಕಾಲೇಜು, ಲೋಕಾಯುಕ್ತ ಅಧಿಕಾರಿಗಳ ಕಚೇರಿ ಹಾಗೂ ವಾಣಿಜ್ಯ ತೆರಿಗೆ ಇಲಾಖೆ ಇದ್ದರೂ ಸಹ ಯಾವುದೇ ಭಯ ಇಲ್ಲದೆ ರಸ್ತೆಯಲ್ಲಿ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ.

ಅದರಲ್ಲೂ ಸಂಜೆ ವೇಳೆ ಶಾಲಾ ಕಾಲೇಜುಗಳು ಬಿಡುವುದರಿಂದ ತುಂಬಾ ಟ್ರಾಫಿಕ್ ಜಾಮ್ ಆಗುತ್ತದೆ. ವಿದ್ಯಾರ್ಥಿಗಳು, ಪಾದಚಾರಿಗಳು ಓಡಾಡಲು ಕಷ್ಟ ಪಡುವಂತಾಗಿದೆ. ಅಲ್ಲದೆ ದ್ವಿಚಕ್ರ ವಾಹನಗಳನ್ನು ಪಾದಚಾರಿ ಮಾರ್ಗದಲ್ಲಿ ನಿಲ್ಲಿಸಿರುತ್ತಾರೆ. ಇದರಿಂದ ಪಾದಚಾರಿಗಳಿಗೆ ತೊಂದರೆಯಾಗಿರುವುದಲ್ಲದೆ, ಪಾದಚಾರಿ ಮಾರ್ಗ ಹಾಳಾಗುತ್ತಿದೆ.

ಕೆವಿಸಿ ಆಸ್ಪತ್ರೆಯ ಅನತಿ ದೂರದಲ್ಲಿಯೇ ದೇವರಾಜ ಸಂಚಾರ ಪೊಲೀಸ್ ಠಾಣೆ ಇದ್ದರೂ ಜಾಣ ಕುರುಡುತನವನ್ನು ಪ್ರದರ್ಶಿಸುತ್ತಿದೆ. ಆದ್ದರಿಂದ ಸಂಬಂಧಪಟ್ಟ ಸಂಚಾರ ಪೊಲೀಸ್ ಅಧಿಕಾರಿಗಳು ಈ ಕೂಡಲೇ ಇತ್ತ ಗಮನಹರಿಸಿ ವಾಹನ ನಿಲುಗಡೆ ಮಾಡದಂತೆ ಕ್ರಮ ಕೈಗೊಳ್ಳಬೇಕು ಅಥವಾ ವಾಹನಗಳನ್ನು ವಾಹನ ನಿಲುಗಡೆ ಸ್ಥಳದಲ್ಲೇ ನಿಲ್ಲಿಸುವಂತೆ ಸೂಚನೆ ನೀಡಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಶಾಂತಿಯ ರಾಸಾಯನಿಕ ಸಂಯೋಜನೆ...


ಎಲ್ಲರಿಗೂ ತಮ್ಮ ಬದುಕಿನಲ್ಲಿ ನೆಮ್ಮದಿ ಬೇಕು, ಆದರೆ, ಪ್ರಕ್ಷುಬ್ಧ ಮನಸ್ಸುಗಳು ನೆಮ್ಮದಿಯಿಂದ ಇರಲು ಬಿಡುವುದಿಲ್ಲ. ನೆಮ್ಮದಿ ಕಳೆದುಕೊಂಡಾಗ ನೀವು ಮೊದಲು ನಿಮ್ಮ ಗಂಡ ಅಥವಾ ಹೆಂಡತಿಯೊಂದಿಗೆ ಜಗಳವಾಡುವುದು ಸಹಜ. ಕೋಪ ಹೆಚ್ಚಾದಂತೆ, ಅಕ್ಕಪಕ್ಕದವರವರೆಗೆ ಹೋಗುತ್ತದೆ. ಇನ್ನೂ ಮುಂದುವರೆದಂತೆ, ನಿಮ್ಮ ಬಾಸ್ ಮೇಲೆ ರೇಗಾಡಲು ಪ್ರಾರಂಭಿಸುತ್ತೀರಿ. ನೀವು ಯಾವಾಗ ನಿಮ್ಮ ಬಾಸ್ ಮೇಲೆ ರೇಗಾಡಲು ಪ್ರಾರಂಭಿಸುತ್ತಿರೋ, ಆ ಕ್ಷಣ ನಿಮಗೆ ವೈದ್ಯಕೀಯ ಸಹಾಯದ ಅಗತ್ಯವಿದೆ ಎಂದು ಎಲ್ಲರಿಗೂ ಅರ್ಥವಾಗುತ್ತದೆ. ಗಂಡ, ಹೆಂಡತಿ ಅಥವಾ ಅಕ್ಕಪಕ್ಕದವರ ಮೇಲೆ ಎಗರಾಡುವುದು ನಮ್ಮ ಸಮಾಜ ಸಾಮಾನ್ಯವೆಂದು ಸ್ವೀಕರಿಸುತ್ತದೆ. ಏಕೆಂದರೆ, ಎಲ್ಲರೂ ಅದನ್ನೇ ಮಾಡುವುದು. ಆದರೆ ನಿಮ್ಮ ಬಾಸ್ ಮೇಲೆ ಕೂಗಾಡುವುದು ಎಲ್ಲೆ ಮೀರಿದಂತಾಗುತ್ತದೆ.

ಇದು ವೈದ್ಯರನ್ನು ಕಾಣಲೇಬೇಕಾದಂತಹ ಸನ್ನಿವೇಶವಾಗುತ್ತದೆ. ಅವರು ನಿಮಗೊಂದು ಮಾತ್ರೆ ಕೊಡುತ್ತಾರೆ. ಒಮ್ಮೆ ಅದು ಒಳ ಹೋದರೆ, ನೀವು ಆರಾಮವಾಗುತ್ತೀರಿ–ಕಡೇ ಪಕ್ಷ ಕೆಲವು ಘಂಟೆಗಳವರೆಗಾದರೂ. ಯಾವುದಾದರೂ ರಾಸಾಯನಿಕ ವಸ್ತುವು ವ್ಯವಸ್ಥೆಯನ್ನು ಹೊಕ್ಕರೆ, ಆ ಹಂತದಲ್ಲಿ ದೇಹ, ಮನಸ್ಸುಗಳಲ್ಲಿನ ಪ್ರಕ್ಷುಬ್ಧತೆ ದೂರವಾಗಿ ಸ್ವಲ್ಪ ನೆಮ್ಮದಿಗೆ ಸ್ಥಳವಾಗುತ್ತದೆ. ಹಾಗಾಗಿ, ಶಾಂತಿ ಎನ್ನುವುದು ದೇಹದೊಳಗಿನ ಒಂದು ರಾಸಾಯನ ಅಥವಾ ಸಂಯೋಜನೆ. ಹಾಗೆಯೇ ಪ್ರತಿಯೊಂದು ಭಾವನೆಯೂ ಒಂದು ರಾಸಾಯನಿಕ ಸಂಯೋಜನೆಯೇ. ಯಾವುದೇ ಭಾವನೆಯಾಗಲಿ, ಅದಕ್ಕನುಗುಣವಾಗಿ ಒಂದು ರಾಸಾಯನಿಕ ಪ್ರಕ್ರಿಯೆ ನಮ್ಮ ಶರೀರದಲ್ಲಿ ಆಗುತ್ತದೆ. ನಾವು ಶಾಂತಿಯಿಂದಿದ್ದರೆ, ಒಂದು ಶಾಂತಯುತವಾದ ರಸಾಯನ ನಮ್ಮಲ್ಲಿರುತ್ತದೆ. ಅಥವಾ ನಾವು ಅಂತಹ ಒಂದು ಸಂಯೋಜನೆಯನ್ನು ರೂಪಿಸಲು ಸಾಧ್ಯವಾದರೆ, ಸಹಜವಾಗಿ ನಾವು ನೆಮ್ಮದಿಯಾಗಿ ಇರುತ್ತೇವೆ. ಯೋಗದಲ್ಲಿ ನಾವು ಎರಡೂ ರೀತಿಯಲ್ಲಿ ಇದನ್ನು ಮಾಡುತ್ತೇವೆ.

ಸರಿಯಾದ ಅಭ್ಯಾಸಗಳಿಂದ, ನಾವು ನಮ್ಮ ಆಂತರಿಕ ರಾಸಾಯನಿಕ ಪ್ರಕ್ರಿಯೆಗಳಲ್ಲಿ ಒಂದು ನಿರ್ದಿಷ್ಟ ಹಂತದ ಬದಲಾವಣೆಗಳನ್ನು ತರಬಹುದು. ಆಗ ಯಾವುದೇ ಸನ್ನಿವೇಶವಾದರೂ ನಾವು ಯಾವಾಗಲೂ ಶಾಂತವಾಗಿರಬಹುದು. ಆದರೆ, ಈಗ ನಿಮ್ಮ ಶಾಂತಿಯು ಬಾಹ್ಯ ಸನ್ನಿವೇಶಗಳ ಗುಲಾಮನಾಗಿದೆ. ಸಂದರ್ಭಗಳು ನಿಮಗನುಕೂಲಕರವಾಗಿದ್ದರೆ, ನೀವು ಶಾಂತವಾಗಿರುತ್ತೀರಿ. ಹಾಗಲ್ಲದೆ ವ್ಯತಿರಿಕ್ತ ಸನ್ನಿವೇಶವಾದರೆ, ಆಗ ಸಮಸ್ಯೆಯಾಗುತ್ತದೆ. ಬಾಹ್ಯ ಸನ್ನಿವೇಶಗಳು ಏನೇ ಇದ್ದರೂ, ನಿಮ್ಮ ಶಾಂತಿಯು ಬಾಹ್ಯ ಸನ್ನಿವೇಶದ ಅಡಿಯಾಳಾಗದೆ, ನಿಮ್ಮ ಆಂತರಿಕ ಶಾಂತಿಯು ಒಂದೇ ಸಮನಾಗಿದ್ದಾಗ, ಅದನ್ನು ಯೋಗ ಎನ್ನುತ್ತೇವೆ. ಯೋಗ ಎಂದರೆ ಸರಿಯಾದ ರೀತಿಯ ರಾಸಾಯನಿಕ ಸಂಯೋಜನೆಯ ವಿಜ್ಞಾನ ಎಂದು ಹೇಳಬಹುದು.

ಸರಿಯಾದ ಸಂಯೋಜನೆ ಇದ್ದರೆ, ಸಂತೋಷ, ನೆಮ್ಮದಿಯಷ್ಟೇ ಇರುವುದು–ಬೇರೆ ಯಾವುದಕ್ಕೂ ಅವಕಾಶವೇ ಇರುವುದಿಲ್ಲ. ಸಂತೋಷ, ನೆಮ್ಮದಿಯಿಂದ ಇರುವುದು ಬದುಕಿನ ಕೊನೆಯಲ್ಲ, ಅದು ಬದುಕಿನ ಪ್ರಾರಂಭ. ನೀವು ನೆಮ್ಮದಿ, ಶಾಂತಿಯಿಂದ ಇಲ್ಲದೇ ನಿಮ್ಮ ಮಾನಸಿಕ ಒತ್ತಡಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದರೆ, ನೀವು ಬದುಕನ್ನೇ ಇನ್ನೂ ಪ್ರಾರಂಭಿಸಿಲ್ಲ ಎಂದು ಅರ್ಥ. ಆನಂದ ಮತ್ತು ನೆಮ್ಮದಿಗಳಿಂದ ಇರುವುದೇ ಮೂಲ ಅಗತ್ಯ. ನಿಮ್ಮ ಊಟ–ತಿಂಡಿಗಳ ಸವಿಯನ್ನು ಅನುಭವಿಸಬೇಕೆಂದರೂ ನೀವು ಶಾಂತಿಯಿಂದ ಇರಬೇಕು. ನೀವು ಪ್ರಕ್ಷುಬ್ಧರಾಗಿದ್ದರೆ, ನಿಮ್ಮ ಆಹಾರದ ಸವಿಯನ್ನು ಅನುಭವಿಸಲು ಸಾಧ್ಯವೇ? ಖಂಡಿತ ಇಲ್ಲ. ನೆಮ್ಮದಿಯಿಂದ ಇರುವುದು ಆರಂಭ. ಆದರೆ, ಇಂದಿನ ದಿನಗಳಲ್ಲಿ ಜನರು ನೆಮ್ಮದಿಯಿಂದ ಇರುವುದೇ ಬದುಕಿನ ಮಹೋನ್ನತ ಆಯಾಮ ಎಂದು ಸಾರುತ್ತಿದ್ದಾರೆ.

ದುರದೃಷ್ಟವೆಂದರೆ, ಪ್ರಪಂಚದ ಬಹುತೇಕ ಜನರು ನೆಮ್ಮದಿಯನ್ನು ಬದುಕಿನ ಆರಂಭವಾಗಿ ಪರಿಗಣಿಸದೆ, ಕೇವಲ ಅದೇ ಅಂತಿಮವೆನ್ನುವವರೇ ಹೆಚ್ಚಾಗಿರುವುದು. ಆಧ್ಯಾತ್ಮಿಕ ವಲಯವು ಜನರಿಗೆ ನಿಮ್ಮದಿಯಿಂದ ಇರುವುದೇ ಅಂತಿಮ ಸ್ಥರವೆಂದು ಹೇಳುತ್ತಿರುವುದು ಬಹಳ ಶೋಚನೀಯವಾಗಿದೆ. ನೆಮ್ಮದಿಯಿಂದ ಇರುವುದು ಮೂಲಭೂತ ವಿಷಯ. ಇದೇನೂ ದೇವರೋ ಅಥವಾ ಜ್ಞಾನೋದಯವೇನೂ ಅಲ್ಲ.



> ಸರಿಯಾದ ಸಂಯೋಜನೆ ಇದ್ದರೆ, ಸಂತೋಷ, ನೆಮ್ಮದಿಯಷ್ಟೇ ಇರುವುದು–ಬೇರೆ ಯಾವುದಕ್ಕೂ ಅವಕಾಶವೇ ಇರುವುದಿಲ್ಲ. ಸಂತೋಷ, ನೆಮ್ಮದಿಯಿಂದ ಇರುವುದು ಬದುಕಿನ ಕೊನೆಯಲ್ಲ, ಅದು ಬದುಕಿನ ಪ್ರಾರಂಭ. ನೀವು ನೆಮ್ಮದಿ, ಶಾಂತಿಯಿಂದ ಇಲ್ಲದೇ ನಿಮ್ಮ ಮಾನಸಿಕ ಒತ್ತಡಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದರೆ, ನೀವು ಬದುಕನ್ನೇ ಇನ್ನೂ ಪ್ರಾರಂಭಿಸಿಲ್ಲ ಎಂದು ಅರ್ಥ.

ಮನುವಾದಿ ವ್ಯವಸ್ಥೆ ಜನರ ವಿಭಜಿಸಿದರೆ; ಬುದ್ಧ, ಬಸವ, ಅಂಬೇಡ್ಕರ್ ಸಮಾನತೆಗೆ ಶ್ರಮಿಸಿದರು

ಸಂಸ್ಕೃತಿ ಚಿಂತಕ ರಂಜಾನ್ ದರ್ಗಾ ಅಭಿಮತ



ಮೈಸೂರು ವಿವಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಡೆದ 'ಸಮತಾ ಉತ್ಸವ' ಕಾರ್ಯಕ್ರಮವನ್ನು ಡಾ.ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಸಂಸ್ಕೃತಿ ಚಿಂತಕ ರಂಜಾನ್ ದರ್ಗಾ ಚಾಲನೆ ನೀಡಿದರು.

ಮೈಸೂರು, ಮೇ 14(ಎಂಟಿವೈ)– ಮನುವಾದಿ ವ್ಯವಸ್ಥೆಯು ಜಾತಿ, ವರ್ಣ ಮತ್ತು ಕರ್ಮಸಿದ್ಧಾಂತಗಳ ಹೆಸರಿನಲ್ಲಿ ಜನರನ್ನು ವಿಭಜಿಸಿ ಮಾಡುತ್ತಿದ್ದ ಅನ್ಯಾಯದ ವಿರುದ್ಧ ಚಿಕಿತ್ಸೆ ನೀಡಲು ಬುದ್ಧ, ಬಸವಣ್ಣ ಮತ್ತು ಅಂಬೇಡ್ಕರ್ ಅವರು ಸಮಾನತೆಗಾಗಿ ಹೋರಾಡಿದರು ಎಂದು ಸಂಸ್ಕೃತಿ ಚಿಂತಕ ರಂಜಾನ್ ದರ್ಗಾ ತಿಳಿಸಿದ್ದಾರೆ.

ಮೈಸೂರು ಮಾನಸ ಗಂಗೋತ್ರಿಯಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಷನ್ ಆಫ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ಸಂಸ್ಥೆ ವತಿಯಿಂದ ಆಯೋಜಿಸಿದ್ದ 'ಸಮತಾ ಉತ್ಸವ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜಾತಿ, ಲಿಂಗ, ಧರ್ಮ ಹಾಗೂ ವರ್ಗ ತಾರತಮ್ಯಗಳ ಸಮಾಜದಿಂದ ಬುಡ ಸಹಿತ ಕಿತ್ತುಹಾಕುವವರೆಗೂ ನಾವು ನಿಜವಾದ ಅರ್ಥದಲ್ಲಿ ಮನುಷ್ಯರಾಗುವುದಿಲ್ಲ. ಸಮಾನತೆ ಮತ್ತು ಪ್ರಜ್ಞೆಯ ಬೆಳಕು ಹರಡಲು ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ಅವರು ನಡೆಸಿದ ಹೋರಾಟಗಳು ಕೇವಲ ಒಂದು ಕಾಲಘಟ್ಟಕ್ಕೆ ಸೀಮಿತವಲ್ಲ. ಮೂರು ಸಾವಿರ ವರ್ಷಗಳ ಸಾಮಾಜಿಕ ಶೋಷಣೆ, ಅಸಮಾನತೆ ಮತ್ತು ಹೋರಾಟದ ಇತಿಹಾಸವನ್ನು ಅರಿತಾಗ ಮಾತ್ರ ಅಂಬೇಡ್ಕರ್ ಅವರ ಮಹತ್ವ ಅರ್ಥವಾಗುತ್ತದೆ ಎಂದು ಹೇಳಿದರು.

ಆತ್ಮಗೌರವ ತುಂಬಿದರು: ಬಸವಣ್ಣ ತಮ್ಮ ವಚನಗಳಲ್ಲಿ ಲಿಂಗ ತಾರತಮ್ಯ, ಜಾತಿ ತಾರತಮ್ಯ, ಧರ್ಮ ತಾರತಮ್ಯ ಮತ್ತು ಸಾಮಾಜಿಕ ಅಸಮಾನತೆಗಳ ವಿರುದ್ಧ ಧ್ವನಿ ಎತ್ತಿದರು. ಈ ತಾರತಮ್ಯಗಳು ಹೋಗುವವರೆಗೂ ನಾವು ನಿಜವಾದ ಮನುಷ್ಯರಾಗುವುದಿಲ್ಲ ಎಂಬ ಸಂದೇಶ ಸಾರಿದರು. ಇಂದಿನ ಯುವಪೀಳಿಗೆಗೆ ಬುದ್ಧ, ಬಸವಣ್ಣ ಮತ್ತು ಡಾ.ಅಂಬೇಡ್ಕರ್ ಅವರ ಚಿಂತನೆಗಳ ಅರಿವು ಅಗತ್ಯವಾಗಿದೆ. ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳಿಗೆ ಜ್ಞಾನ ಮತ್ತು ಆತ್ಮಗೌರವ ತುಂಬಿದರು ಎಂದು ತಿಳಿಸಿದರು.

ದೇಶದ ಇತಿಹಾಸವು ಕೇವಲ ರಾಜರು ಮತ್ತು ಯುದ್ಧಗಳ ಇತಿಹಾಸವಲ್ಲ. ಅದು ಸಮಾನತೆಗಾಗಿ ನಡೆದ ದೀರ್ಘ ಹೋರಾಟಗಳ ಇತಿಹಾಸವಾಗಿದೆ. ಜಗತ್ತಿನ ಯಾವುದೇ ದೇಶದಲ್ಲಿಯೂ ಇಷ್ಟೊಂದು ದೀರ್ಘಕಾಲದ ಸಾಮಾಜಿಕ ಹೋರಾಟ ನಡೆದಿಲ್ಲ ಎಂದರು. ಬುದ್ಧ ಸಂಘದಲ್ಲಿ ಮುಂದಿನ ನಾಯಕನನ್ನು ತಾನೇ ಆಯ್ಕೆ ಮಾಡುವುದಿಲ್ಲ, ಜನರೇ ನಿರ್ಧರಿಸಬೇಕು ಎಂದು ಹೇಳುವ ಮೂಲಕ ಜನತಾಂತ್ರಿಕ ಮೌಲ್ಯಗಳನ್ನು ಬಿತ್ತಿದರು. ಬಸವಣ್ಣ ಮಹಿಳೆಯರು, ದಲಿತರು ಮತ್ತು ಶೋಷಿತ ವರ್ಗಗಳಿಗೆ ಶಿಕ್ಷಣ ಹಾಗೂ ಸಂಘಟನೆಯ ಮಹತ್ವವನ್ನು ಸಾರಿದರು. ಯೂರೋಪಿನಲ್ಲಿ ಕಾರ್ಮಿಕ ಸಂಘಟನೆಗಳೇ ರೂಪುಗೊಳ್ಳದ ಕಾಲದಲ್ಲೇ ಬಸವಣ್ಣ ದುಡಿಯುವ ಜನರನ್ನು ಸಂಘಟಿಸಿ ಸಮಾನತೆಯ ಸಮಾಜ ನಿರ್ಮಾಣಕ್ಕೆ ದಾರಿ ತೋರಿದರು. ಜಗತ್ತಿನಲ್ಲಿ ನಡೆಯುವ ಯುದ್ಧಗಳು ಮಧ್ಯಪ್ರಾಚ್ಯದಲ್ಲಿದ್ದರೂ ಅದರ ಪರಿಣಾಮ ನಮ್ಮ ಅಡಿಗೆ ಮನೆಗಳವರೆಗೂ ತಲುಪುತ್ತಿದೆ. ಹೀಗಾಗಿ ವಿಶ್ವದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಭ್ರಾತೃತ್ವ ನೆಲೆಸಬೇಕು ಎಂದು ಸಲಹೆ ನೀಡಿದರು. ಈ ವೇಳೆ ಕಾರ್ಯಕ್ರಮದಲ್ಲಿ ಪ್ರೊ. ಎಸ್.ಜೆ.ಮಂಜುನಾಥ್, ನಿವೃತ್ತ ಪ್ರಾಧ್ಯಾಪಕ ಡಿ. ಆನಂದ್, ಬಿವಿಸ್ಸ್ ಅಧ್ಯಕ್ಷ ಪ್ರೊ. ಆರ್.ಮಹೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನೀಟ್–ಯುಜಿ ರದ್ದು ಕೇಂದ್ರದ ಆಡಳಿತ ವೈಫಲ್ಯ

ಸಿಎಂ ಸಿದ್ದರಾಮಯ್ಯ ಆರೋಪ



ಬೆಂಗಳೂರು, ಮೇ 14(ಕೆಎಂಶಿ)– ದೇಶಾದ್ಯಂತ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಬರೆದಿದ್ದ 'ನೀಟ್–ಯುಜಿ 2026' ರದ್ದುಗೊಳಿಸಿರುವುದು ಕೇಂದ್ರ ಸರ್ಕಾರದ ಆಡಳಿತಾತ್ಮಕ ವೈಫಲ್ಯ ವಲ್ಲದೆ, ದೇಶದ ಯುವ ಜನತೆಗೆ ಬಗೆದ ದ್ರೋಹವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಕರ್ನಾಟಕದ ಒಂದು ಲಕ್ಷ ಸೇರಿದಂತೆ ದೇಶದ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ತಿಂಗಳುಗಟ್ಟಲೆ ಶ್ರಮಪಟ್ಟು ನೀಟ್ ಪರೀಕ್ಷೆ ಬರೆದಿದ್ದರು. ಪೋಷಕರು ತಮ್ಮ ಮಕ್ಕಳ ತರಬೇತಿಗೆ ಸಾಕಷ್ಟು ಹಣ ವೆಚ್ಚ ಮಾಡಿದ್ದರು, ಪರೀಕ್ಷೆ ರದ್ದುಪಡಿಸುವ ಕೇಂದ್ರದ ನಿರ್ಧಾರದಿಂದ ವಿದ್ಯಾರ್ಥಿ ಸಮುದಾಯವನ್ನು ಅನಿಶ್ಚಿತತೆ ಮತ್ತು ಸಂಕಷ್ಟಕ್ಕೆ ತಳ್ಳಲಾಗಿದೆ ಎಂದಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ನೀಟ್ ಪರೀಕ್ಷೆಯಿಂದ ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ, ಶಾಲಾ ಶಿಕ್ಷಣ ವ್ಯವಸ್ಥೆ ದುರ್ಬಲಗೊಳ್ಳಲಿದೆ. ಅಲ್ಲದೆ, ವೈದ್ಯಕೀಯ ಶಿಕ್ಷಣ ಕೋರ್ಸ್‌ಗಳ ದಾಖಲಾತಿ ವಿಚಾರದಲ್ಲಿ ರಾಜ್ಯಗಳ ಅಧಿಕಾರ ಕಸಿದುಕೊಳ್ಳಲಿದೆ ಎಂಬ ಆಕ್ಷೇಪ ವ್ಯಕ್ತಪಡಿಸಿ 2024ರಲ್ಲೇ ರಾಜ್ಯ ಸರ್ಕಾರ ಸದನ ನಿರ್ಣಯ ಕೈಗೊಂಡಿತ್ತು ಎಂದಿದ್ದಾರೆ.

ಅಂದಿನ ನಮ್ಮ ಕಾಳಜಿ ಎಷ್ಟು ಸತ್ಯ ಮತ್ತು ಅನಿವಾರ್ಯವಾಗಿತ್ತು ಎಂಬುದನ್ನು ಇಂದಿನ ಪರೀಕ್ಷಾ ರದ್ದತಿ ನಿರ್ಧಾರ ಸಾಬೀತು ಪಡಿಸಿದೆ. ನೇಮಕಾತಿ ಪರೀಕ್ಷೆಗಳಿಂದ ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳವರೆಗೆ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳು ಪ್ರತಿಭಾವಂತ ವಿದ್ಯಾರ್ಥಿಗಳ ಹಿತರಕ್ಷಿಸುವಲ್ಲಿ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ವಿಫಲವಾಗಿದೆ. ವೈಫಲ್ಯದ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಕೂಡಲೇ ರಾಜೀನಾಮೆ ನೀಡಬೇಕು.

ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದ ಪಾರದರ್ಶಕ ಹಾಗೂ ಕಾಲಮಿತಿಯೊಳಗೆ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು. ಹೊಸ ಪರೀಕ್ಷಾ ವೇಳಾಪಟ್ಟಿ ಶೀಘ್ರ ಪ್ರಕಟಿಸಬೇಕು. ಪ್ರವೇಶ ಪರೀಕ್ಷೆ ನಡೆಸುವ ರಾಜ್ಯಗಳ ಅಧಿಕಾರ ಪುನರ್ ಸ್ಥಾಪಿಸಬೇಕು. ಪ್ರಶ್ನೆಪತ್ರಿಕೆ ಸೋರಿಕೆಯಿಂದ ತೊಂದರೆಗೀಡಾದ ವಿದ್ಯಾರ್ಥಿ ಮತ್ತು ಪೋಷಕರ ಜೊತೆ ರಾಜ್ಯ ಸರ್ಕಾರ ಬೆಂಬಲಕ್ಕೆ ನಿಲ್ಲುತ್ತದೆ, ವಿದ್ಯಾರ್ಥಿಗಳ ಪರಿಶ್ರಮಕ್ಕೆ ತಕ್ಕ ಫಲ ಸಿಗುವಂತೆ ಮಾಡುವುದು ಮತ್ತು ಅವರ ಭವಿಷ್ಯ ರಕ್ಷಿಸುವುದು ನಮ್ಮ ಕರ್ತವ್ಯ ಎಂದಿದ್ದಾರೆ.

ಇಂದು ದಸಂಸ ವತಿಯಿಂದ ವಿಚಾರ ಸಂಕಿರಣ

ಮೈಸೂರು: ಡಾ.ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಮೈಸೂರು ಜಿಲ್ಲಾ ದಲಿತ ಸಂಘರ್ಷ ಸಮಿತಿ ವತಿಯಿಂದ 'ಬಹುತ್ವ ಭಾರತ ಮತ್ತು ಸಂವಿಧಾನವನ್ನು ಅಸ್ಥಿರಗೊಳಿಸುತ್ತಿರುವ ಕೋಮುವಾದಿ ಶಕ್ತಿಗಳು' ವಿಚಾರ ಸಂಕಿರಣವನ್ನು ಮೇ.15ರಂದು ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ. ದಸಂಸ ಸಂಸ್ಥಾಪಕ ಸಂಯೋಜಕ ವಿ.ನಾಗರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ.

ನವನಗರ ನಿರ್ಮಾಣದ ಹೆಸರಲ್ಲಿ ಕಾಂಗ್ರೆಸ್ ಸರ್ಕಾರದ ರಿಯಲ್ ಎಸ್ಟೇಟ್ ದಂಧೆ!

● ಕೇಂದ್ರ ಸಚಿವ ಕುಮಾರಸ್ವಾಮಿ ಗಂಭೀರ ಆರೋಪ ● ಬಿಡದಿ ಟೌನ್‌ಶಿಪ್ ಕೈ ಬಿಡಲು ಆಗ್ರಹ

ಬೆಂಗಳೂರು, ಮೇ 14(ಕೆಎಂಶಿ)–ರಾಜಧಾನಿಗೆ ಪರ್ಯಾಯವಾಗಿ ಬಿಡದಿ ಬಳಿ ನವನಗರ ನಿರ್ಮಾಣ ಹೆಸರಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ರಿಯಲ್ ಎಸ್ಟೇಟ್ ದಂಧೆಗೆ ಇಳಿದಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಗುರುತರ ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ವಿವಿಧ ಅಭಿವೃದ್ಧಿ ಹೆಸರಿನಲ್ಲಿ ರೈತರಿಂದ ಸ್ವಾಧೀನಪಡಿಸಿಕೊಂಡಿರುವ ಭೂಮಿ ಕುರಿತು ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಸಿಎಂ ರಿಯಲ್ ಎಸ್ಟೇಟ್ ದಲ್ಲಾಳಿ ಆಗಬಾರದು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪಿಸದ ಅವರು, ಯಾವುದೋ ಒಬ್ಬ ವ್ಯಕ್ತಿಯ ದಾಕ್ಷಿಣ್ಯಕ್ಕೆ ಬಲಿಯಾಗಿ ಮುಖ್ಯಮಂತ್ರಿ ರಿಯಲ್ ಎಸ್ಟೇಟ್ ದಲ್ಲಾಳಿ ಆಗಬಾರದು ಎಂದು ಕಿವಿಮಾತು ಹೇಳಿದರು. ಆ ವ್ಯಕ್ತಿ ಹೇಳಿದಂತೆ ಕೇಳುವ ಮೂಲಕ ಇನ್ನೆರಡು ವರ್ಷ ಕುರ್ಚಿ ಉಳಿಸಿಕೊಳ್ಳಲು ಸಿದ್ದರಾಮಯ್ಯ ಯತ್ನಿಸುತ್ತಿದ್ದಾರೆ. ಕುರ್ಚಿಗಾಗಿ ಸಿದ್ದರಾಮಯ್ಯ ತಮ್ಮ ಸಹಿಯನ್ನು ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಅಧಿಕಾರದ ಕೊನೆಗಾಲದಲ್ಲಿ ಹೆಸರು ಕೆಡಿಸಿಕೊಳ್ಳದೆ, ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕು ಎಂದರು.

ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನಗರದ ಹೊರವಲಯದಲ್ಲಿ ಐದು ಟೌನ್‌ಶಿಪ್‌ಗಳ ನಿರ್ಮಾಣಕ್ಕೆ ಮುಂದಾಗಿದ್ದೆ, ಆಗ ನನ್ನ ಸರ್ಕಾರಕ್ಕೆ ಬೆಂಬಲ ನೀಡಿದ್ದ ಕಾಂಗ್ರೆಸ್ ವಿರೋಧಿಸಿತ್ತು. ಆಗ ಕಾಂಗ್ರೆಸ್‌ನ ಎಚ್.ಕೆ.ಪಾಟೀಲ್ ಅಧ್ಯಕ್ಷತೆಯಲ್ಲಿ ಸತ್ಯಶೋಧನಾ ಸಮಿತಿ ರಚಿಸಲಾಯಿತು. ಆ ವರದಿಯಲ್ಲಿ ನವನಗರಗಳ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಲಾಗಿತ್ತು.



ರೈತರಿಗೆ ಬೆದರಿಕೆ: ಬಿಡದಿ ಬಳಿ ಟೌನ್‌ಶಿಪ್ ನಿರ್ಮಾಣ ಸಂಬಂಧ ಸ್ಥಳೀಯ ರೈತರ ಜೊತೆ ಎರಡು–ಮೂರು ಸಭೆಗಳನ್ನೂ ಮಾಡಿದ್ದೆ, ವಿರೋಧ ವ್ಯಕ್ತವಾದಾಗ ಯೋಜನೆಯನ್ನು ಕೈಬಿಟ್ಟಿದ್ದೆ ಎಂದರು. ಆದರೆ, ಇಂದು ಉಪಮುಖ್ಯಮಂತ್ರಿ, ಬಿಡದಿ ರೈತರು ಕೃಷಿಕರೇ ಅಲ್ಲ ಎಂಬುದಾಗಿ ಒಮ್ಮೆ ಹೇಳಿದರೆ, ಮತ್ತೊಮ್ಮೆ ಶೇಕಡ 80ರಷ್ಟು ರೈತರು ನವನಗರ ನಿರ್ಮಾಣಕ್ಕೆ ಅನುಮತಿ ಕೊಟ್ಟಿದ್ದಾರೆ ಎನ್ನುತ್ತಾರೆ. ರೈತರನ್ನು ಬೆದರಿಸಿ ಭೂಸ್ವಾಧೀನಕ್ಕೆ ಶಿವಕುಮಾರ್ ಕೈಹಾಕಿದ್ದಾರೆ, ಈ ಯೋಜನೆಯಿಂದ ಸಾವಿರಾರು ಎಕರೆ ಕಬಳಿಕೆ ಆಗುತ್ತದೆ. ವಶಪಡಿಸಿಕೊಂಡ ಭೂಮಿಯನ್ನು ಯಾರ್‍ಯಾರಿಗೆ ಹಂಚಲು ಹೊರಟಿದ್ದಾರೋ ತಿಳಿಯದು. ಎಂಟು ಹಳ್ಳಿಗಳ ವ್ಯಾಪ್ತಿಯಲ್ಲಿ 2,320 ಎಕರೆ ಜಮೀನಿದೆ ಎಂದು ಉಲ್ಲೇಖಿಸಲಾಗಿತ್ತು. ಆದರೆ, ಅಧಿಸೂಚನೆಯಲ್ಲಿ 750 ಎಕರೆ ಎಂದಷ್ಟೇ ತಿಳಿಸಲಾಗಿದೆ ಉಳಿದ ಜಮೀನು ಯಾರ ಹೆಸರಿಗೆ ಹೋಯಿತು ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಶಾಸಕರು, ಅಧಿಕಾರಿಗಳು ಈ ಭೂಮಿಯನ್ನು ತಮ್ಮ ಹೆಸರಿಗೆ ಮಾಡಿಕೊಂಡು ಸರ್ಕಾರಿ ಹಣ ಲೂಟಿಗೆ ಹೊರಟಿದ್ದಾರೆ ಎಂದು ಆರೋಪಿಸಿದರು. 'ಎ' ಖಾತಾ ಮತ್ತು 'ಬಿ' ಖಾತಾ ಹೆಸರಿನಲ್ಲಿ ಬೆಂಗಳೂರು ಉಸ್ತುವಾರಿ ಸಚಿವರು ಹಣ ಹೊಡೆಯಲು ಹೊರಟಿದ್ದಾರೆ. ಅದಕ್ಕೆ ನಾಗರಿಕರು ಬಲಿಯಾಗಬಾರದು ಎಂದರು.

ದಂಧೆ ಕೋರ ಮಾತಿನಂತೆ ಡಿಸಿ ವರ್ತಿಸುತ್ತಿದ್ದಾರೆ: ರೈತರು ಭೂಮಿ ಬಿಟ್ಟು ಕೊಡಲು ತಯಾರಿಲ್ಲ. ಭೂಮಿ ಹೇಗೆ ವಶಪಡಿಸಿಕೊಳ್ಳುತ್ತಿರೋ ನೋಡೋಣ. ರೈತರ ಭೂಮಿಯಲ್ಲಿ ರಿಯಲ್ ಎಸ್ಟೇಟ್ ದಂಧೆ ಮಾಡುವ ವ್ಯಕ್ತಿಗಳು ಹೇಳಿದಂತೆ ಜಿಲ್ಲಾಧಿಕಾರಿ ಕುಣಿಯುತ್ತಿದ್ದಾರೆ. ಇವರು ಒಂದು ಗ್ರಾಮಕ್ಕೆ ಹೋಗಿ ರೈತರ ಕಷ್ಟ, ಸುಖ ಕೇಳಿಲ್ಲ, ಸಭೆ ನಡೆಸಿಲ್ಲ. ನನ್ನ ನಂಬರ್‌ನಿಂದ ಫೋನ್ ಹೋದರೆ ಫೋನೇ ತೆಗೆಯಲ್ಲ. ಏನೇನು ಮಾಡುತ್ತಿದ್ದಾರೆ ಎಂಬುದನ್ನು ನಾನು ನೋಡುತ್ತಿದ್ದೇನೆ. ಸಮಯ ಬಂದಾಗ ಉತ್ತರ ಕೊಡುತ್ತೇನೆ.

ಸಂಪುಟ ಸಭೆಯಲ್ಲಿ ಬೇಕಾಬಿಟ್ಟಿ ನಿರ್ಧಾರಗಳನ್ನು ಕೈಗೊಳ್ಳುವುದಕ್ಕೆ ಕ್ಯಾಬಿನೆಟ್ ಎನ್ನುತ್ತೀರಾ. ಅದು ಹೆಸರಿಗೆ ಮಾತ್ರ ಅಲ್ಲಿ ಹೇಳೋರು ಕೇಳೋರು ಯಾರೂ ಇಲ್ಲ. ಕ್ಯಾಬಿನೆಟ್ ಅಂದ್ರೆ ಎಲ್ಲವನ್ನೂ ಹರಾಜು ಹಾಕುವ ಮನೆಯಂತಾಗಿದೆ ಎಂದು ಲೇವಡಿ ಮಾಡಿದರು. ಕುಮಾರಸ್ವಾಮಿಗೆ ಲಾಟರಿ ಹೊಡೆಯುತ್ತದೆ ಅಂತಾರೆ. ಇಂತಹ ಲಾಟರಿ ನನಗೆ ಬೇಡ, ಇದರಲ್ಲಿ ಯಾರ ಹಿತಾಸಕ್ತಿ ಇದೆ. ರೈತರ ಹಿತಾಸಕ್ತಿ ಇದೆಯಾ, ಯೋಜನೆಯನ್ನು ಇಲ್ಲಿಗೆ ನಿಲ್ಲಿಸಬೇಕು. ಅಧಿಕೃತವಾಗಿ ರಿಯಲ್ ಎಸ್ಟೇಟ್ ಮಾಡಲು ಹೊರಟಿರುವುದು ಸಂವಿಧಾನಬಾಹಿರ ನಡೆಯಾಗಿದೆ. ನೀರಾವರಿ, ತೆಂಗು, ತರಕಾರಿ ಸೇರಿದಂತೆ ಎಲ್ಲ ಕೃಷಿ ಚಟುವಟಿಕೆ ನಡೆಯುತ್ತಿರುವ ಜಮೀನು ವಶಪಡಿಸಿಕೊಂಡು ಏನು ಮಾಡಲು ಹೊರಟಿದ್ದೀರಿ. ಏನೆಲ್ಲಾ ಪಾಪದ ಕೆಲಸಗಳು ನಡೆಯುತ್ತಿವೆ ಎಂಬುದು ಮುಖ್ಯಮಂತ್ರಿ ಅವರಿಗೆ ಗೊತ್ತಿದೆ. ಆದರೂ ಸುಮ್ಮನಿದ್ದಾರೆ.

> ರಿಯಲ್ ಎಸ್ಟೇಟ್ ಮಾಡುವುದು ರಾಜ್ಯ ಸರ್ಕಾರದ ಕೆಲಸವಲ್ಲ. ರೈತರಿಗೆ ಬೇಡವಾಗಿರುವ ಬಿಡದಿ ಟೌನ್‌ಶಿಪ್ ಯೋಜನೆ ಕೂಡಲೇ ಕೈಬಿಡಬೇಕು. ರೈತರು ಜಮೀನು ನೀಡಲ್ಲವೆಂದು ಬೀದಿಯಲ್ಲಿ ಕುಳಿತಿದ್ದಾರೆ. ರಾಜ್ಯ ಸರ್ಕಾರದಲ್ಲಿನ ರಿಯಲ್ ಎಸ್ಟೇಟ್ ದಂಧೆಕೋರರು ಭೂಮಿ ಕಿತ್ತುಕೊಂಡು ವ್ಯವಹಾರ ಮಾಡಿಯೇ ಸಿದ್ಧ ಎಂದು ಹೊರಟಿದ್ದಾರೆ. ಧಮ್ಕಿ ಹಾಕಿ ಕಿತ್ತುಕೊಳ್ಳುವುದಕ್ಕೆ ಇದು ಯಾರಪ್ಪನ ಭೂಮಿ. ಸರ್ಕಾರ ಬ್ರೋಕರ್ ಕೆಲಸ ಮಾಡಲು ಹೊರಟಿದೆ, ಬಡ ರೈತರಿಂದ ಜಮೀನು ಕಿತ್ತುಕೊಂಡು ರಿಯಲ್ ಎಸ್ಟೇಟ್ ಮಾಫಿಯಾ ಮಾಡಲು ಹೊರಟಿದೆ. ಚದರ ಅಡಿ ವ್ಯವಹಾರದಲ್ಲಿ ದಂಧೆ ಮಾಡಲು ಮುಂದಾಗಿದೆ. ಇದರ ಬ್ರೋಕರ್‌ಗಿರಿಯನ್ನು ಸ್ವತಃ ಸಿದ್ದರಾಮಯ್ಯ ವಹಿಸಿಕೊಂಡಿದ್ದಾರೆ. – **ಹೆಚ್.ಡಿ.ಕುಮಾರಸ್ವಾಮಿ**

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನೀಟ್ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಆರ್‌ಜೆಡಿ ನಾಯಕನ ಅರೆಸ್ಟ್, ಬಿಜೆಪಿ ಕಿಡಿ

ನವದೆಹಲಿ, ಮೇ.14–ನೀಟ್ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಪ್ರಮುಖ ಮಾಹಿತಿ ಬಹಿರಂಗವಾಗಿದೆ. ನೀಟ್ ಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ದೆಹಲಿ ಅಪರಾಧ ವಿಭಾಗದ ತಂಡವು ನಾಲ್ವರನ್ನು ಬಂಧಿಸಿದ್ದು, ಅವರಲ್ಲಿ ಒಬ್ಬರು ಆರ್‌ಜೆಡಿ ನಾಯಕ ಸಂತೋಷ್ ಕುಮಾರ್ ಜೈಸ್ವಾಲ್ ಎಂದು ಹೇಳಲಾಗುತ್ತಿದೆ.


ಸಂತೋಷ್

ವೈದ್ಯಕೀಯ ಪ್ರವೇಶ ಹಗರಣದಲ್ಲಿ ಜೈಸ್ವಾಲ್ ಅವರ ಸಂಬಂಧ ಬಿಹಾರ ರಾಜಕೀಯವನ್ನು ಬಿಸಿ ಮಾಡಿದೆ. ಬಿಜೆಪಿ ನಾಯಕರು ಈಗ ತೇಜಸ್ವಿ ಯಾದವ್ ಮತ್ತು ಅವರ ಪಕ್ಷವಾದ ಆರ್‌ಜೆಡಿಯನ್ನು ತೀವ್ರವಾಗಿ ಗುರಿಯಾಗಿಸಿಕೊಂಡಿದ್ದಾರೆ.

ಆರ್‌ಜೆಡಿ ನಾಯಕ ಸಂತೋಷ್ ಕುಮಾರ್ ಜೈಸ್ವಾಲ್ ಸೇರಿದಂತೆ ನಾಲ್ವರನ್ನು ದೆಹಲಿ ಪೊಲೀಸರು ಬಂಧಿಸಿದ ನಂತರ, ಬಿಜೆಪಿ ತೇಜಸ್ವಿ ಯಾದವ್ ಮತ್ತು ಆರ್‌ಜೆಡಿ ಮೇಲೆ ನೇರವಾಗಿ ದಾಳಿ ಮಾಡಿದೆ. ತೇಜಸ್ವಿ ಯಾದವ್ ಅವರ ಪ್ರೀತಿಯ ಮಗ ನೀಟ್ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಮಾಸ್ಟರ್ ಮೈಂಡ್ ಆಗಿದ್ದಾನೆ ಎಂದು ಬಿಜೆಪಿ ವಕ್ತಾರ ಕುಂತಲ್ ಕೃಷ್ಣ ಹೇಳಿದ್ದಾರೆ. ವೈದ್ಯಕೀಯ ಕಾಲೇಜುಗಳಲ್ಲಿ ಎಂಬಿಬಿಎಸ್ ಸೀಟುಗಳನ್ನು ಪಡೆಯುವ ಹೆಸರಿನಲ್ಲಿ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳಿಗೆ ಲಕ್ಷಾಂತರ ರೂಪಾಯಿಗಳನ್ನು ವಂಚಿಸಿದ ಸಂಘಟಿತ ಗ್ಯಾಂಗ್ ಅನ್ನು ದೆಹಲಿ ಪೊಲೀಸರು ಭೇದಿಸಿದ್ದಾರೆ. ಈ ಪ್ರಕರಣದಲ್ಲಿ ಪೊಲೀಸರು ಆಪಾದಿತ ಕಿಂಗ್‌ಪಿನ್, ವೈದ್ಯ ಮತ್ತು ಆರ್‌ಜೆಡಿ ನಾಯಕ ಸೇರಿದಂತೆ ಒಟ್ಟು ನಾಲ್ವರನ್ನು ಬಂಧಿಸಿದ್ದಾರೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ: ಹಲವೆಡೆ ಸಿಬಿಐ ದಾಳಿ, ಮತ್ತಿಬ್ಬರ ಬಂಧನ

ನವದೆಹಲಿ: ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ತಂಡವು ಗುರುವಾರ ದೇಶದ ವಿವಿಧೆಡೆ ದಾಳಿ ನಡೆಸಿದ್ದು, ಮತ್ತಿಬ್ಬರನ್ನು ಬಂಧಿಸಿದೆ.

ಮೇ.3 ರಂದು ನಡೆದ ನೀಟ್ –ಯುಜಿ ಪ್ರಶ್ನೆ ಪತ್ರಿಕೆಯನ್ನು ಸೋರಿಕೆ ಕಾರಣಕ್ಕೆ ಎನ್‌ಟಿಎ ಮೇ.12 ರಂದು ರದ್ದುಪಡಿಸಿತ್ತು. ಈ ಪ್ರಕರಣದ ತನಿಖೆಯನ್ನು ಸಿಬಿಐ ನಡೆಸುತ್ತಿದೆ.

ಈ ಪ್ರಕರಣ ಸಂಬಂಧ ಸಿಬಿಐ ಅಧಿಕಾರಿಗಳು ಕಳೆದ 24 ಗಂಟೆಗಳಲ್ಲಿ ದೇಶಾದ್ಯಂತ 14 ಸ್ಥಳಗಳಲ್ಲಿ ಶೋಧ ನಡೆಸಿದ್ದು, ಇಬ್ಬರು ಆರೋಪಿಗಳನ್ನು ಬಂದಿಸಿದ್ದಾರೆ.

ಬಂಧಿತ ಆರೋಪಿಗಳನ್ನು ಪುಣೆ ಮನೀಶಾ ವಾಘ್ಮಾರೆ, ಅಹಲ್ಯಾನಗರ ಧನಂಜಯ್ ಲೋಖಂಡೆ ಎಂದು ಗುರುತಿಸಲಾಗಿದೆ. ಇದರೊಂದಿಗೆ ಈ ಪ್ರಕರಣಕ್ಕೆ ಬಂದಿತರ ಸಂಖ್ಯೆ 7ಕ್ಕೆ ಏರಿಕೆಯಾಗಿದೆ.

ಮೇ 20ರಂದು ದೇಶಾದ್ಯಂತ ಔಷಧ ಅಂಗಡಿ ಮಾಲೀಕರ ಮುಷ್ಕರ

ನವದೆಹಲಿ, ಮೇ 14– ಆನ್‌ಲೈನ್ ಔಷಧ ಮಾರಾಟ ವಿರೋಧಿಸಿ ದೇಶಾದ್ಯಂತ ಮೇ 20ರಂದು 12 ಲಕ್ಷಕ್ಕಿಂತ ಹೆಚ್ಚು ಔಷಧ ವ್ಯಾಪಾರಿಗಳು ಮತ್ತು ಔಷಧ ವಿತರಕರು ಮುಷ್ಕರ ನಡೆಸಲು ಸಜ್ಜಾಗಿದ್ದಾರೆ.

ಈ ಮುಷ್ಕರಕ್ಕೆ ಆಲ್ ಇಂಡಿಯಾ ಆರ್ಗನೈಸೇಶನ್ ಆಫ್ ಕೆಮಿಸ್ಟ್ಸ್ ಅಂಡ್ ಡ್ರಗ್ಗಿಸ್ಟ್ಸ್ ಕರೆ ನೀಡಿದ್ದು, ಈ ಒಂದು ದಿನದ ಬಂದ್‌ನಿಂದ ಅನೇಕ ರಾಜ್ಯಗಳಲ್ಲಿ ಸಾಮಾನ್ಯ ಔಷಧ ಖರೀದಿಗೆ ತೊಂದರೆ ಉಂಟಾಗುವ ಸಾಧ್ಯತೆ ಇದೆ.

ಆನ್ಲೈನ್ ಪ್ಲಾಟ್ ಫಾರ್ಮ್‌ಗಳ ವಿರುದ್ಧ ಆಕ್ರೋಶ : AIOCD (All India Organisation of Chemists and Druggists) ಪ್ರಕಾರ, ಸುಮಾರು 12.4 ಲಕ್ಷ ಔಷಧ ವ್ಯಾಪಾರಿಗಳು ಮತ್ತು ವಿತರಕರು ಆನ್‌ಲೈನ್ ಫಾರ್ಮಸಿ ವೇದಿಕೆಗಳ ಹೆಚ್ಚುತ್ತಿರುವ ಪ್ರಭಾವ ಮತ್ತು ನಿಯಂತ್ರಣವಿಲ್ಲದ ಕಾರ್ಯಾಚರಣೆ ವಿರುದ್ಧ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ.

ಸಂಘಟನೆಯು ಕೆಲವು ಆನ್‌ಲೈನ್ ಔಷಧ ವಿತರಣಾ ಕಂಪನಿಗಳು ವೈದ್ಯರ ಚೀಟಿ ಪರಿಶೀಲನಾ ನಿಯಮಗಳನ್ನು ಉಲ್ಲಂಘಿಸುತ್ತಿದ್ದು, ಪರಂಪರಾಗತ ಮೆಡಿಕಲ್ ಅಂಗಡಿಗಳಿಗೆ ಹಾನಿಯಾಗುವ ರೀತಿಯಲ್ಲಿ ಭಾರಿ ರಿಯಾಯಿತಿಗಳನ್ನು ನೀಡುತ್ತಿವೆ ಎಂದು ಆರೋಪಿಸಿದೆ.

ಅಧಿಸೂಚನೆ ಹಿಂಪಡೆತಕ್ಕೆ ಒತ್ತಾಯ : ಈ ಮುಷ್ಕರವು ಪರಂಪರಾಗತ ಮೆಡಿಕಲ್ ಅಂಗಡಿಗಳು ಮತ್ತು ವೇಗವಾಗಿ ವಿಸ್ತರಿಸುತ್ತಿರುವ ಡಿಜಿಟಲ್ ಫಾರ್ಮಸಿ ವೇದಿಕೆಗಳ ನಡುವಿನ ಸಂಘರ್ಷವನ್ನು ಮತ್ತಷ್ಟು ತೀವ್ರಗೊಳಿಸಿದೆ. ಕೋವಿಡ್–19 ಮಹಾಮಾರಿ ಸಮಯದಲ್ಲಿ ನೀಡಲಾದ ನಿಯಂತ್ರಣ ಸಡಿಲಿಕೆಯನ್ನು ಆನ್‌ಲೈನ್ ಔಷಧ ಮಾರಾಟಗಾರರು ದುರುಪಯೋಗಪಡಿಸಿಕೊಂಡು, ವೈದ್ಯರ ಚೀಟಿಗಳ ಕಠಿಣ ಭೌತಿಕ ಪರಿಶೀಲನೆಯಿಲ್ಲದೆ ಔಷಧ ವಿತರಣೆ ಮುಂದುವರಿಸುತ್ತಿದ್ದಾರೆ ಎಂದು AIOCD ಆರೋಪಿಸಿದೆ ಈ ಹಿನ್ನೆಲೆಯಲ್ಲಿ G.S.R. 220(E) ಮತ್ತು G.S.R. 817(E) ಅಧಿಸೂಚನೆಗಳನ್ನು ತಕ್ಷಣವೇ ಹಿಂಪಡೆಯುವಂತೆ ಸಂಘಟನೆ ಒತ್ತಾಯಿಸಿದೆ

ಜೀವರಕ್ಷಕ ಔಷಧ ದಾಸ್ತಾನಿಗೆ ಸೂಚನೆ: ಆನ್‌ಲೈನ್ ಔಷಧ ಮಾರಾಟ ವಿರೋಧಿಸಿ ಔಷಧ ವ್ಯಾಪಾರಿಗಳು ಮೇ 20 ರಂದು ದೇಶಾದ್ಯಂತ ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆ, ಜೀವ ರಕ್ಷಕ ಔಷಧಗಳು ಕೊರತೆ ಆಗದಂತೆ ಕ್ರಮ ವಹಿಸಲು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಿದೆ.

ಜಮ್ಮು & ಕಾಶ್ಮೀರದಲ್ಲಿ ಬರೋಬ್ಬರಿ 667 ಕೆಜಿ ಡ್ರಗ್ಸ್ ಸೀಜ್; 806 ಆರೋಪಿಗಳು ಅರೆಸ್ಟ್


ಶ್ರೀನಗರ: ಮಾದಕವಸ್ತು–ಭಯೋತ್ಪಾದನಾ ಜಾಲದ ವಿರುದ್ಧ ಪ್ರಮುಖ ಕಾರ್ಯಾಚರಣೆಯಲ್ಲಿ ಜಮ್ಮು ಮತ್ತು ಕಾಶ್ಮೀರ ಪೊಲೀಸರು 806 ಆರೋಪಿಗಳನ್ನು ಬಂಧಿಸಿದ್ದು, 667 ಕೆಜಿ ಡ್ರಗ್ಸ್ ಸೀಜ್ ಮಾಡಿದ್ದಾರೆ.

41.85 ಕೋಟಿ ರೂ. ಮೌಲ್ಯದ 97 ಆಸ್ತಿಗಳನ್ನು ಪೊಲೀಸರು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಸುಮಾರು 15 ಕೋಟಿ ರೂ. ಮೌಲ್ಯದ 41 ಆಸ್ತಿಗಳನ್ನು ಕೆಡವಿದ್ದಾರೆ. ಈಗ ಮಾದಕವಸ್ತು ಕಳ್ಳಸಾಗಣೆಯ ಆರ್ಥಿಕ ಬೆನ್ನೆಲುಬನ್ನು ಹತ್ತಿಕ್ಕುವತ್ತ ಗಮನ ಹರಿಸಲಾಗಿದೆ ಎಂದು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಜಮ್ಮು–ಕಾಶ್ಮೀರದ ಡಿಜಿಪಿ ನಳಿನ್ ಪ್ರಭಾತ್, ಏಪ್ರಿಲ್ 11 ರಿಂದ ಮೇ 12 ರವರೆಗೆ ನಡೆಸಿದ 100 ದಿನಗಳ ನಶೆ ಮುಕ್ತ ಜಮ್ಮು–ಕಾಶ್ಮೀರ ಅಭಿಯಾನ'ದ ಮೊದಲ ತಿಂಗಳ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕಳೆದ ತಿಂಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ 724 ಪ್ರಕರಣಗಳು ದಾಖಲಾಗಿದ್ದು, 806 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಸುಮಾರು ಏಳು ಪಟ್ಟು ಹೆಚ್ಚಾಗಿದೆ ಎಂದು ಡಿಜಿಪಿ ತಿಳಿಸಿದ್ದಾರೆ.







ಮೈಸೂರು ಮಿತ್ರ

ಕೇರಳದ ಮುಖ್ಯಮಂತ್ರಿಯಾಗಿ ವಿ.ಡಿ.ಸತೀಶನ್

ಮೇ 18 ರಂದು ಪ್ರಮಾಣ ವಚನ ಸ್ವೀಕಾರ



ತಿರುವನಂತಪುರಂ, ಮೇ 14–ಸಾಕಷ್ಟು ಅಳೆದು ತೂಗಿ, ನಾನಾ ಲೆಕ್ಕಾಚಾರಗಳ ಬಳಿಕ ಕೊನೆಗೂ ಕೇರಳದ ನೂತನ ಸಿಎಂ ಆಗಿ ವಿ.ಡಿ.ಸತೀಶನ್ ಅವರ ಹೆಸರನ್ನು ಎಐಸಿಸಿ ಘೋಷಿಸಿದೆ. ಕೇರಳ ಕಾಂಗ್ರೆಸ್ ನಾಯಕರಾದ ಕೆ.ಸಿ ವೇಣುಗೋಪಾಲ್, ವಿ.ಡಿ ಸತೀಶನ್ ಮತ್ತು ರಮೇಶ್ ಚೆನ್ನಿತ್ತಲ ಹೆಸರುಗಳು ಪ್ರಮುಖವಾಗಿ ಸಿಎಂ ರೇಸ್‌ನಲ್ಲಿದ್ದವು. ಈ ಪೈಕಿ ವಿ.ಡಿ.ಸತೀಶನ್ ಅವರನ್ನು ನೂತನ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಗಿದೆ.

ಎಐಸಿಸಿ ಕೇರಳ ಉಸ್ತುವಾರಿ ದೀಪಾ ದಾಸ್ಮುನ್ಷಿ ಹಾಗೂ ಪಕ್ಷದ ಕೇಂದ್ರ ವೀಕ್ಷಕರಾದ ಅಜಯ್ ಮಾಕನ್ ಮತ್ತು ಮುಕುಲ್ ವಾಸ್ನಿಕ್ ಸುದ್ದಿಗೋಷ್ಠಿಯಲ್ಲಿ ನೂತನ ಸಿಎಂ ಹೆಸರು ಪ್ರಕಟಿಸಿದ್ದಾರೆ. ಮುಖ್ಯಮಂತ್ರಿ ಹೆಸರು ಘೋಷಣೆಗೆ ಮುನ್ನ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಹಿರಿಯ ನಾಯಕರೊಂದಿಗೆ ಕೊನೆಯ ಹಂತದ ಸಮಾಲೋಚನೆಗಳನ್ನು ನಡೆಸಿದ್ದರು. ಮೂಲಗಳ ಪ್ರಕಾರ, ಖರ್ಗೆ ಅವರು ಎಐಸಿಸಿ ಕೇರಳ ಉಸ್ತುವಾರಿ ದೀಪಾ ದಾಸ್ಮುನ್ಷಿ ಹಾಗೂ ಹಿರಿಯ ವೀಕ್ಷಕರೊಂದಿಗೆ ಚರ್ಚೆ ನಡೆಸಿದ್ದರು ಎನ್ನಲಾಗಿದೆ.

ಏ.9ರಂದು ಕೇರಳ ವಿಧಾನ ಸಭಾ ಚುನಾವಣೆ ನಡೆದಿದ್ದು, ಇದರ ಫಲಿತಾಂಶ ಮೇ 4ರಂದು ಪ್ರಕಟಗೊಂಡಿತ್ತು. ಕಾಂಗ್ರೆಸ್ ನೇತೃತ್ವದ ಯುಡಿಎಫ್ 140 ವಿಧಾನಸಭಾ ಸ್ಥಾನಗಳ ಪೈಕಿ 102 ಸ್ಥಾನಗಳನ್ನು ಗೆಲ್ಲುವ ಮೂಲಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆಡಳಿ ತಾರೂಢ ಎಲ್‌ಡಿಎಫ್ ಕೇವಲ 35 ಸ್ಥಾನಗ ಳನ್ನು ಪಡೆಯುವ ಮೂಲಕ ಹೀನಾಯ ಸೋಲುಂಡಿತ್ತು ಹೀಗಿದ್ದರೂ ನೂತನ ಸಿಎಂ ಆಯ್ಕೆಗೆ ಬರೋಬ್ಬರಿ 10 ದಿನಗಳನ್ನು ಕಾಂಗ್ರೆಸ್ ನಾಯಕರು ತೆಗೆದುಕೊಂಡಿದ್ದಾರೆ.

ಕೇರಳ ರಾಜ್ಯದ ನೂತನ ಸಿಎಂ ಆಗಿ ವಿ.ಡಿ.ಸತೀಶನ್ ಆಯ್ಕೆ ಬೆನ್ನಲ್ಲೇ ತಿರುವನಂತಪುರಂನಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಯಕರ್ತರಿಂದ ಸಂಭ್ರಮಾಚರಣೆ ನಡೆದಿದೆ.

ಹಕ್ಕು ಮಂಡನೆ; ವಿ.ಡಿ.ಸತೀಶನ್ ಅವರು ಇಂದು ಸಂಜೆ ಲೋಕಭವನದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರನ್ನು ಭೇಟಿಯಾಗಿ ಸರ್ಕಾರದ ರಚನೆಯ ಹಕ್ಕು ಮಂಡಿಸಿದರು. ರಾಜ್ಯಪಾಲರು ಸರ್ಕಾರ ರಚನೆಗೆ ಆಹ್ವಾನಿಸಿದ್ದು ಮೇ 18 ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಪ್ರಧಾನಿ ಮೋದಿ ಮಿತವ್ಯಯ ಮಂತ್ರಕ್ಕೆ ಮಾರು ಹೋದ ನಾಯಕರು

ಕಾರು ಬಿಟ್ಟು ಬುಲೆಟ್ ಏರಿದ ಮುಖ್ಯಮಂತ್ರಿ ಫಡ್ನವೀಸ್!



ಮುಂಬೈ: ಇಂಧನ ಬಳಕೆ ಕಡಿಮೆ ಮಾಡಲು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹಾಗೂ ಸಚಿವ ಆಶಿಶ್ ಶೆಲಾರ್ ಅವರು ಕಾರು ಬಿಟ್ಟು ರಾಯಲ್ ಎನ್‌ಫೀಲ್ಡ್ ಬುಲೆಟ್‌ನಲ್ಲಿ ವಿಧಾನ ಭವನಕ್ಕೆ ಬಂದಿದ್ದಾರೆ. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಇರಾನ್ ಹಾಗೂ ಅಮೇರಿಕ ನಡುವಿನ ಉದ್ವಿಘ್ನತೆ ಹೆಚ್ಚುತ್ತಿರುವ ಹಿನ್ನೆಲೆ ಮಧ್ಯಪ್ರಾಚ್ಯದಲ್ಲಿ ತೈಲ ಬಿಕ್ಕಟ್ಟು ತೀವ್ರಗೊಳ್ಳುತ್ತಿದೆ. ಇದರಿಂದ ಪ್ರಧಾನಿ ನರೇಂದ್ರ ಮೋದಿಯವರು ದೇಶದ ಜನತೆಗೆ ಕೆಲವು ಮಿತವ್ಯಯ ಕ್ರಮಗಳನ್ನು ಅನುಸರಿಸಲು ಕರೆ ಕೊಟ್ಟಿದ್ದರು. ಈ ಕರೆಗೆ ಇದೀಗ ಬಿಜೆಪಿ ನಾಯಕರಿಂದ ಅಭಿಯಾನ ಆರಂಭವಾಗಿದೆ.

ಮೋದಿ ಕರೆ ಬೆನ್ನಲ್ಲೇ ಇಂಧನ ಉಳಿತಾಯಕ್ಕೆ ಮಹಾರಾಷ್ಟ್ರ ಸರ್ಕಾರದ ಎಲ್ಲಾ ಸಚಿವರ ಬೆಂಗಾವಲು ವಾಹನಗಳ ಸಂಖ್ಯೆಯನ್ನು 50%ರಷ್ಟು ಕಡಿಮೆ ಮಾಡುವಂತೆ ಫಡ್ನವೀಸ್ ಹೇಳಿದ್ದರು. ಮೇ 14ರಂದು ನಡೆಯಲಿರುವ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗುವ ಸಮಗ್ರ ಇಂಧನ ಉಳಿತಾಯ ಯೋಜನೆ ಸಿದ್ಧಪಡಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ತಿಳಿಸಿದ್ದರು.

ಈ ನಿರ್ದೇಶನದ ಹಿಂದಿನ ಉದ್ದೇಶ ಎಲ್ಲಾ ಇಲಾಖೆಗಳು ವಿದ್ಯುತ್ ವಾಹನ ಬಳಕೆಯನ್ನು ವಿಸ್ತರಿಸುವುದು, ಪ್ರಯಾಣ ವೆಚ್ಚವನ್ನು ಕಡಿಮೆ ಮಾಡುವುದಾಗಿದೆ. ಅಲ್ಲದೇ ಆನ್‌ಲೈನ್ ಸಭೆಗಳನ್ನು ನಡೆಸುವುದು, ಅನಗತ್ಯ ಅಂತಾರಾಷ್ಟ್ರೀಯ ಪ್ರಯಾಣವನ್ನು ರದ್ದು ಗೊಳಿಸುವುದು ಅಥವಾ ಮುಂದೂಡುವುದಾಗಿದೆ. ಈ ಕ್ರಮಗಳ ಭಾಗವಾಗಿ ಅಧಿಕಾರಿಗಳು ಸ್ಥಳೀಯ ರೈಲುಗಳು ಮತ್ತು ಬಸ್‌ಗಳಂತಹ ಸಾರ್ವಜನಿಕ ಸಾರಿಗೆಯನ್ನು ಬಳಸಬೇಕು. ಇದು ಸರ್ಕಾರದ ಇಂಧನ ವೆಚ್ಚವನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತದೆ ಎಂಬುದಾಗಿದೆ.

ಇತ್ತ ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ್ ಅವರು ತಮ್ಮ ಪ್ರಯಾಣಕ್ಕೆ ಹೆಲಿಕಾಪ್ಟರ್‌ಗಳ ಬದಲಿಗೆ ರೈಲುಗಳು ಮತ್ತು ಸಾರ್ವಜನಿಕ ಸಾರಿಗೆ ಬಳಸುವುದಾಗಿ ಘೋಷಿಸಿದ್ದಾರೆ. ಬಿಹಾರ್ ಉಪ ಮುಖ್ಯಮಂತ್ರಿ ವಿಜಯ್ ಕುಮಾರ್ ಚೌಧರಿ ಅವರು ಕೂಡ ತಮ್ಮ ವಾಹನ ಬಳಕೆ ಕಡಿಮೆ ಮಾಡಿದ್ದು, ಅಗತ್ಯವಿದ್ದಾಗ ಮಾತ್ರ ಪ್ರಯಾಣ ಕೈಗೊಳ್ಳುವುದಾಗಿ ಹೇಳಿದ್ದಾರೆ.

ದೆಹಲಿ ಸರ್ಕಾರಿ ನೌಕರರಿಗೆ ವಾರದಲ್ಲಿ 2 ದಿನ ವರ್ಕ್ ಫ್ರಮ್ ಹೋಮ್

6 ತಿಂಗಳು ಹೊಸ ವಾಹನ ಖರೀದಿ ಮಾಡುವಂತಿಲ್ಲ!



ರೇಖಾ ಗುಪ್ತಾ

ನವದೆಹಲಿ: ತೈಲ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಇಂಧನ ಉಳಿತಾಯಕ್ಕಾಗಿ ವರ್ಕ್ ಫ್ರಮ್ ಹೋಮ್ ಮಾಡುವಂತೆ ಸಲಹೆ ನೀಡಿದ್ದೇ ತಡ, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಗುರುವಾರ ಸರ್ಕಾರಿ ನೌಕರರಿಗೆ ವಾರಕ್ಕೆ ಎರಡು ದಿನ ಮನೆಯಿಂದಲೇ ಕೆಲಸ ಮತ್ತು ವಾಹನಗಳ ಕನಿಷ್ಠ ಬಳಕೆ ಘೋಷಿಸಿದ್ದಾರೆ.

ದೆಹಲಿ ಸರ್ಕಾರದ ಈ ನಿರ್ಧಾರ ನಾಳೆಯಿಂದಲೇ ಜಾರಿಗೆ ಬರಲಿದ್ದು, ಇಂಧನ ಉಳಿತಾಯ ಮತ್ತು ದಕ್ಷ ಆಡಳಿತವನ್ನು ಉತ್ತೇಜಿಸಲು ಬಿಜೆಪಿ ನೇತೃತ್ವದ ಸರ್ಕಾರ ರಾಷ್ಟ್ರ ರಾಜಧಾನಿಯಲ್ಲಿ ಮೇರಾ ಭಾರತ್ ಮೇರಾ ಯೋಗದಾನ್ ಅಭಿಯಾನವನ್ನು ಪ್ರಾರಂಭಿಸುತ್ತಿದೆ.

ಪ್ರತಿ ಸೋಮವಾರ ಮೆಟ್ರೋ ಸೋಮವಾರ ಎಂದು ಆಚರಿಸಲಾಗುವುದು. ಈ ದಿನ ಎಲ್ಲಾ ಸಚಿವರು, ಅಧಿಕಾರಿಗಳು ಮತ್ತು ಉದ್ಯೋಗಿಗಳು ಮೆಟ್ರೋದಲ್ಲಿ ಪ್ರಯಾಣಿಸಬೇಕು ಎಂದು ಸರ್ಕಾರ ಸೂಚಿಸಿದೆ.

ವಾರದಲ್ಲಿ ಒಂದು ದಿನ ವಾಹನ ರಹಿತ ದಿನವನ್ನು ಆಚರಿಸಲು ಸರ್ಕಾರ ಸಾರ್ವಜನಿಕರಿಗೆ ಮನವಿ ಮಾಡಿದೆ.

ದೆಹಲಿಯಲ್ಲಿ ಮುಂದಿನ 6 ತಿಂಗಳವರೆಗೆ ಯಾವುದೇ ಹೊಸ ಪೆಟ್ರೋಲ್, ಡೀಸೆಲ್ ಅಥವಾ ಎಲೆಕ್ಟ್ರಿಕ್ ವಾಹನ ಖರೀದಿ ಮಾಡುವಂತಿಲ್ಲ ಎಂದು ಸರ್ಕಾರ ಹೇಳಿದೆ. ಇನ್ನೂ ಸರ್ಕಾರಿ ನೌಕರರಿಗೆ ಸಾರಿಗೆ ಭತ್ಯೆಯನ್ನು ಶೇ.10 ರಷ್ಟು ಹೆಚ್ಚಿಸಲಾಗುವುದು ಎಂದು ಸರ್ಕಾರ ತಿಳಿಸಿದೆ.

ವಿದೇಶಿ ಪ್ರಯಾಣಕ್ಕೂ ನಿಷೇಧ ದೆಹಲಿ ಸರ್ಕಾರದ ಯಾವುದೇ ಸಚಿವರು ಅಥವಾ ಅಧಿಕಾರಿಗಳು ಮುಂದಿನ ವರ್ಷದವರೆಗೆ ಯಾವುದೇ ಅಧಿಕೃತ ವಿದೇಶ ಪ್ರವಾಸ ಕೈಗೊಳ್ಳುವಂತಿಲ್ಲ ಎಂದು ಸರ್ಕಾರ ಹೇಳಿದೆ. ಹೆಚ್ಚುವರಿಯಾಗಿ, ಜಾಗೃತಿ ಮೂಡಿಸಲು 90 ದಿನಗಳ ಅಭಿಯಾನ ನಡೆಸಲಾಗುವುದು. ಇಂಧನ ಉಳಿತಾಯವನ್ನು ಉತ್ತೇಜಿಸಲು ಮತ್ತು ರಾಷ್ಟ್ರನಿರ್ಮಾಣಕ್ಕೆ ಕೊಡುಗೆ ನೀಡುವ ಪ್ರತಿಜ್ಞೆಯನ್ನು ನಾಗರಿಕರಿಗೆ ನೀಡಲಾಗುವುದು ಎಂದು ಸರ್ಕಾರ ತಿಳಿಸಿದೆ.

ವಿದ್ಯುತ್ ಬಳಕೆಯನ್ನು ಕಡಿಮೆ ಮಾಡಲು, ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಹವಾನಿಯಂತ್ರಣಗಳನ್ನು 24 ರಿಂದ 26 ಡಿಗ್ರಿ ಸೆಲ್ಸಿಯಸ್ ನಡುವೆ ಹೊಂದಿಸಲು ನಿರ್ಧರಿಸಲಾಗಿದೆ.

ಆಸ್ತಿ ತೆರಿಗೆ ಪಾವತಿಗೆ ಹಿರಿಯ ನಾಗರಿಕರು ಪರದಾಟ

- ತಪೋವನ ಸೋಲೇಸ್ ಅಪಾರ್ಟ್‌ಮೆಂಟ್ ನಿವಾಸಿಗಳ ಬೇಸರ
- ಖಾತೆ ಹೊಂದಿದ್ದರೂ ದುಪ್ಪಟ್ಟು ತೆರಿಗೆ ಪಾವತಿಗೆ ಅಧಿಕಾರಿಗಳ ಸೂಚನೆ
- ಮೈಸೂರು ಗ್ರಾಹಕ ಪರಿಷತ್‌ನಿಂದ ಪಾಲಿಕೆ ಆಯುಕ್ತರಿಗೆ ಪತ್ರ

ಮೈಸೂರು, ಮೇ 14– ಮೈಸೂರು ಮಹಾನಗರ ಪಾಲಿಕೆ, ವಲಯ ಕಚೇರಿ 3ರ ವ್ಯಾಪ್ತಿಯ 'ತಪೋವನ ಸೋಲೇಸ್' ವಸತಿ ಸಮುಚ್ಚಯದ ಹಿರಿಯ ನಾಗರಿಕರು 'ಆಸ್ತಿ ತೆರಿಗೆ ಪಾವತಿಸಲಾಗದೆ ಪರಿತಪಿಸುತ್ತಿದ್ದಾರೆ.

ಈ ಸಂಬಂಧ ಮೈಸೂರು ಗ್ರಾಹಕ ಪರಿಷತ್‌ನ ಸ್ಥಾಪಕ ಕಾರ್ಯಾಧ್ಯಕ್ಷ ಭಾಮಿ ವಿ.ಶೆಣೈ, ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರಿಗೆ ಪತ್ರ ಬರೆದು, ತುರ್ತು ಕ್ರಮಕ್ಕೆ ಮನವಿ ಮಾಡಿದ್ದಾರೆ.

ತಪೋವನ ಸೋಲೇಸ್‌ನಲ್ಲಿ ನೆಲೆಸಿರುವ ಬಹುತೇಕ ಮಂದಿ ಹಿರಿಯ ನಾಗರಿಕರು. ಅದರಲ್ಲೂ ಉನ್ನತ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುವ ಮೂಲಕ ಸಮಾಜಕ್ಕೆ ತಮ್ಮದೇ ಆದ ಸೇವೆ ನೀಡಿದ್ದಾರೆ. ಈ ಅಪಾರ್ಟ್‌ಮೆಂಟ್‌ನಲ್ಲಿ ಸುಮಾರು 55 ಕುಟುಂಬಗಳು ವಾಸವಿದ್ದು, ಆಸ್ತಿ ತೆರಿಗೆ ಪಾವತಿ ವಿಚಾರದಲ್ಲಿ ತೀವ್ರ ತೊಂದರೆ ಉಂಟಾಗಿದೆ. ಖಾತಾ ಇರದ ಕಾರಣಕ್ಕೆ ಕಳೆದ ಆರ್ಥಿಕ ವರ್ಷದವರೆಗೂ ಪಾಲಿಕೆಗೆ ದುಪ್ಪಟ್ಟು ಆಸ್ತಿ ತೆರಿಗೆ ಪಾವತಿಸಿದ್ದಾರೆ. ಕಳೆದ ವರ್ಷ ಖಾತಾ ಪಡೆದಿದ್ದು, ಪ್ರಸಕ್ತ ವರ್ಷದಿಂದಲಾದರೂ ಸರ್ಕಾರದ ಸೂಚನೆಯಂತೆ ನಿಗದಿತ ತೆರಿಗೆ ಪಾವತಿಸಬಹುದು ಎಂಬ ಆಶಯ ಸುಳ್ಳಾಗಿದೆ.

ಖಾತಾ ಹೊಂದಿರುವುದರಿಂದ ನಿಗದಿತ ತೆರಿಗೆ ಪಾವತಿಸಲು ಹೋದರೆ ಪಾಲಿಕೆ ಅಧಿಕಾರಿಗಳು ಸ್ವೀಕರಿಸಿಲ್ಲ. ಈ ಸಂಬಂಧ ಆದೇಶ ಬಂದಿಲ್ಲ, ಆದ್ದರಿಂದ ಈ ಹಿಂದಿನಂತೆ ದುಪ್ಪಟ್ಟು ತೆರಿಗೆ ಪಾವತಿಸಬೇಕು ಎನ್ನುತ್ತಿದ್ದಾರೆ. ಇನ್ನು ಪ್ರಶ್ನಿಸಿದರೆ ಪಾಲಿಕೆ ಮುಖ್ಯ ಕಚೇರಿಗೆ ಹೋಗಿ ವಿಚಾರಿಸುವಂತೆ ಹೇಳುತ್ತಾರೆ. ಹೀಗೆಲ್ಲಾ ಅಲೆದಾಡುವುದು ಹಿರಿಯ ನಾಗರಿಕರಿಂದ ಸಾಧ್ಯವಿಲ್ಲ. ಅತ್ಯಂತ ಗೌರವದಿಂದ ಕಾಣಬೇಕಾದ ಹಿರಿಯರನ್ನು ಪಾಲಿಕೆ ಅಧಿಕಾರಿಗಳು ಸೇವಕರಂತೆ ನಡೆಸಿಕೊಳ್ಳುವುದು ಸೌಜನ್ಯವಲ್ಲ.

ನಾಗರಿಕರು ಆಸ್ತಿ ತೆರಿಗೆ ಪಾವತಿಗೆ ಮುಂದಾದರೂ ಅನಗತ್ಯ ಸಬೂಬು ಹೇಳಿ ಕಳುಹಿಸುವುದು ಎಷ್ಟು ಸರಿ. ಖಾತೆ ಹೊಂದಿರುವವರಿಂದ ದುಪ್ಪಟ್ಟು ತೆರಿಗೆ ಪಡೆಯದೆ, ನಿಯಮಾನುಸಾರ ನಿಗದಿತ ಮೊತ್ತವನ್ನಷ್ಟೇ ಪಾವತಿ ಮಾಡಲು ಅಧಿಕಾರಿಗಳಿಗೆ ಸೂಚಿಸಬೇಕು. ಅಪಾರ್ಟ್‌ಮೆಂಟ್‌ನ ಸಮೀಪದಲ್ಲಿರುವ ವಲಯ ಕಚೇರಿ 3ರಲ್ಲೇ ಸಮಸ್ಯೆ ಪರಿಹರಿಸಲು ಸೂಚನೆ ನೀಡುವ ಮೂಲಕ ಹಿರಿಯ ನಾಗರಿಕರಿಗೆ ನೆರವಾಗಬೇಕು. ಜೊತೆಗೆ ಹಿರಿಯರನ್ನು ಸೇವಕರಂತೆ ಕಾಣುವ ಮೂಲಕ ಅಗೌರವ ತೋರಿದ ಅಧಿಕಾರಿಗಳಿಗೆ ಎಚ್ಚರಿಕೆ ನೀಡಬೇಕು ಎಂದು ಭಾಮಿ ಶೆಣೈ ಕೋರಿದ್ದಾರೆ.

ತ್ರಿಪುರಾದಲ್ಲಿ ಶೇ.50ರಷ್ಟು ನೌಕರರಿಗೆ ಮನೆಯಿಂದಲೇ ಕೆಲಸ

ಅಗರ್ತಲಾ: ಇಂಧನ ಉಳಿತಾಯ ಮತ್ತು ಮಿತವ್ಯಯಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ತ್ರಿಪುರಾ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಶೇ 50ರಷ್ಟು ಸಿ ಮತ್ತು ಡಿ ದರ್ಜೆಯ ನೌಕರರು ಇಂದಿನಿಂದಲೇ ಮನೆಯಿಂದಲೇ ಕೆಲಸ ಮಾಡಬೇಕು ಎಂದು ಬುಧವಾರ (ಮೇ 13) ಅಧಿಕೃತ ಆದೇಶ ಹೊರಡಿಸಿದೆ.

ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಪೆಟ್ರೋಲ್–ಡೀಸೆಲ್ ಬಳಕೆ ಕಡಿಮೆ ಮಾಡುವಂತೆ, ಸಾರ್ವಜನಿಕ ಸಾರಿಗೆ ಬಳಸುವಂತೆ ಮತ್ತು ವರ್ಕ್ ಫ್ರಮ್ ಹೋಮ್ ಮಾಡುವಂತೆ ಜನರಿಗೆ ಕರೆ ನೀಡಿದ್ದರು. ಆ ಬೆನ್ನಲ್ಲೇ ತ್ರಿಪುರಾ ಸರ್ಕಾರ ಈ ಕ್ರಮ ಕೈಗೊಂಡಿದೆ.

ಸಾಮಾನ್ಯ ಆಡಳಿತ ಇಲಾಖೆಯ ವಿಶೇಷ ಕಾರ್ಯದರ್ಶಿ ಎ.ಕೆ.ಭಟ್ಟಾಚಾರ್ಜಿ ಹೊರಡಿಸಿರುವ ಪತ್ರದ ಪ್ರಕಾರ, ಇಲಾಖೆಯ ಮುಖ್ಯಸ್ಥರು ಪ್ರತಿ ದಿನ ಶೇ.50ರಷ್ಟು ನೌಕರರು ಮಾತ್ರ ಕಚೇರಿಗೆ ಹಾಜರಾಗುವುದನ್ನು ಖಚಿತಪಡಿಸಿಕೊಳ್ಳಬೇಕು. ಉಳಿದ ಶೇ 50ರಷ್ಟು ನೌಕರರಿಗೆ ಮನೆಯಿಂದ ಕೆಲಸ ಮಾಡಲು ಸೂಚಿಸಬೇಕು ಎಂದು ತಿಳಿಸಲಾಗಿದೆ.

ಎಲ್ಲಾ ಇಲಾಖೆಯ ಮುಖ್ಯಸ್ಥರು ಸಿ ಮತ್ತು ಡಿ ದರ್ಜೆಯ ಸಿಬ್ಬಂದಿಗೆ ವಾರದ ಪಾಳಿಯನ್ನು ಸಿದ್ಧಪಡಿಸಬೇಕು. ನೌಕರರು ಪರ್ಯಾಯ ವಾರಗಳಲ್ಲಿ ಕಚೇರಿಗೆ ಹಾಜರಾಗುವಂತೆ ಕ್ರಮ ಕೈಗೊಳ್ಳಬೇಕು. ಮೊದಲ ವಾರದ ಪಟ್ಟಿಯನ್ನು ಸಿದ್ಧಪಡಿಸುವಾಗ ಕಚೇರಿಯ ಸಮೀಪದಲ್ಲಿ ವಾಸಿಸುವ ನೌಕರರಿಗೆ ಆದ್ಯತೆ ನೀಡಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಬೆಂಗಾವಲು ಪಡೆ ಅರ್ಧಕ್ಕೆ ಇಳಿಸಿದ ರಾಜ್ಯಪಾಲ ಗೆಹ್ಲೋಟ್



ಬೆಂಗಳೂರು: ತೈಲ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಮರು ಇಂಧನ ಉಳಿತಾಯಕ್ಕಾಗಿ ಕರೆ ನೀಡಿರುವುದನ್ನು ಅನುಸರಿಸಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಗುರುವಾರ ತಮ್ಮ ಅಧಿಕೃತ ಬೆಂಗಾವಲು ಪಡೆಯ ಗಾತ್ರವನ್ನು ಅರ್ಧದಷ್ಟು ಕಡಿಮೆ ಮಾಡಿದ್ದಾರೆ.

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ ಇಂಧನ ಸಂರಕ್ಷಣೆ ಮತ್ತು ವಿದೇಶಿ ವಿನಿಮಯ ವೆಚ್ಚವನ್ನು ಕಡಿಮೆ ಮಾಡುವ ಪ್ರಧಾನಿಯವರ ಮನವಿಗೆ ಪ್ರತಿಕ್ರಿಯೆಯಾಗಿ ಗೆಹ್ಲೋಟ್ ಈ ಕ್ರಮ ಕೈಗೊಂಡಿದ್ದಾರೆ ಎಂದು ಎಕ್ಸ್‌ನಲ್ಲಿ ಲೋಕಭವನ ಪೋಸ್ಟ್ ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಮನವಿಯನ್ನು ಅನುಸರಿಸಿ ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ತಮ್ಮ ಬೆಂಗಾವಲು ಪಡೆಯನ್ನು ಕನಿಷ್ಠ ಅಗತ್ಯವಿರುವ ಸಂಖ್ಯೆಗೆ ಇಳಿಸಿದ್ದಾರೆ ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ.

ಮೋದಿ ಸಲಹೆ ಹಿನ್ನೆಲೆ ವರ್ಕ್ ಫ್ರಮ್ ಹೋಂಗೆ ಮನವಿ

ಪ್ರಧಾನಿಗೆ ರಾಜ್ಯ ಟ್ರಾವೆಲ್ಸ್ ಅಸೋಸಿಯೇಷನ್ ಪತ್ರ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಸಲಹೆ ನೀಡಿದ ಹಿನ್ನೆಲೆ ವರ್ಕ್ ಫ್ರಮ್ ಹೋಂ ಗೆ ಮನವಿ ಮಾಡಿ ರಾಜ್ಯ ಟ್ರಾವೆಲ್ಸ್ ಅಸೋಸಿಯೇಷನ್ ಪ್ರಧಾನಿಗಳಿಗೆ ಮನವಿ ಮಾಡಿದೆ.

ಪ್ರತಿಯೊಬ್ಬ ಟ್ರಾವೆಲ್ಸ್ ಮಾಲೀಕರಿಗೂ ಕನಿಷ್ಠ 25 ಲಕ್ಷ ರೂ.ಗಿಂತ ಹೆಚ್ಚಿನ ಮಾಸಿಕ ಇಎಮ್‌ಐ ಭಾರ ಇದೆ. ಕೆಲವು ದೊಡ್ಡ ಆಪರೇಟರ್‌ಗಳು ಪ್ರತಿ ತಿಂಗಳು 1 ಕೋಟಿ ರೂ.ಗೂ ಅಧಿಕ ಇಎಮ್‌ಐ ಪಾವತಿಸುತ್ತಿದ್ದಾರೆ. ಇದರ ಜೊತೆಗೆ ಡ್ರೈವರ್‌ಗಳು ಮತ್ತು ಸೂಪರ್‌ವೈಸರ್‌ಗಳ ಸಂಬಳ, ಜಿಎಸ್‌ಟಿ, ರಸ್ತೆ ತೆರಿಗೆ, ನೌಕರರ ಸೌಲಭ್ಯಗಳು, ಕಚೇರಿ ಬಾಡಿಗೆ, ವಾಹನ ಪಾರ್ಕಿಂಗ್ ಬಾಡಿಗೆ, ಭದ್ರತಾ ಶುಲ್ಕ ಸೇರಿದಂತೆ ಅನೇಕ ಕಾರ್ಯಾಚರಣಾ ಮತ್ತು ಹೆಚ್ಚುವರಿ ವೆಚ್ಚಗಳನ್ನು ಭರಿಸಬೇಕಾಗಿದೆ.


ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ವರ್ಕ್ ಫ್ರಮ್ ಹೋಂ ನೀತಿಗಳು ಟ್ರಾವೆಲ್ಸ್ ಮತ್ತು ಸಾರಿಗೆ ಉದ್ಯಮಕ್ಕೆ ಇನ್ನಷ್ಟು ಸಂಕಷ್ಟವನ್ನು ತಂದಿವೆ. ಕಚೇರಿ ಸಂಚಾರ, ಕಾರ್ಪೊರೇಟ್ ಪ್ರಯಾಣ ಹಾಗೂ ನೌಕರರ ಸಂಚಾರ ಗಣನೀಯವಾಗಿ ಕಡಿಮೆಯಾಗಿರುವುದರಿಂದ ವಾಹನ ಮಾಲೀಕರು ಭಾರೀ ಆರ್ಥಿಕ ನಷ್ಟ ಅನುಭವಿಸುತ್ತಿದ್ದಾರೆ. ಹಲವಾರು ವಾಹನಗಳು ಪಾರ್ಕಿಂಗ್‌ಗಳಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ.



ಭತ್ತದ ಪೈರಿಗೆ ನೀರಿಲ್ಲ...


ವರುಣ ಕ್ಷೇತ್ರದ ರಾಂಪುರ ಎಡದಂಡೆ ನಾಲೆಗೆ ನೀರು ಹರಿಸದೆ ಎಡಕೋಳ, ನಂದಿಗುಂದ, ಅಂಚೆಹುಂಡಿ, ಸಿದ್ದರಾಮನ ಹುಂಡಿ, ಕುಪ್ಪೇಗಾಲದವರೆಗೂ ಭತ್ತ ಒಣಗುತ್ತಿದೆ. ಮುಖ್ಯಮಂತ್ರಿಗಳ ಗ್ರಾಮಕ್ಕೆ ನೀರು ಹರಿಸದೆ ಇರುವುದು ವಿಷಾದನೀಯ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ನೀರು ಹರಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

'ಕೆಂಪೇಗೌಡ ವೃತ್ತ'



ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ಕೂಡುವ ರಿಂಗ್ ರಸ್ತೆ ಸರ್ಕಲ್(ಮಣಿಪಾಲ್ ಆಸ್ಪತ್ರೆ ಜಂಕ್ಷನ್)ಗೆ ನಾಡಪ್ರಭು ಕೆಂಪೇಗೌಡ ವೃತ್ತ ಎಂದು ನಾಮಕರಣ ಮಾಡುವಂತೆ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿಯಿಂದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಸಮುದಾಯದ ಸಂಘಟನೆಗಳ ಪರವಾಗಿ ಮನವಿ ಮಾಡಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್, ಡಾ.ಲೋಕೇಶ್, ವಕೀಲ ಹೇಮಂತ್ ಮತ್ತಿತರರಿದ್ದರು.

ಇಂದು ಉರಿ ಚಮ್ಮಾಳಿಗೆ ಜನಪದ ನಾಟಕ



ಮೈಸೂರು, ಮೇ 14– ಮೈಸೂರಿನ ಬಿದಿರು ಥಿಯೇಟರ್ ರಂಗ ತಂಡದ ಜೂನಿಯರ್ಸ್ ಅಭಿನಯಿಸುವ 'ಉರಿ ಚಮ್ಮಾಳಿಗೆ' ಜನಪದ ನಾಟಕ, ಶುಕ್ರವಾರ(ಮೇ 15) ಸಂಜೆ 6.30ಕ್ಕೆ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ. ಸಾಂಸ್ಕೃತಿಕ ಮೌಲ್ಯಗಳು ಹಾಗೂ ಜನಪದ ಪರಂಪರೆಯ ಮಹತ್ವ ಸಾರುವ ಉದ್ದೇಶದೊಂದಿಗೆ ಜನಪದ ಮೂಲಕಥೆಯನ್ನು ನಾಟಕ ರೂಪಕ್ಕಿಳಿಸಲಾಗಿದೆ. ಮಂಜುನಾಥ್ ಬ್ಯಾಟೆ ಅವರ ವಿನ್ಯಾಸ ಮತ್ತು ನಿರ್ದೇಶನದೊಂದಿಗೆ ಜೂನಿಯರ್ಸ್‌ಗಳು ಅಭಿನಯಿಸಿ, ಪ್ರೇಕ್ಷಕರನ್ನು ರಂಜಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ ಮೊ.ಸಂ.7349616609/ 8073173067 ಸಂಪರ್ಕಿಸಬಹುದು.

ಕರುವಿನ ಕಳೇಬರ ಪತ್ತೆ: ಹುಲಿ ದಾಳಿ ಶಂಕೆ




ಮೈಸೂರು,ಮೇ.14(ಎಂಟಿವೈ)– ಮೈಸೂರು ತಾಲೂಕಿನ ವರಕೋಡು ಗ್ರಾಮದ ಬಳಿ ಹಿಪ್ಪುನೇರಳೆ ತೋಟದಲ್ಲಿ ಕರುವೊಂದರ ಕಳೇಬರ ಪತ್ತೆಯಾಗಿದ್ದು, ಹುಲಿ ದಾಳಿ ನಡೆಸಿರುವ ಶಂಕೆ ವ್ಯಕ್ತವಾಗಿದೆ.

ಗ್ರಾಮದ ಮಲ್ಲಪ್ಪ ಎಂಬುವರಿಗೆ ಸೇರಿದ ಕರುವಿನ ಅರೆಬರೆ ಕಳೇಬರದ ಪಕ್ಕ ಹುಲಿ ಹೆಜ್ಜೆ ಹೋಲುವ ಗುರುತು ಪತ್ತೆಯಾಗಿದೆ. ವರಕೋಡು ಕಲ್ಯಾಣಿಯಿಂದ ಬಡಗಲಹುಂಡಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಮಲ್ಲಪ್ಪ ಅವರ ಮನೆಯಿದ್ದು, ಕಟ್ಟಿ ಹಾಕಿದ್ದ ಕರುವನ್ನು ರಾತ್ರಿ 9.30ರಲ್ಲಿ ಎಳೆದೊಯ್ಯಲಾಗಿದೆ. ಕರು ಕಳ್ಳತನವಾಗಿರಬಹುದೆಂದು ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಮಧ್ಯಾಹ್ನದವರೆಗೂ ಹುಡುಕಾಟ ನಡೆಸಲಾಗಿತ್ತು.

ಆದರೆ ಮನೆ ಹಿಂಭಾಗದ ಹಿಪ್ಪುನೇರಳೆ ತೋಟದಲ್ಲಿ ಕರುವಿನ ಅರೆಬರೆ ಕಳೇಬರ ಪತ್ತೆಯಾಗಿದೆ. ಸುತ್ತಲೂ ಹೆಜ್ಜೆ ಗುರುತು ಪತ್ತೆಯಾಗಿದ್ದು, ಅವು ಹುಲಿ ಹೆಜ್ಜೆ ಗುರುತಿನಂತೆ ಕಂಡು ಬರುತ್ತಿದೆ. ಅಲ್ಲದೆ, ಚಿಕ್ಕ ಮರಿಗಳ ಹೆಜ್ಜೆ ಗುರುತು ಸಹ ಪತ್ತೆಯಾಗಿವೆ. ಇದರಿಂದ ಹುಲಿಯೇ ದಾಳಿ ಮಾಡಿರಬಹುದು ಎಂದು ಗ್ರಾಮಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ. ಎರಡು ವರ್ಷದ ಹಿಂದೆ ವರಕೋಡು–ಮೂಡಲಹುಂಡಿ ಗ್ರಾಮದ ದೊಣ್ಣೆಕಲ್ಲು ಬೆಟ್ಟದ ಕಾಲುವೆ ಏರಿಯಲ್ಲಿ ಹೆಣ್ಣು ಹುಲಿಯೊಂದು ಸಂಚರಿಸುತ್ತಿದ್ದ ದೃಶ್ಯವನ್ನು ಸ್ಥಳೀಯರು ವಿಡಿಯೋ ಮಾಡಿದ್ದರು. ಅರಣ್ಯ ಇಲಾಖೆ ಕೂಂಬಿಂಗ್ ನಡೆಸಿದ್ದ ವೇಳೆ ಹುಲಿ ಗೋಚರಿಸಿತ್ತು. ಈ ಭಾಗದಲ್ಲಿ ಚಿರತೆಗಳ ಸಂಚಾರವೂ ಇದ್ದು, ಕರುವಿನ ಮೇಲೆ ದಾಳಿ ನಡೆಸಿರುವುದು ಹುಲಿಯೋ ಅಥವಾ ಚಿರತೆಯೋ ಎಂದು ಗೊಂದಲ ಉಂಟಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.5.2026 ಶುಕ್ರವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಚರ್ಮ, ಬೆನ್ನುಮೂಳೆ ಮತ್ತು ಕೀಲು ನೋವು ಸಮಸ್ಯೆ, ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಒತ್ತಡ, ಆತಂಕ, ಬಾಲನೆರೆ, ದೃಷ್ಟಿಮಾಂದ್ಯ, ತಲೆನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ, ಆರ್ಥ್ರೈಟಿಸ್, ಸಂಧಿವಾತ, ಆಮವಾತ, ಗೌಟ್, ಕುತ್ತಿಗೆನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಸೂತ್ರ ಆಯುರ್ಧಾಮ**: ವೆರಿಕೋಸ್ ವೇನ್ಸ್ ಉಚಿತ ತಪಾಸಣೆ ಮತ್ತು ಸಲಹಾ ಶಿಬಿರ, ಕಾಲಿನ ರಕ್ತನಾಳ ಊತ, ಕಾಲಿನ ನೋವು, ಉಬ್ಬರೆ, ಚರ್ಮದ ಬಣ್ಣ ಬದಲಾವಣೆ, ಕಾಲಿನಲ್ಲಿ ಜೋಮು ಹಿಡಿಯುವುದು, ವಾಸಿಯಾಗದ ಗಾಯಗಳ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಸೂತ್ರ ಆಯುರ್ಧಾಮ, ಜೆಎಲ್‌ಬಿ ರಸ್ತೆ, ಚಾಮುಂಡಿಪುರಂ. ಬೆಳಗ್ಗೆ 10ರಿಂದ.

■ **ನೀಲಗಂಗಾ ಮಹಿಳಾ ಬಳಗ**: 30ನೇ ವಾರ್ಷಿಕೋತ್ಸವ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ದಾವಣಗೆರೆ ವಿವಿ ವಿಶ್ರಾಂತ ಕುಲಪತಿ ಡಾ. ಇಂದುಮತಿ ಮಾದಯ್ಯ, ಮುಖ್ಯ ಅತಿಥಿಗಳು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸನ್ಮಾನಿತರು: ಮಾಜಿ ಶಾಸಕರಾದ ಶ್ರೀಮತಿ ಗೀತಾ ಮಹದೇವಪ್ರಸಾದ್, ಪೊಲೀಸ್ ಅಧೀಕ್ಷಕರಾದ ಸವಿತಾ ಹೂಗಾರ, ಶಶಿಕಲಾ ಶಿವಲಿಂಗಯ್ಯ, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ** : ಬಸವ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮ, ಶ್ರೀ ಬಸವಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಕುದೇರು ಮಠದ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮಿಗಳು, ಉದ್ಘಾಟನೆ : ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಡಾ. ಬಿ.ಆರ್.ನಟರಾಜ ಜೋಯ್ಸ್, ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಉಪಸ್ಥಿತರು : ಚುಟುಕು ಯೋಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಸಾಹಿತಿ ಡಾ. ಕೆ. ಲೀಲಾಪ್ರಕಾಶ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವಿಭಾಗೀಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಮಹಿಳಾ ಸಬಲೀಕರಣ ಹಾಗೂ ರಕ್ಷಣಾ ಘಟಕ, ರಾಷ್ಟ್ರೀಯ ಅಪರಾಧ ನಿಯಂತ್ರಣ ಮಂಡಳಿ ಸಹಾಯಕ ನಿರ್ದೇಶಕರಾದ ಶ್ರೀಮತಿ ಸುಮರಾವ್, ಲಯನ್ ಗೋಲ್ಡನ್ ಟಿ. ಸುರೇಶ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ.

■ **ಸೋಸಲೆ ವ್ಯಾಸರಾಜ ಮಠ** : ವೇ.ಮೂ. ಶ್ರೀ ಎಸ್. ಶ್ರೀನಿವಾಸರಾಯರ ಅಭಿನಂದನಾ ಸಮಾರಂಭ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಎಕ್ಸೆಲ್ ಸಾಫ್ಟ್ ಎಂಡಿ ಸುಧನ್ವ, ಮಾಜಿ ಸಚಿವ ಎಸ್.ಎ. ರಾಮದಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಮಣ್ಯ, ಸ್ಥಳ: ತತ್ವಜ್ಞಾನ ಮಂದಿರ, ಶ್ರೀ ರಾಘವೇಂದ್ರಸ್ವಾಮಿಗಳ ವೃಂದಾವನ ಸನ್ನಿಧಾನ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ.

■ **ಬಸವ ಸಮಿತಿ** : ವಾರ್ಷಿಕೋತ್ಸವ, ಬಸವ ಜಯಂತಿ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಶ್ರೀ ಬಸವೇಶ್ವರ ಮಠದ ಶ್ರೀ ಶಿವಪ್ರಭು ಸ್ವಾಮೀಜಿ, ಉದ್ಘಾಟನೆ : ಶಾಸಕ ತನ್ವೀರ್ ಸೇಠ್, ಸಾಧಕರಿಗೆ ಸನ್ಮಾನ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪ್ರಧಾನ ಭಾಷಣ : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಡಿ.ಎಸ್. ಸದಾಶಿವಮೂರ್ತಿ, ಪ್ರತಿಭಾ ಪುರಸ್ಕಾರ : ಹಿರಿಯ ಅಧಿಕಾರಿ ಡಾ. ಪಿ. ಶಿವರಾಜು, ಸಾಧಕರು : ಡಾ. ಹೇಮಾ ಪಾಟೀಲ್, ಸರ್ಕಲ್ ಇನ್ಸ್‌ಪೆಕ್ಟರ್ ಎಸ್. ನಾಗೇಶ್, ಮುಖ್ಯ ಅತಿಥಿಗಳು : ಅಭಾವೀಲಿ ಮಹಾಸಭಾ ಅಧ್ಯಕ್ಷ ಹಿನಕಲ್ ಬಸವರಾಜು, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ಆರ್. ವೃಷಬೇಂದ್ರ, ಸ್ಥಳ: ಡಾ.ಎಸ್.ರಾಧಾಕೃಷ್ಣನ್ ಸಭಾ ಭವನ, ಶಿಕ್ಷಕರ ಬಡಾವಣೆ, ಸಂಜೆ 5.30ಕ್ಕೆ.

■ **ಬಿದಿರು ಥಿಯೇಟರ್**: ಬಿದಿರು ಥಿಯೇಟರ್ ತಂಡದ ಜೂನಿಯರ್ ಕಲಾವಿದರಿಂದ 'ಉರಿ ಚಮ್ಮಾಳಿಗೆ' ಜನಪದ ನಾಟಕ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತುಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ. ಮೀನಾಕ್ಷಿ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಅರೋಗ್ಯ ನೋವು ನಿರ್ವಹಣೆ ಈ ಕುರಿತು ಮೈಸೂರಿನ ಅನಸ್ತೇಸಿಯಾಲಜಿ ತಜ್ಞರು ಹಾಗೂ ಪೇನ್ ಫಿಸಿಷಿಯನ್ ಡಾ. ರಾಧಿಕಾ ಅವರೊಂದಿಗೆ ಮಾತುಕತೆ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಿ. ವಿ. ದುರ್ಗಾ ಭವಾನಿ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ. ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತಕುಮಾರ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ನಿರ್ಮಲಾ ರಾಜಶೇಖರ್–ವೀಣಾ ವಾದನ, 4.00 ಮಹಿಳಾರಂಗ, ಸಖೀ ಸಂವಾದ ಮಹಿಳಾ ಬರಹಗಾರರ ಜೊತೆ ಮಾತುಕತೆ, ಭಾಗವಹಿಸುತ್ತಾರೆ ಕಾದಂಬರಿಗಾರ್ತಿ ಪೂರ್ಣಿಮಾ ಸುರೇಶ್, ಪ್ರಸ್ತುತಿ–ನೇತ್ರಾ ಕೆ., 4.30 ವೃತ್ತಿ ಮಾರ್ಗದರ್ಶನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪ್ರಾಣಿ ಕಲ್ಯಾಣದ ಪ್ರಾಮುಖ್ಯತೆ ಈ ಕುರಿತು ಮೈಸೂರಿನ ಪಶುಪಾಲನೆ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕರಾದ ಡಾ. ಆರ್.ವಿ. ರಾಘವ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಆರ್. ಎನ್. ಶ್ರೀಲತಾ – ಹಾಡುಗಾರಿಕೆ, 10.00 ತತ್ವ ಸಂಚಾರ– ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

ಮೈಸೂರಲ್ಲಿ ನಡೆಯುತ್ತಿರುವ ಕೆಲ ಕಾಮಗಾರಿ ಪರಿಶೀಲಿಸಿದ ಸಿಎಂ ಸಿದ್ದರಾಮಯ್ಯ

ವೈಟ್ ಟ್ಯಾಪಿಂಗ್, ಭೂಗತ ಕೇಬಲ್ ಅಳವಡಿಕೆ, ಮಹಾರಾಣಿ ಕಾಲೇಜು, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಕಾಮಗಾರಿ ವೀಕ್ಷಣೆ

- ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಾಕೀತು
- ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಕಾಮಗಾರಿ ಪರಿಶೀಲನೆಗೆ ಸಚಿವರು, ಶಾಸಕರು, ಅಧಿಕಾರಿಗಳು ಸಾಥ್
- ಕಾಮಗಾರಿ ಕುರಿತು ಸಮಗ್ರ ಮಾಹಿತಿ ಪಡೆದ ಸಿಎಂ; ತ್ವರಿತಗೊಳಿಸಲು ಸ್ಥಳದಲ್ಲೇ ಅಧಿಕಾರಿಗಳಿಗೆ ಸೂಚನೆ





ಮೈಸೂರಿನ ಅರವಿಂದನಗರದಲ್ಲಿ ಚೆಸ್ಕಾಂನವರು ಭೂಗತ ಕೇಬಲ್ ಅಳವಡಿಸುತ್ತಿರುವ ಕಾಮಗಾರಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಪರಿಶೀಲನೆ ನಡೆಸಿದರು. (ಎಡಚಿತ್ರ), ಮೈಸೂರಿನ ಜೆಎಲ್‌ಬಿ ರಸ್ತೆಯುಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಮಹಾರಾಣಿ ಕಾಲೇಜಿನ ನೂತನ ಕಟ್ಟಡದ ಕಾಮಗಾರಿಯನ್ನು ವೀಕ್ಷಿಸಿದರು.(ಮಧ್ಯಚಿತ್ರ), ಮೈಸೂರಿನ ಬನ್ನಿಮಂಟಪದಲ್ಲಿ ನಿರ್ಮಿಸುತ್ತಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಕಾಮಗಾರಿ ಬಗ್ಗೆ ಶಾಸಕ ತನ್ವೀರ್ ಸೇಠ್ ಅವರು ಸಿದ್ದರಾಮಯ್ಯ ಅವರಿಗೆ ಮಾಹಿತಿ ನೀಡುತ್ತಿರುವುದನ್ನು (ಕೊನೆ ಚಿತ್ರ) ಕಾಣಬಹುದು.

ಮೈಸೂರು, ಮೇ14(ಬಿಎಲ್‌ಯು)– ಮೈಸೂರು ನಗರದಲ್ಲಿ ಪ್ರಗತಿಯಲ್ಲಿರುವ ವೈಟ್ ಟ್ಯಾಪಿಂಗ್, ಸೆಸ್ಕ್ ವತಿಯಿಂದ ಭೂಗತ ಕೇಬಲ್ ಅಳವಡಿಕೆ, ಮಹಾರಾಣಿ ಕಾಲೇಜು ಹಾಗೂ ಹಾಸ್ಟೆಲ್ ನೂತನ ಕಟ್ಟಡ ಹಾಗೂ ಬನ್ನಿಮಂಟಪದಲ್ಲಿ ನಿರ್ಮಾಣವಾಗುತ್ತಿರುವ ನೂತನ ಬಸ್ ನಿಲ್ದಾಣದ ಕಾಮಗಾರಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಪರಿಶೀಲನೆ ನಡೆಸಿದರು.

ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆಗಾಗಿ ಸಿದ್ದರಾಮಯ್ಯ ಅವರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಕೆ.ಹರೀಶ್ ಗೌಡ, ಯತೀಂದ್ರ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಸೇರಿದಂತೆ ಇತರೆ ಅಧಿಕಾರಿಗಳ ಜೊತೆ ಸಿಟಿ ರೌಂಡ್ಸ್ ಹೊರಟರು.

ಮೊದಲಿಗೆ ಮೈಸೂರಿನ ಅರವಿಂದನಗರದ ಶಿವ ಟೆಂಪಲ್ ಜೋಡಿ ರಸ್ತೆಯಲ್ಲಿ ಸೆಸ್ಕ್‌ನವರು ಹಾಲಿ ಇರುವ 11 ಕೆ.ವಿ.ಓವರ್ ಹೆಡ್ ವಿದ್ಯುತ್ ಮಾರ್ಗವನ್ನು ಭೂಗತ ಕೇಬಲ್ (ಅಂಡರ್ ಗ್ರೌಂಡ್ ಕೇಬಲ್)ಗೆ ಬದಲಾಯಿಸುವ ಕಾಮಗಾರಿಯನ್ನು ಪರಿಶೀಲನೆ ನಡೆಸಿದರು.

ಈ ವೇಳೆ ಮೈಸೂರು ವೃತ್ತದ ಸೆಸ್ಕ್ ಅಧೀಕ್ಷಕ ಇಂಜಿನಿಯರ್ ಸುನೀಲ್‌ಕುಮಾರ್ ಅವರು ಭೂಗತ ಕೇಬಲ್ ಅಳವಡಿಸುವ ಯೋಜನೆಯ ಬಗ್ಗೆ ಸಮಗ್ರ ವಿವರ ನೀಡಿದರು. ಮೈಸೂರು ನಗರದ ರಿಂಗ್ ರಸ್ತೆ ಒಳ ಭಾಗದಲ್ಲಿ ಒಟ್ಟು 588 ಕೋಟಿ ವೆಚ್ಚದಲ್ಲಿ 871 ಕಿಲೋಮೀಟರ್ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಇದರಲ್ಲಿ ಈಗಾಗಲೇ 227 ಕಿಲೋಮೀಟರ್ ಕೇಬಲ್ ಅಳವಡಿಸುವ ಕಾಮಗಾರಿ ಪೂರ್ಣಗೊಂಡಿದೆ. ಎರಡು ವರ್ಷಗಳ ನಿಗದಿತ ವೇಳೆಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

ಭೂಗತ ಕೇಬಲ್ ಅಳವಡಿಕೆಯಿಂದ ಕಡಿಮೆ ನಿರ್ವಹಣಾ ವೆಚ್ಚ, ಕಡಿಮೆ ವಿದ್ಯುತ್ ಅಡಚಣೆ, ನಗರದ ಸೌಂದರ್ಯ ಕಾಯ್ದುಕೊಳ್ಳುವುದರೊಂದಿಗೆ ಹಲವು ಪ್ರಯೋಜನಗಳಿವೆ ಎಂದು ಅವರು ಸಿದ್ದರಾಮಯ್ಯ ಅವರಿಗೆ ವಿವರಣೆ ನೀಡಿದರು.

ವೈಟ್ ಟ್ಯಾಪಿಂಗ್ ಪರಿಶೀಲನೆ: ಮೈಸೂರು ನಗರದ ಮಾನಂದವಾಡಿ ರಸ್ತೆಯಲ್ಲಿ ಪ್ರಗತಿಯಲ್ಲಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ಕೂಡ ಇದೇ ವೇಳೆ ಸಿದ್ದರಾಮಯ್ಯ ಪರಿಶೀಲನೆ ನಡೆಸಿದರು. ವೈಟ್ ಟ್ಯಾಪಿಂಗ್ ಮಾಡುವುದರಿಂದ ಪದೇ ಪದೇ ಡಾಂಬರೀಕರಣ ಮಾಡುವುದು ತಪ್ಪಲಿದ್ದು, ಭಾರೀ ಉಳಿತಾಯವಾಗಲಿದೆ. ಕಡಿಮೆ ನಿರ್ವಹಣೆಯಲ್ಲಿ ಕನಿಷ್ಠ 20 ವರ್ಷಗಳ ಕಾಲ ಕಾಂಕ್ರೀಟ್ ರಸ್ತೆ ಬಾಳಿಕೆಗೆ ಬರಲಿದೆ. ಈಗಾಗಲೇ ಒಳ ಚರಂಡಿ ಹಾಗೂ ಡಕ್ ನಿರ್ಮಾಣ ಸೇರಿದಂತೆ ಹಲವು ಕಾಮಗಾರಿಯನ್ನು ಮಾಡಿರುವುದರಿಂದ ರಸ್ತೆ ಅಗೆಯುವುದು ತಪ್ಪುತ್ತದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಮುಖ್ಯಮಂತ್ರಿಗಳಿಗೆ ವಿವರ ನೀಡಿದರು.

ನಗರದಲ್ಲಿ 33.18 ಕೋಟಿ ವೆಚ್ಚದಲ್ಲಿ 46 ಕಿಲೋಮೀಟರ್ ವೈಟ್ ಟಾಪಿಂಗ್ ಮಾಡಲಾಗುತ್ತಿದೆ. ರೈಲ್ವೆ ನಿಲ್ದಾಣ ವೃತ್ತದಿಂದ ನಂಜನಗೂಡು ರಸ್ತೆಯ ಎಲೆತೋಟ ಜಂಕ್ಷನ್ ವರೆಗೆ, ಜೆಎಲ್‌ಬಿ ರಸ್ತೆಯಿಂದ ರೈಲ್ವೆ ಮ್ಯೂಜಿಯಂ, ಆಕಾಶವಾಣಿ, ಒಂಟಿಕೊಪ್ಪಲು ಮಾರ್ಗವಾಗಿ ಮೇಟಗಳ್ಳಿ ವರೆಗೆ, ಗ್ರಾಮಾಂತರ ಬಸ್ ನಿಲ್ದಾಣದಿಂದ ಇರ್ವಿನ್ ರಸ್ತೆ ಮಾರ್ಗವಾಗಿ ರೈಲ್ವೆ ನಿಲ್ದಾಣದವರೆಗೆ ಸೇರಿದಂತೆ ನಗರದ 12 ಮಾರ್ಗಗಳಲ್ಲಿ ವೈಟ್ ಟಾಪಿಂಗ್ ಮಾಡಲಾಗುತ್ತಿದೆ.

> “ವೈಟ್ ಟ್ಯಾಪಿಂಗ್‌ನಲ್ಲಿ ಕಬ್ಬಿಣ ಬಳಕೆ ಮಾಡದಿರುವ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆ ಎಂದು ಸಿದ್ದರಾಮಯ್ಯ ತಿಳಿಸಿದರು. ಮೈಸೂರು ನಗರದಲ್ಲಿ ಈಗಾಗಲೇ ನಿರ್ಮಾಣ ಮಾಡಿರುವ ವೈಟ್ ಟ್ಯಾಪಿಂಗ್‌ನಲ್ಲಿ ಕಬ್ಬಿಣ ಬಳಕೆ ಮಾಡಲಾಗಿದೆ. ಆದರೆ ನೂತನ ವೈಟ್ ಟ್ಯಾಪಿಂಗ್‌ನಲ್ಲಿ ರಸ್ತೆ ಅಕ್ಕ ಪಕ್ಕ ಸಣ್ಣ ಸರಳುಗಳನ್ನು ಮಾತ್ರ ಅಳವಡಿಸಲಾಗಿದೆ ಎಂದು ಪತ್ರಕರ್ತರು ಗಮನ ಸೆಳೆದಾಗ ಈ ಬಗ್ಗೆ ಮಾಹಿತಿ ಪಡೆಯಲು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಕರೆದರು. ಆದರೆ ಅವರು ಸ್ಥಳದಲ್ಲಿ ಇಲ್ಲದ ಹಿನ್ನೆಲೆಯಲ್ಲಿ ಈ ಬಗ್ಗೆ ಮಾಹಿತಿ ಪಡೆಯುವೆ ಎಂದು ಸಿದ್ದರಾಮಯ್ಯ ತಿಳಿಸಿದರು.

ವೈಟ್ ಟಾಪಿಂಗ್ ಪರಿಸರ ಸ್ನೇಹಿಯಾಗಿದ್ದು, ಉತ್ತಮ ಇಂಧನ ದಕ್ಷತೆ ಒದಗಿಸುತ್ತದೆ. ಅಲ್ಲದೆ ರಾತ್ರಿ ವೇಳೆ ವಾಹನ ಸವಾರರಿಗೆ ರಸ್ತೆ ಗೋಚರವಾಗುತ್ತದೆ. ಈ ಎಲ್ಲಾ ವಿವರವನ್ನು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ನೀಡಿದರು.

ಮಹಾರಾಣಿ ಕಾಲೇಜು ಕಟ್ಟಡ: ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ 170 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಾಣ ಮಾಡುತ್ತಿರುವ ಮಹಾರಾಣಿ ಮಹಿಳಾ ವಿಜ್ಞಾನ ಮತ್ತು ಕಲಾ ಕಾಲೇಜು ಹಾಗೂ ಹಾಸ್ಟೆಲ್ ಕಟ್ಟಡಗಳ ಕಾಮಗಾರಿಯನ್ನು ಸಿದ್ದರಾಮಯ್ಯ ಪರಿಶೀಲನೆ ಮಾಡಿದರು. ಪಾರಂಪರಿಕ ಶೈಲಿಯ ಕಟ್ಟಡ ಶಿಥಿಲವಾಗಿದ್ದ ಹಿನ್ನೆಲೆಯಲ್ಲಿ ಅಕ್ಟೋಬರ್ 21, 2022 ರಂದು ಒಂದು ಭಾಗ ಧರಶಾಯಿಯಾಗಿತ್ತು ಈ ಹಿನ್ನೆಲೆ ಅದೇ ಜಾಗದಲ್ಲಿ ನೂತನ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ.

ನೂತನ ಕಾಲೇಜು ಕಟ್ಟಡದ ನಕ್ಷೆ ವೀಕ್ಷಣೆಯ ಜೊತೆಗೆ ಕಾಮಗಾರಿ ಪರಿಶೀಲನೆ ಕೂಡ ಮಾಡಿದ ಸಿದ್ದರಾಮಯ್ಯ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಹಾಲಿ ಪಾರಂಪರಿಕ ಶೈಲಿಯಲ್ಲಿರುವ ಕಾಲೇಜು ಕಟ್ಟಡ ಹಾಗೂ ಗ್ರಂಥಾಲಯದ ನವೀಕರಣ, ಪಾರಂಪರಿಕ ಶೈಲಿಯಲ್ಲಿ ನಿರ್ಮಾಣ ಮಾಡುತ್ತಿರುವ ನೂತನ ಕಾಲೇಜು ಕಟ್ಟಡದಲ್ಲಿ ಸೆಮಿನಾರ್ ಸಭಾಂಗಣ, ಹಿಂಭಾಗ 20 ತರಗತಿ ಕೊಠಡಿ, 10 ಪ್ರಯೋಗಾಲಯಗಳು, 4 ವಿವಿಧೋದ್ದೇಶ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. 1,400 ವಿದ್ಯಾರ್ಥಿಗಳ ಸಾಮರ್ಥ್ಯದ ಎರಡು ಪ್ರತ್ಯೇಕ ಹಾಸ್ಟೆಲ್ ನಿರ್ಮಿಸುತ್ತಿದ್ದು, ನೂತನ ಕಾಲೇಜು ಕೊಠಡಿಯಲ್ಲಿ ಪೀಠೋಪಕರಣದ ವ್ಯವಸ್ಥೆ ಕೂಡ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಸಿದ್ದರಾಮಯ್ಯ ಅವರಿಗೆ ಮಾಹಿತಿ ನೀಡಿದರು.

ನೂತನ ಕೆಎಸ್‌ಆರ್ ಟಿಸಿ ಬಸ್ ನಿಲ್ದಾಣ: ಮೈಸೂರಿನ ಬನ್ನಿಮಂಟಪದಲ್ಲಿ 129 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಕಾಮಗಾರಿಯನ್ನು ಕೂಡ ಈ ವೇಳೆ ಸಿದ್ದರಾಮಯ್ಯ ವೀಕ್ಷಿಸಿದರು. ಬಸ್ ನಿಲ್ದಾಣದಲ್ಲಿ ವಾಹನ ನಿಲುಗಡೆಗೆ ನೆಲ ಮಹಡಿ ನಿರ್ಮಿಸುತ್ತಿದ್ದು, 4 ಸಾವಿರ ದ್ವಿಚಕ್ರ ಹಾಗೂ 200 ಕಾರು ಸೇರಿದಂತೆ ಇತರೆ ವಾಹನಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಕೆಎಸ್‌ಆರ್ ಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು. ಪ್ರಯಾಣಿಕರ ಆಗಮನ ಹಾಗೂ ನಿರ್ಗಮನಕ್ಕಾಗಿ ದ್ವಾರಗಳು, ಟಿಕೆಟ್ ಬುಕಿಂಗ್ ಕೌಂಟರ್, ಸುಂದರವಾದ ಲ್ಯಾಂಡ್ ಸ್ಕೇಪ್ ಇರುವ ಗಾರ್ಡನ್ ಕೂಡ ನಿರ್ಮಾಣ ಮಾಡಲಾಗುತ್ತಿದೆ. ಮೊದಲ ಮಹಡಿಯಲ್ಲಿ ವಿಶ್ರಾಂತಿ ಕೊಠಡಿ, ಡಾರ್ಮಿಟರಿ ಹಾಗೂ ಕಚೇರಿಗಾಗಿ ಜಾಗ ಮೀಸಲಿಡಲಾಗುತ್ತಿದೆ ಎಂದು ವಿವರಿಸಿದರು.

ಪ್ರಯಾಣಿಕರಿಗೆ ಆಧುನಿಕ ಸೌಕರ್ಯ ಕಲ್ಪಿಸುತ್ತಿದ್ದು, ಬಸ್ ನಿಲ್ದಾಣದಲ್ಲಿ 75 ಬಸ್ ಅಂಕಣಗಳಿದ್ದು, 35 ಬಸ್‌ಗಳ ನಿಲುಗಡೆಗೆ ಪ್ರತ್ಯೇಕ ಸ್ಥಳಾವಕಾಶ ಕಲ್ಪಿಸಲಾಗಿದೆ. ಮಹಿಳೆಯರಿಗಾಗಿ ಪ್ರತ್ಯೇಕ ವಿಶ್ರಾಂತಿ ಗೃಹ ಮತ್ತು ಸಾಮಾನ್ಯ ಪ್ರಯಾಣಿಕರಿಗೆ ವಿಶಾಲವಾದ ಆಸನ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ವಿವರಿಸಿದರು.

ಮಹಿಳೆಯರು ಹಾಗೂ ಪುರುಷರಿಗಾಗಿ ಪ್ರತ್ಯೇಕವಾದ 6 ಶೌಚಾಲಯಗಳ ಬ್ಲಾಕ್, ವಿಕಲಚೇತನರು ಹಾಗೂ ತೃತಿಯ ಲಿಂಗಿಗಳಿಗೆ ಪ್ರತ್ಯೇಕ ಶೌಚಾಲಯ, 4 ಲಿಫ್ಟ್‌ಗಳು, 2 ಎಲಿವೇಟರ್‌ಗಳು, ಗ್ರಂಥಾಲಯ, ಉಪಹಾರ ಗೃಹ, ನಿರಂತರ ಮಾಹಿತಿ ನೀಡಲು ವಿಚಾರಣಾ ಕೇಂದ್ರಗಳು, ವಿಮಾನ ನಿಲ್ದಾಣ ಮಾದರಿಯಲ್ಲಿ ಕಾಯುವಿಕೆಗಾಗಿ ಹವಾನಿಯಂತ್ರಿತ ಸಭಾಂಗಣ, ಉಚಿತ ಮೊಬೈಲ್ ಚಾರ್ಜಿಂಗ್ ವ್ಯವಸ್ಥೆ ಕೂಡ ಕಲ್ಪಿಸಲಾಗುತ್ತಿದೆ ಎಂಬ ಮಾಹಿತಿ ನೀಡಲಾಯಿತು.

ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಸಿಟಿ ರೌಂಡ್ಸ್ ಮೂಲಕ ಸಿದ್ದರಾಮಯ್ಯ ಕಾಮಗಾರಿ ಸ್ಥಳಗಳ ವೀಕ್ಷಣೆಯ ನಂತರ ನಿಗದಿತ ಸಮಯದಲ್ಲಿ ಎಲ್ಲಾ ಕಾಮಗಾರಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ಯತೀಂದ್ರ, ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ ಸೇರಿದಂತೆ ಹಲವು ಅಧಿಕಾರಿಗಳು ಸಿದ್ದರಾಮಯ್ಯ ಅವರ ಸಿಟಿ ರೌಂಡ್ಸ್‌ನಲ್ಲಿ ಭಾಗಿಯಾಗಿದ್ದರು.

ಮೈಸೂರಿನ ಇಬ್ಬರು ಮಹಿಳೆಯರಿಗೆ ಆನ್‌ಲೈನ್ ವಂಚನೆ

44 ಲಕ್ಷ ರೂ. ವಂಚಿಸಿರುವ ವಂಚಕರು, ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು,ಮೇ 14(ಜಿಎ)–ಮೈಸೂರಿನಲ್ಲಿ ಇಬ್ಬರು ಹಿರಿಯ ಮಹಿಳೆಯರು ಪ್ರತ್ಯೇಕ ಪ್ರಕರಣಗಳಲ್ಲಿ ಆನ್‌ಲೈನ್ ಮೂಲಕ ಬರೋಬ್ಬರಿ 44 ಲಕ್ಷ ರೂ. ಹಣ ಕಳೆದುಕೊಂಡಿದ್ದು, ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೈಸೂರಿನ ಗೋಕಲಂ ಬಡಾವಣೆಯ ನಿವಾಸಿ 55 ವರ್ಷದ ಮಹಿಳೆಯೊಬ್ಬರು ಗೂಗಲ್‌ನಲ್ಲಿ ಖಾಸಗಿ ಇನ್ಸೂರೆನ್ಸ್ ಪಾಲಿಸಿಗೆ ಸಂಬಂಧಿಸಿದಂತೆ ಕಸ್ಟಮರ್ ಕೇರ್ ನಂಬರ್ ಅನ್ನು ಗೂಗಲ್‌ನಲ್ಲಿ ಹುಡುಕಿದ್ದಾರೆ. ನಂತರ ಅವರಿಗೆ 2025ರ ಮೇ 5ರಂದು ಹೊಸ ನಂಬರ್‌ನಿಂದ ಕರೆ ಬಂದಿದ್ದು, ಟ್ರೂ ಕಾಲರ್‌ನಲ್ಲಿ ಭೀಮ್ ಲೋಕ್ಪಾಲ್ ಎಂದು ತೋರಿಸಿದೆ. ಕರೆ ಸ್ವೀಕರಿಸಿದ ನಂತರ ತಾನು ಡೋಲಿ ಸುರಜಿತ್ ಎಂದು ಪರಿಚಯಿಸಿಕೊಂಡು ಇನ್ಸೂರೆನ್ಸ್ ಪಾಲಿಸಿಗೆ ಸಂಬಂಧಿಸಿದಂತೆ ಕರೆ ಮಾಡಿದ್ದೇನೆ ಎಂದು ತಿಳಿಸಿ, ನಂತರ ಅಧಿಕೃತ ಸರ್ಕಾರದ ಐಡಿ ಕಾರ್ಡ್ ಎಂದು ಹಂಚಿಕೊಂಡು ನಂಬಿಸಿದ್ದಾನೆ.

ನಂತರ ಈ ಹಿಂದಿನ ಇನ್ಸೂರೆನ್ಸ್ ಕಂಪನಿಯಿಂದ ಆದ ತೊಂದರೆ ಬಗ್ಗೆ ದೂರು ಪತ್ರವನ್ನು ಬರೆದು ವಾಟ್ಸಾಪ್ ಸಂಖ್ಯೆಗೆ ಕಳುಹಿಸುವಂತೆ ತಿಳಿಸಿದ್ದಾನೆ. ಅದರಂತೆ ಮಹಿಳೆ ಮೇ 7ರಂದು ಪತ್ರ ಕಳುಹಿಸಿದ್ದಾರೆ. ದೂರಿನಲ್ಲಿ 60 ಸಾವಿರ ರೂ. ಹಣವನ್ನು ಕಂಪನಿಗೆ ಹೆಚ್ಚುವರಿಯಾಗಿ ಪಾವತಿಸಿರುವುದನ್ನು ತಿಳಿಸಿದರು. ನೀವು ಪಾವತಿಸಿದ ಹಣ ವಾಪಾಸ್ ಬೇಕಾದರೆ 20 ಸಾವಿರ ರೂ ಕಳುಹಿಸುವಂತೆ ವಾಟ್ಸಾಪ್ ಮೂಲಕ ಸೂಚಿಸಿದ್ದಾನೆ. ಅದನ್ನು ನಂಬಿದ ಮಹಿಳೆ 20 ಸಾವಿರ ರೂ.ಗಳನ್ನು ಅವರು ಹೇಳಿದ ಬ್ಯಾಂಕ್ ಖಾತೆಗೆ ಪಾವತಿಸಿದ್ದಾರೆ.

ಮೇ 9ರಂದು ಮನೀಷಾ ಜಾದವ್ ಎಂಬುವರು ಕರೆ ಮಾಡಿ 43,736 ರೂ ಪಾವತಿಸುವಂತೆ ತಿಳಿಸಿದ್ದಾರೆ. ನಂತರ ಮೇ 14ರಂದು ಸ್ಟಾಂಪ್ ಶುಲ್ಕ ಎಂದು ಹೇಳಿ ಒಂದು ಲಕ್ಷ ರೂ ಪಾವತಿಸಲು ತಿಳಿಸಿದ್ದಾರೆ. ಹೀಗೆ ಹಂತ ಹಂತವಾಗಿ 20,07,561 ರೂಗಳನ್ನು ಮಹಿಳೆ ಪಾವತಿಸಿಕೊಂಡು ಬಂದಿದ್ದಾರೆ. ಮರು ಪಾವತಿ ಬಗ್ಗೆ ಪ್ರಶ್ನಿಸಿದಾಗ ಒಟ್ಟು ಮೊತ್ತದ ಮೇಲೆ ಶೇ.30ರಷ್ಟು ಏಜೆಂಟ್ ಕಮಿಷನ್ ಪಾವತಿಸಿ ನಿಮ್ಮ ಹಣ ವಾಪಸ್ ಆಗಲು 90 ದಿನ ಬೇಕಾಗುತ್ತದೆ ಎಂದು ತಿಳಿಸಿದ್ದಾಗ ಮಹಿಳೆಗೆ ತಾನು 20,73,297 ರೂ. ವಂಚನೆಗೊಳಗಾಗಿರುವುದು ಮನವರಿಕೆಯಾಗಿ 1930ಗೆ ಕರೆ ಮಾಡಿ ದೂರು ಸಲ್ಲಿಸಿದ್ದಾರೆ.

ಎಪಿಕೆ ಫೈಲ್‌ನಿಂದ ಹಣ ಮಾಯ: ಮೈಸೂರಿನ ಕುವೆಂಪುನಗರದ 73 ವರ್ಷದ ಮಹಿಳೆಯೊಬ್ಬರು ತಮ್ಮ ಕೆನರಾ ಬ್ಯಾಂಕ್ ಖಾತೆಯಿಂದ 2025ರ ಜೂನ್‌ನಲ್ಲಿ ಹಣ ಡ್ರಾ ಮಾಡಿದ್ದಾರೆ. ನಂತರ ಈ ವರ್ಷ (2026) ಮೇ 12ರಂದು ಕುವೆಂಪು ನಗರದ ಕೆನರಾ ಬ್ಯಾಂಕ್ ಬ್ರಾಂಚ್‌ಗೆ ಭೇಟಿ ನೀಡಿದ್ದು, ಈ ವೇಳೆ ಬ್ಯಾಂಕ್ ಮ್ಯಾನೇಜರ್ ನಿಮ್ಮ ಖಾತೆಯಲ್ಲಿ ಸಾಕಷ್ಟು ಬ್ಯಾಲೆನ್ಸ್ ಇಲ್ಲ ಎಂದು ತಿಳಿಸಿದ್ದಾರೆ. ಈ ವೇಳೆ ಬ್ಯಾಂಕ್ ಸ್ಟೇಟ್‌ಮೆಂಟ್ ಪರಿಶೀಲಿಸಿದಾಗ 2026ರ ಫೆಬ್ರವರಿ 15ರಿಂದ ಏಪ್ರಿಲ್ 9ರವರೆಗೆ ಅಪರಿಚಿತ ವ್ಯಕ್ತಿಗಳಿಗೆ 24,05,884,52 ರೂ. ವರ್ಗಾವಣೆಯಾಗಿರುವುದು ಕಂಡುಬಂದಿದೆ. ಮಹಿಳೆ ತಕ್ಷಣ 1930ಗೆ ಕರೆ ಮಾಡಿ ದೂರು ಸಲ್ಲಿಸಿದ್ದಾರೆ. ನಂತರ ಮಹಿಳೆಯ ಮೊಬೈಲ್ ಪರಿಶೀಲಿಸಿದ್ದಾಗ ಮಹಿಳೆಯ ಅರಿವಿಗೆ ಬಾರದೇ ಅವರ ಮೊಬೈಲ್ ಫೋನ್‌ಗೆ ಎಪಿಕೆ ಫೈಲ್ ಇನ್ಸ್ಟಾಲ್ ಆಗಿ, ಡಿಲಿಟ್ ಆಗಿರುವುದರಿಂದ ವಂಚನೆಯಾಗಿದೆ ಎಂದು ತಿಳಿದುಬಂದಿದೆ. ಈ ಸಂಬಂಧ ಸೆನ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಸರ್ಕಾರಿ ನೌಕರರು ಖಾದಿ ಧರಿಸಲು ಅನುವಾಗುವಂತೆ ಮೈಸೂರು ಡಿಸಿ ಕಚೇರಿ ಆವರಣದಲ್ಲಿ ‘ಖಾದಿ ಮೇಳ’

ರಿಯಾಯಿತಿ ದರದಲ್ಲಿ ಖಾದಿ ವಸ್ತ್ರಗಳ ಮಾರಾಟಕ್ಕೆ ಉತ್ತಮ ಪ್ರತಿಕ್ರಿಯೆ



ಮೈಸೂರಿನ ಡಿಸಿ ಕಚೇರಿ ಸಿಬ್ಬಂದಿ, ಸಾರ್ವಜನಿಕರು ಖಾದಿ ಬಟ್ಟೆ ಖರೀದಿಸುತ್ತಿರುವುದು.

ಮೈಸೂರು,ಮೇ 14(ಎಂಟಿವೈ)– ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಸ್ಥೆ ವತಿಯಿಂದ ಆಯೋಜಿಸಿರುವ ಎರಡು ದಿನಗಳ ‘ಖಾದಿ ಮೇಳ’ಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿ ಮಾತ್ರವಲ್ಲದೆ, ಸಾರ್ವಜನಿಕರು ಖಾದಿ ಬಟ್ಟೆ ಖರೀದಿಸಲು ಮುಗಿ ಬಿದ್ದರು.

ಖಾದಿ ಉಡುಪು ಬಳಕೆ ಉತ್ತೇಜಿಸಲು ರಾಷ್ಟ್ರೀಯ ಹಬ್ಬದ ದಿನ ಸರ್ಕಾರಿ, ಅರೆ ಸರ್ಕಾರಿ ಹಾಗೂ ವಿವಿಧ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಅಧಿಕಾರಿ ಹಾಗೂ ಸಿಬ್ಬಂದಿ ಕಡ್ಡಾಯವಾಗಿ ಖಾದಿ ಉಡುಪನ್ನೇ ಧರಿಸಬೇಕೆಂದು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಸ್ಥೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಎರಡು ದಿನಗಳ ಖಾದಿ ಮೇಳದಲ್ಲಿ ಪುರುಷರು ಹಾಗೂ ಮಹಿಳೆಯರ ಖಾದಿ ಉಡುಪನ್ನು ಮಾರಾಟ ಮಾಡಲು ಎರಡು ಮಳಿಗೆ ಸ್ಥಾಪಿಸಿದೆ.

ಖಾದಿ ಬಟ್ಟೆಗಳ ಮೇಲೆ ಶೇ.35ರಷ್ಟು ರಿಯಾಯಿತಿ ಸೌಲಭ್ಯ ಕಲ್ಪಿಸಲಾಗಿದ್ದು, ಗುಣಮಟ್ಟದ ಖಾದಿ ಬಟ್ಟೆ ಕೈಗೆಟಕುವ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಸರ್ಕಾರಿ ನೌಕರರಿಗೆ ತಮ್ಮ ಕಚೇರಿ ಆವರಣದಲ್ಲಿ ಖಾದಿ ಬಟ್ಟೆ ಖರೀದಿಸಲು ಅವಕಾಶ ಕಲ್ಪಿಸಲಾಗಿದ್ದು, ಡಿಸಿ ಕಚೇರಿ ಸಂಕೀರ್ಣದಲ್ಲಿರುವ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಖಾದಿ ಖರೀದಿಸಿದರು.

ಮೇಳದಲ್ಲಿ ಖಾದಿ ಶರ್ಟ್ 600 ರೂ., ವಾಸ್‌ಕೋಟ್ 1200ರಿಂದ 1300 ರೂ., ಖಾದಿ ಶರ್ಟ್ ಬಟ್ಟೆ ಮೀಟರ್‌ಗೆ 400 ರಿಂದ 600 ರೂ., ಖಾದಿ ಲುಂಗಿ 400 ರೂ., ಖಾದಿ ಟವೆಲ್ 190 ರೂ., ಖಾದಿ ಸೀರೆ 2500ರಿಂದ 3500 ರೂ., ಖಾದಿ ಡ್ರೆಸ್ ಮೆಟೀರಿಯಲ್ ಮೀಟರ್ 600 ರೂ., ಖಾದಿ ಸಿಲ್ಕ್ ಸೀರೆ 5 ಸಾವಿರ ರೂ.ನಿಂದ 10 ಸಾವಿರ ರೂ.ವರೆಗೆ ದರ ನಿಗದಿ ಮಾಡಲಾಗಿದೆ. ಈ ಉತ್ಪನ್ನಗಳ ಮೂಲ ಬೆಲೆಯಲ್ಲಿ ಶೇ.35ರಷ್ಟು ಡಿಸ್ಕೌಂಟ್ ನೀಡಿರುವುದರಿಂದ ಸರ್ಕಾರಿ ನೌಕರರು ಮಾತ್ರವಲ್ಲದೆ, ಡಿಸಿ ಕಚೇರಿಗೆ ಬಂದ ಸಾರ್ವಜನಿಕರು ತಮಗಿಷ್ಟವಾದ ಖಾದಿ ಬಟ್ಟೆ ಖರೀದಿಸಿದರು. ಮೇ 15 ಕೂಡ ಮೇಳ ನಡೆಯಲಿದೆ.

ಅತ್ತ, ಇಂಧನ ಉಳಿತಾಯಕ್ಕೆ ಪ್ರಧಾನಿ ನರೇಂದ್ರ ಮೋದಿ ಕರೆ; ಜೊತೆಗೆ ಸ್ವಯಂ ಪಾಲನೆ!

ಇತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ‘ಮೈಸೂರು ಸಿಟಿ ರೌಂಡ್ಸ್’ಗೆ ಸಾಥ್ ನೀಡಿದ್ದು 30ಕ್ಕೂ ಅಧಿಕ ವಾಹನ!!

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ ತಮ್ಮ ಬೆಂಗಾವಲು ಪಡೆ ಕಡಿತ; ಅಮಿತ್ ಶಾ ಒಂದೇ ವಾಹನ ಬಳಕೆ
- ಆದರೆ, ಸಿದ್ದರಾಮಯ್ಯ ಹಿಂದೆ–ಮುಂದೆ ಸಾಲು... ಸಾಲು ವಾಹನಗಳ ದಂಡು; ಇಂಧನ ಮಿತವ್ಯಯ ಯಾರಿಗೆ ಅನ್ವಯ



> “ಇಂಧನ ಮಿತ ಬಳಕೆಯನ್ನು ಬೇರೆ ರಾಜ್ಯಗಳು ಯಾವ ರೀತಿ ಪಾಲಿಸುತ್ತಿವೆ ಎಂಬುದನ್ನು ಮೊದಲು ಗಮನಿಸುತ್ತೇನೆ. ತರುವಾಯ ಈ ಬಗ್ಗೆ ನಿರ್ಧಾರ ಮಾಡುತ್ತೇನೆ. ಹೀಗೆ ಬೆಂಗಾವಲು ಪಡೆ ಮಿತಗೊಳಿಸಿ ಇಂಧನ ಉಳಿತಾಯ ಮಾಡುವುದು ತಾತ್ಕಾಲಿಕ ಕ್ರಮವಷ್ಟೆ. ಇದರ ಬದಲು ಶಾಶ್ವತ ಪರಿಹಾರ ಸೂತ್ರವಾಗಿ ಕೇಂದ್ರ ಸರ್ಕಾರ ಬೇರೆ ಬೇರೆ ದೇಶಗಳ ಜೊತೆ ಸಮಾಲೋಚನೆ ನಡೆಸಿ ತೈಲ ಸಮಸ್ಯೆ ಪರಿಹಾರ ಮಾಡಬೇಕು. –ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೈಸೂರು, ಮೇ14(ಬಿಎಲ್‌ಯು)– ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆಯಲ್ಲಿ ಇಂಧನ ಮಿತವ್ಯಯದ ಮಂತ್ರ ಜಪಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಸ್ವತಃ ತಮ್ಮ ಬೆಂಗಾವಲು ಪಡೆ ವಾಹನಗಳನ್ನು ಅರ್ಧಕ್ಕೆ ಕಡಿತಗೊಳಿಸಿದ್ದಾರೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ನಡೆಸಿದ ಮೈಸೂರು ಸಿಟಿ ರೌಂಡ್ಸ್ ವೇಳೆ 30ಕ್ಕೂ ಅಧಿಕ ವಾಹನಗಳು ಅವರನ್ನು ಹಿಂಬಾಲಿಸಿ, ಜನರ ಗಮನ ಸೆಳೆದವು.

ಮೈಸೂರು ನಗರದಲ್ಲಿ ಪ್ರಗತಿಯಲ್ಲಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲನೆ ನಡೆಸಲು ಸಿದ್ದರಾಮಯ್ಯ ಇಂದು ಬೆಳಿಗ್ಗೆ ಟಿ.ಕೆ.ಬಡಾವಣೆಯ ತಮ್ಮ ನಿವಾಸದಿಂದ ಮೈಸೂರು ಸಿಟಿ ರೌಂಡ್ಸ್ ಆರಂಭಿಸಿದರು.

ಸಿದ್ದರಾಮಯ್ಯ ಅವರ ಮುಂದೆ ಪೊಲೀಸ್ ಬೆಂಗಾವಲು ಪಡೆಯ ನಾಲ್ಕು ವಾಹನಗಳು, ಅದರ ಹಿಂದೆ ಬೆಂಗಳೂರಿನಿಂದ ಆಗಮಿಸಿದ್ದ ಅವರ ಶಾಶ್ವತ ಬೆಂಗಾವಲು ಪಡೆಯ ನಾಲ್ಕು ವಾಹನಗಳು, ಸಿಎಂ ಜೊತೆಗಿರುವ ಪತ್ರಿಕಾ ಮಾಧ್ಯಮ ತಂಡ, ಜಿಲ್ಲಾಧಿಕಾರಿಗಳು, ನಗರ ಪೊಲೀಸ್ ಆಯುಕ್ತರು, ಪಾಲಿಕೆ ಆಯುಕ್ತರು, ಇಬ್ಬರು ಡಿಸಿಪಿಗಳು, ಸಂಚಾರಿ ಹಾಗೂ ಆಯಾ ವ್ಯಾಪ್ತಿಯ ಎಸಿಪಿಗಳು, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು, ಚೆಸ್ಕಾಂ ಅಧಿಕಾರಿಗಳು, ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರುಗಳ ವಾಹನಗಳು, ಹಿಂಬಾಲಿಸಿದವು.

ಹಿಂಬಾಲಿಸಿದ ಖಾಲಿ ಕಾರು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರೂ ಸಿದ್ದರಾಮಯ್ಯ ಕಾರಿನಲ್ಲೇ ಇದ್ದರು. ಆದರೆ, ಅವರ ಸರ್ಕಾರಿ ಕಾರು ಖಾಲಿಯಾಗಿ ಅವರ ಹಿಂದೆ ಸಾಗಿತು. ಇವರಲ್ಲದೆ ಹಲವು ಇಲಾಖೆಯ ಕಿರಿಯ ಅಧಿಕಾರಿಗಳು, ಕಾಂಗ್ರೆಸ್ ಪಕ್ಷದ ಮುಖಂಡರು, ಆಪ್ತರು, ಹಿಂಬಾಲಕರು ಸೇರಿದಂತೆ ಸುಮಾರು 30ರಿಂದ 35 ವಾಹನಗಳು ಮುಖ್ಯಮಂತ್ರಿಗಳ ವಾಹನವನ್ನು ಹಿಂಬಾಲಿಸಿದವು.

ಕಳೆದ ಎರಡು ತಿಂಗಳಿನಿಂದ ನಡೆಯುತ್ತಿರುವ ಮಧ್ಯಪ್ರಾಚ್ಯ ಯುದ್ಧದಿಂದ ಸಮರ್ಪಕ ಇಂಧನ ಪೂರೈಕೆಯಾಗುತ್ತಿಲ್ಲ. ಅಲ್ಲದೆ ಅಂತರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ತೈಲ ಬೆಲೆ ದಿನ ಕಳೆದಂತೆ ಏರಿಕೆಯಾಗುತ್ತಲೇ ಇದೆ. ಆಮದು ಪ್ರಮಾಣ ಅಧಿಕಗೊಂಡು ವಿದೇಶಿ ವಿನಿಮಯದ ಮಿತಿ ಕಾಯ್ದುಕೊಳ್ಳುವುದು ದುಸ್ಸಾಧ್ಯವಾಗಿರುವ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು ಕಳೆದ ವಾರ ಹೈದರಾಬಾದ್ ಭೇಟಿ ವೇಳೆ ಇಂಧನ ಮಿತ ಬಳಕೆ, ಚಿನ್ನ ಖರೀದಿ ಮುಂದೂಡುವುದು ಸೇರಿದಂತೆ 9 ಟಿಪ್ಸ್ ನೀಡಿದ್ದರು. ಇದನ್ನು ಮೊದಲು ತಾವು ಪಾಲಿಸುವ ನಿಟ್ಟಿನಲ್ಲಿ ತಮ್ಮ ಬೆಂಗಾವಲು ಪಡೆಯ ವಾಹನಗಳ ಸಂಖ್ಯೆಯಲ್ಲಿ ಶೇ.50ರಷ್ಟು ಕಡಿತಗೊಳಿಸಿದ್ದಾರೆ. ಅಷ್ಟೇ ಅಲ್ಲದೆ ಕೇಂದ್ರ ಗೃಹ ಸಚಿವ ಅಮಿತಾ ಶಾ ಕೂಡ ತಮ್ಮ ಬೆಂಗಾವಲು ವಾಹನಗಳಲ್ಲಿ ಒಂದನ್ನು ಮಾತ್ರ ಬಳಸುತ್ತಿದ್ದಾರೆ. ಅದೂ ಎಲೆಕ್ಟ್ರಿಕ್ ಕಾರನ್ನು ಮಾತ್ರ.

ದೇಶದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿರುವ ರಾಜ್ಯಗಳಲ್ಲಿ ಕೂಡ ಮುಖ್ಯಮಂತ್ರಿಗಳು ಬೆಂಗಾವಲು ಪಡೆಯ ವಾಹನಗಳನ್ನು ಕಡಿತಗೊಳಿಸಿದ್ದಾರೆ. ನರೇಂದ್ರ ಮೋದಿ, ಅಮಿತಾ ಶಾ ಸೇರಿದಂತೆ ಹಲವು ಗಣ್ಯರಿಗೆ ಬೆದರಿಕೆ ಇದೆ. ಕಳೆದ ವಾರ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಭೇಟಿ ನೀಡಿದ ವೇಳೆ ಅವರು ಸಾಗುವ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿವೆ.

ಇಷ್ಟಾದರೂ ಭದ್ರತಾ ಪಡೆಯ ಶಿಷ್ಟಾಚಾರವನ್ನು ಬದಿಗೊತ್ತಿ ದೇಶದ ಹಿತದೃಷ್ಟಿಯಿಂದ ಬೆಂಗಾವಲು ಪಡೆಯನ್ನು ಕಡಿತಗೊಳಿಸಿದ್ದಾರೆ. ಆದರೆ, ಸಿದ್ದರಾಮಯ್ಯ ಅವರ ಹಿಂದೆ–ಮುಂದೆ ಸುಮಾರು 30ರಿಂದ 35 ವಾಹನಗಳು ಸಾಗಿದವು. ಅನಗತ್ಯವಾದ ವಾಹನಗಳಿಂದ ಇಂಧನ ವ್ಯರ್ಥವಾಗುತ್ತಿದೆ. ತೈಲ ಮುಗ್ಗಟ್ಟು ಇರುವ ಈ ಪರಿಸ್ಥಿತಿಯಲ್ಲಿ ಇಷ್ಟು ವಾಹನಗಳ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಸಾರ್ವಜನಿಕರನ್ನು ಕಾಡಿತು.

ಉತ್ತರಪ್ರದೇಶದಲ್ಲಿ ಭಾರೀ ಮಳೆಗೆ 111 ಮಂದಿ ಬಲಿ



ಲಖನೌ: ಉತ್ತರ ಪ್ರದೇಶದಲ್ಲಿ ಬುಧವಾರ ಸಂಜೆ ಭಾರೀ ಬಿರುಗಾಳಿ ಸಹಿತ ಸುರಿದ ಮಳೆಯಿಂದಾಗಿ ಸುಮಾರು 111 ಮಂದಿ ಮೃತಪಟ್ಟು, ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಪ್ರಯಾಗ್ ರಾಜ್ ಜಿಲ್ಲೆಯಲ್ಲಿ 24, ಭದೋಹಿ 16, ಫತೇಪುರ್‌ನಲ್ಲಿ 9, ಖಾಗ ತಹಸಿಲ್‌ನಲ್ಲಿ 8,ಪ್ರತಾಪ್‌ಗಡ4, ಕಾನ್ಪುರ ಮತ್ತು ರಸೂಲಾಬಾದ್‌ನಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ. ಮನೆ ಗಳು, ಶಾಲಾ ಕಟ್ಟಡಗಳು, ಸೇತುವೆಗಳು ಕುಸಿದು ಬಿದ್ದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರಿ ಗಾಳಿಯಿಂದ ಅನೇಕ ಕಡೆ ಮರಗಳು ಧರೆಗುರುಳಿವೆ. ವಿದ್ಯುತ್ ಕಂಬಗಳು ಧರಶಾಯಿ ಯಾಗಿವೆ. ಮೊಬೈಲ್ ನೆಟ್‌ವರ್ಕ್ ವ್ಯವಸ್ಥೆ ಕುಸಿದು ಬಿದ್ದಿದ್ದು, ರಕ್ಷಣಾ ಹಾಗೂ ಪರಿಹಾರ ಕಾರ್ಯಾ ಚರಣೆಗೆ ಅಡ್ಡಿಯಾಗಿದೆ ಎಂದು ಭದೋಹಿ ಜಿಲ್ಲಾಧಿಕಾರಿ ಕುನ್ವರ್ ವಿರೇಂದ್ರಕುಮಾರ್ ಮೌರ್ಯ ತಿಳಿಸಿದ್ದಾರೆ. ಬದೌನ್ ಜಿಲ್ಲೆಯ ಸಿದ್ಧಪುರ ಕೈಥೋಲಿ ಗ್ರಾಮದಲ್ಲಿ ಮಳೆ– ಗಾಳಿ ರಭಸಕ್ಕೆ ಮನೆಯ ಮೇಲ್ಛಾವಣಿ ಕುಸಿದು ಒಬ್ಬ ಯುವತಿ ಸೇರಿ ಇಬ್ಬರು ಮಹಿಳೆಯರು ಸಾವಿ ಗೀಡಾಗಿದ್ದಾರೆ. ಮರ ಉರುಳಿ ಬಿದ್ದು ಯೋಗೇಶ್ ಎಂಬ ಟ್ರಕ್ ಡ್ರೈವರ್ ಮೃತ ಪಟ್ಟಿದ್ದಾರೆ. ಸೋನಭದ್ರ ದಲ್ಲಿ ಮರ ಬಿದ್ದು ಮಾಧವ್ ಸಿಂಗ್ ಎಂಬಾತ ಸಾವಿಗೀಡಾಗಿದ್ದಾರೆ ಎಂದು ತಿಳಿಸಿದ್ದಾರೆ.

ವಿರಾಜಪೇಟೆ ಸುತ್ತಮುತ್ತ ಮಳೆ

ಮೂರ್ನಾಡು ಬಳಿ ರಸ್ತೆಗೆ ಮರ ಬಿದ್ದು ಸಂಚಾರ ಅಸ್ತವ್ಯಸ್ತ



ಗಾಳಿ ಸಹಿತ ಮಳೆಯಿಂದಾಗಿ ರಸ್ತೆಗೆ ಮರ ಉರುಳಿ ಸಂಚಾರ ಅಸ್ತವ್ಯಸ್ತಗೊಂಡಿರುವುದು.

ಮಡಿಕೇರಿ, ಮೇ 14– ವಿರಾಜಪೇಟೆ ವ್ಯಾಪ್ತಿಯಲ್ಲಿ ಗುರುವಾರ ಮಧ್ಯಾಹ್ನ ಗಾಳಿ ಸಹಿತ ಉತ್ತಮ ಮಳೆಯಾಗಿದೆ. ಜಿಲ್ಲೆಯ ಕೆಲವು ಕಡೆಗಳಲ್ಲಿ ಮೋಡ ಕವಿದ ವಾತಾವರಣ ಕಂಡು ಬಂದಿದ್ದರೆ, ಮತ್ತೆ ಕೆಲವು ಕಡೆ ತುಂತುರು ಮಳೆಯಾಗಿದೆ. ಮಡಿಕೇರಿ ವ್ಯಾಪ್ತಿಯಲ್ಲಿ ಮೋಡ ಕವಿದು ಉತ್ತಮ ಮಳೆ ಸುರಿಯುವ ನಿರೀಕ್ಷೆ ಮೂಡಿಸಿತ್ತಾದರೂ ತುಂತುರು ಮಳೆಯಾಗಿದೆ.

ಇನ್ನು ಗಾಳಿ ಸಹಿತ ಮಳೆಯಿಂದ ವಿರಾಜಪೇಟೆ–ಮೂರ್ನಾಡು ಮುಖ್ಯರಸ್ತೆಗೆ ಮರ ಬಿದ್ದು ಸುಮಾರು ಅರ್ಧ ಗಂಟೆಗಳ ಕಾಲ ವಾಹನ ಸಂಚಾರ ಕಡಿತಗೊಂಡಿತ್ತು. ಈ ವೇಳೆ ಪುತ್ತೂರಿನಿಂದ ತರಬೇತಿ ಮುಗಿಸಿಕೊಂಡು ಅದೇ ಮಾರ್ಗವಾಗಿ ಗೋಣಿಕೊಪ್ಪಲಿಗೆ ಹಿಂದಿರುಗುತ್ತಿದ್ದ ಕಾವೇರಿ ಕಾಲೇಜಿನ ಎನ್‌ಸಿಸಿ ಘಟಕದ ಕೆಡೆಟ್‌ಗಳು ತಕ್ಷಣ ಕಾರ್ಯ ಪ್ರವೃತ್ತರಾಗಿ ರಸ್ತೆಗೆ ಬಿದ್ದ ಮರಗಳನ್ನು ತೆರವುಗೊಳಿಸಿ ಸಂಚಾರ ಸುಗಮಗೊಳಿಸಿದರು.

ಈ ಕಾರ್ಯಾಚರಣೆಯಲ್ಲಿ ಅಧಿಕಾರಿಗಳಾದ ಡಾ.ಲೆಫ್ಟಿನೆಂಟ್ ಅಕ್ರಂ ಹಾಗೂ ಲೆಫ್ಟಿನೆಂಟ್ ಲೇಪಾಕ್ಷಿ, ಕೆಡೆಟ್‌ಗಳಾದ ಜಿತಿನ್, ರವಿಕುಮಾರ್, ಕಾರ್ತಿಕ್, ಆಮೀನ್, ಇಶಾನಿ, ಫ್ರಿನ್ಸಿ, ದೇಚಮ್ಮ, ಶ್ರೀನಿಧಿ, ವೈಷ್ಣವಿ, ಪ್ರದೀಪ್, ಸೋನಿಕಾ, ಮನೋಜ್ ಹಾಗೂ ಮಾಧವನ್ ಭಾಗವಹಿಸಿದ್ದರು.

ಸಿದ್ದಾಪುರದಲ್ಲಿ ರಕ್ತದಾನ ಶಿಬಿರ

ಮಡಿಕೇರಿ, ಮೇ 14– ಕೊಡಗು ವೈದ್ಯಕೀಯ ವಿಜ್ಞಾನಗಳ ಶಿಕ್ಷಣ ಸಂಸ್ಥೆ, ಶನಿವಾರಸಂತೆ ವಲಯ ಅರಣ್ಯ ಇಲಾಖೆ ಹಾಗೂ ಕುಟುಂಬ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ರಕ್ತ ನಿಧಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಶನಿವಾರಸಂತೆಯ ಆಲೂರು ಸಿದ್ದಾಪುರ ಸಮುದಾಯ ಭವನದಲ್ಲಿ ರಕ್ತದಾನ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹಿರಿಯ ತಜ್ಞ ವೈದ್ಯ ಡಾ.ಚೇತನ್, ಗ್ರಾಮೀಣ ಪ್ರದೇಶಗಳ ಆಸ್ಪತ್ರೆಗಳಲ್ಲಿ ವೈದ್ಯರು ಸೇವೆ ಸಲ್ಲಿಸುತ್ತಿರುವ ಸಂದರ್ಭ ಸಾರ್ವಜನಿಕರು ಸಹಕಾರ ನೀಡಬೇಕು. ಎಲ್ಲರೂ ಆರೋಗ್ಯದ ಕಡೆಗೆ ಹೆಚ್ಚು ಗಮನ ಹರಿಸಬೇಕು. ಆಹಾರ ಪದ್ಧತಿ ಬದಲಾವಣೆ ಮಾಡಿಕೊಂಡು ಜೀವನ ನಡೆಸಬೇಕಿದೆ. ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಿದೆ ಎಂದು ಸಲಹೆ ನೀಡಿದರು. ಸಾರ್ವಜನಿಕರು ಇಂತಹ ಆರೋಗ್ಯ ತಪಾಸಣೆ ಶಿಬಿರದ ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು.

ಶನಿವಾರಸಂತೆ ವಲಯ ಅರಣ್ಯಾಧಿಕಾರಿ ಪೂಜಾಶ್ರೀ, ಉಪ ವಲಯ ಅರಣ್ಯಾಧಿಕಾರಿ ಮಲ್ಲಯ್ಯ, ವನಪಾಲಕ ವೆಂಕಟೇಶ್, ರಮೇಶ್, ಪುನೀತ್, ಡಾ.ನಚಿಕೇತ್, ಡಾ.ಅಭಿಜಿತ್, ಡಾ. ಕಾರ್ತಿಕ್ ಇದ್ದರು.

ಹಳೇ ವೈಷಮ್ಯ, ಹಣಕಾಸು ವಿಚಾರಕ್ಕೆ ಕಿರುಕುಳ

ರೌಡಿಶೀಟರ್ ಹತ್ಯೆಗೈದ ಮೈಸೂರಿನ 6 ಮಂದಿ ಬಂಧನ



ಯಾಸೀನ್ ಷರೀಫ್



ಮಹಮ್ಮದ್ ಅಜರ್



ಅಹಮ್ಮದ್ ಖಾನ್



ಮುಜಾಹಿದ್ ಪಾಷಾ



ಮೊಹಮ್ಮದ್ ಅಪ್ಸರ್



ಸೈಯದ್ ಮುದಾಸೀರ್

ಮಂಡ್ಯ, ಮೇ 14– ಹಳೇ ವೈಷಮ್ಯ ಮತ್ತು ಹಣಕಾಸು ವಿಚಾರದಲ್ಲಿ ನೀಡುತ್ತಿದ್ದ ಕಿರುಕುಳ ತಾಳಲಾರದೇ ರೌಡಿಶೀಟರ್‌ನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆಗೈದ 6 ಮಂದಿ ಆರೋಪಿಗಳನ್ನು ಶ್ರೀರಂಗಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಮಂಡಿ ಮೊಹಲ್ಲಾದ ಹಣ್ಣಿನ ವ್ಯಾಪಾರಿ ಮಹಮ್ಮದ್ ಅಪ್ಸರ್(38), ರಾಜೀವ್ ನಗರದ ನಿವಾಸಿಗಳಾದ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದ ಲಾರಿ ಚಾಲಕ ಮಹಮ್ಮದ್ ಅಹಮ್ಮದ್ ಖಾನ್(38), ಕಾರ್ ಡೀಲರ್ ಮುಜಾಹಿದ್ ಪಾಷಾ(37), ಎಲೆಕ್ಟ್ರಿಷಿಯನ್ ಸೈಯದ್ ಮುದಾಸೀರ್(27), ಕಲ್ಯಾಣಗಿರಿ ನಿವಾಸಿ ಯಾಸೀನ್ ಷರೀಫ್ (31) ಮತ್ತು ಶಾಂತಿ ನಗರದ ನಿವಾಸಿ ಮಹಮ್ಮದ್ ಅಜರ್(32) ಬಂಧಿತ ಆರೋಪಿಗಳು. ಬಂಧಿತರಿಂದ ಕೃತ್ಯಕ್ಕೆ ಬಳಸಿದ್ದ ಬೈಕ್‌ಗಳು ಹಾಗೂ ಮೊಬೈಲ್ ಫೋನ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ವಿವರ: ಮೇ 5ರ ಸಂಜೆ 4ಗಂಟೆಯಿಂದ ಮೇ 6ರ ಸಂಜೆ 4.30ರ ನಡುವಿನ ಸಮಯದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿ ಹಳ್ಳಿಮನೆ ಹೋಟೆಲ್ ಹಿಂಭಾಗ ಪಾಲಹಳ್ಳಿಗೆ ಹೋಗುವ ರಸ್ತೆ ಪಕ್ಕದ ಜಮೀನಿನಲ್ಲಿ ಬೆಂಗಳೂರಿನ ರೌಡಿಶೀಟರ್ ಮಹಮ್ಮದ್ ಜಾವಾದ್ ಆಲಂ ಅಲಿಯಾಸ್ ಸಾಯಿಲ್ ಎಂಬಾತನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆಗೈದು ಆರೋಪಿಗಳು ಪರಾರಿಯಾಗಿದ್ದರು. ಈ ಸಂಬಂಧ ಮೃತನ ಸಂಬಂಧಿ ಮೈಸೂರಿನ ಮುಜಾಮಿಲ್ ಎಂಬುವರು ನೀಡಿದ ದೂರಿನ ಮೇರೆಗೆ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಸದರಿ ಪ್ರಕರಣ ಸಂಬಂಧ ತನಿಖೆ ಕೈಗೊಳ್ಳಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ಅವರ ಆದೇಶದ ಮೇರೆಗೆ ಪ್ರಕರಣ ಭೇದಿಸಲು ಅಡಿಷನಲ್ ಎಸ್ಪಿ ಸಿ.ಇ.ತಿಮ್ಮಯ್ಯ, ಡಿವೈಎಸ್ಪಿ ಎಸ್.ಇ.ಗಂಗಾಧರಸ್ವಾಮಿ, ಯು.ಡಿ.ಕೃಷ್ಣಕುಮಾರ್ ಮಾರ್ಗದರ್ಶನದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆನಂದಕುಮಾರ್, ಹೆಚ್.ಆರ್.ವಿವೇಕಾನಂದ, ಶರತ್ ಹೆಚ್.ಪಿ. ಅವರ ನೇತೃತ್ವದಲ್ಲಿ ಎಸ್‌ಐ ವಿನೋದ್ ಕುಮಾರ್, ಎಎಸ್‌ಐ ಕುಮಾರ್, ಲೋಕೇಶ್, ರವಿಕಿರಣ್, ಹಫೀಜ್ ಪಾಷ, ಮಂಜುನಾಥ್, ದಿನೇಶ್, ರಾಜೇಶ್ ಅವರುಗಳನ್ನೊಳಗೊಂಡ ತಂಡವನ್ನು ರಚಿಸಲಾಗಿತ್ತು.

ಮೇ 11ರಂದು ತನಿಖಾ ತಂಡ ಗಸ್ತಿನಲ್ಲಿದ್ದಾಗ ಆರೋಪಿಗಳ ಬಗ್ಗೆ ಸುಳಿವು ದೊರೆತು ಮಂಡ್ಯ ಮತ್ತು ನಗುವಿನಹಳ್ಳಿ ಅಂಡರ್ ಪಾಸ್ ಬಳಿ ಆರೋಪಿಗಳನ್ನು ಬಂಧಿಸಿ ಠಾಣೆಗೆ ಕರೆತಂದು ವಿಚಾರಣೆಗೊಳಪಡಿಸಿದಾಗ ಹಣಕಾಸಿನ ವಿಚಾರಕ್ಕೆ ನೀಡುತ್ತಿದ್ದ ಕಿರುಕುಳ ಮತ್ತು ಹಳೇ ವೈಷಮ್ಯದ ಹಿನ್ನೆಲೆಯಲ್ಲಿ ಮಹಮ್ಮದ್ ಜಾವಾದ್ ಆಲಂನನ್ನು ಹಳ್ಳಿಮನೆ ಹೋಟೆಲ್ ಹಿಂಭಾಗದ ಜಮೀನಿಗೆ ಕರೆದೊಯ್ದು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದಾಗಿ ಆರೋಪಿಗಳು ಒಪ್ಪಿಕೊಂಡಿದ್ದು, ತನಿಖೆ ಮುಂದುವರೆದಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ. ಶೋಭಾರಾಣಿ ಅವರು ಪ್ರಕರಣ ಭೇದಿಸಿದ ಪೊಲೀಸರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಕ್ಕಬ್ಬೆಯ ಶ್ರೀಪಾಡಿ ಇಗ್ಗುತ್ತಪ್ಪ ದೇವಾಲಯದ ಅಷ್ಟ ಬಂಧ ಬ್ರಹ್ಮ ಕಲಶೋತ್ಸವ ಪ್ರಾರಂಭ



ಶ್ರೀ ಪಾಡಿ ಇಗ್ಗುತ್ತಪ್ಪ ದೇವಾಲಯದ ಅಷ್ಟ ಬಂಧಬ್ರಹ್ಮ ಕಲಶ ಉತ್ಸವಕ್ಕೆ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ನಾಪೋಕ್ಲು: ಇಲ್ಲಿಗೆ ಸಮೀಪದ ಕಕ್ಕಬ್ಬೆಯ ಶ್ರೀಪಾಡಿ ಇಗ್ಗುತ್ತಪ್ಪ ದೇವಾಲಯದ ಅಷ್ಟ ಬಂಧ ಬ್ರಹ್ಮ ಕಲಶೋತ್ಸವಕ್ಕೆ ವಿಶೇಷ ಪ್ರಾರ್ಥನೆಯೊಂದಿಗೆ ಬುಧವಾರ ಚಾಲನೆ ನೀಡಲಾಯಿತು.

ನೀಲೇಶ್ವರ ಉಚ್ಚಿಲತಾಯ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಬುಧವಾರದಿಂದ ಮೇ 18ರವರೆಗೂ ಜರುಗಲಿರುವ ಅಷ್ಟ ಬಂದ ಬ್ರಹ್ಮಕಲಶ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಬುಧವಾರ ಸಂಜೆ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ಸಾಮೂಹಿಕ ಪ್ರಾರ್ಥನೆಯೊಂದಿಗೆ ತಕ್ಕ ಮುಖ್ಯಸ್ಥರು ಹಾಗೂ ಭಕ್ತ ಜನ ಸಂಘದ ಅಧ್ಯಕ್ಷ ಪರದಂಡ ಸುಮನ್ ಸುಬ್ರಮಣಿ ಅವರು ದೇವರ ನಡೆಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ ಧಾರ್ಮಿಕ ಪೂಜಾ ವಿಧಿ ವಿಧಾನ ಕಾರ್ಯಕ್ರಮಕ್ಕೆ ಅನುವು ಮಾಡಿಕೊಟ್ಟರು.

ಬಳಿಕ ಧಾರ್ಮಿಕ ಕಾರ್ಯಕ್ರಮಗಳಾದ ಅಂಕುರಾರ್ಪಣೆ, ಪ್ರಾಸಾದ, ಸುದ್ದಿ ವಾಸ್ತು, ರಾಕ್ಷೋಘ್ನ ಹೋಮ, ವಾಸ್ತು ಬಲಿ ಜರುಗಿದವು. ಇದಕ್ಕೂ ಮೊದಲು ನೀಲೇಶ್ವರ ಉಚ್ಚಿಲತಾಯ ಪದ್ಮನಾಭ ತಂತ್ರಿಗಳ ಅವರನ್ನು ಚಂಡೆ ಮೇಳಗಳೊಂದಿಗೆ ಸಾಂಪ್ರದಾಯಿಕ ಹಾಗೂ ಗೌರವಯುತವಾಗಿ ಸ್ವಾಗತಿಸಲಾಯಿತು.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಬಾಚಮಂಡ ರಾಜ ಪೂವಣ್ಣ ಹಾಗೂ ಸುಮನ್ ಸುಬ್ರಮಣಿ ಅವರು ಮಾಧ್ಯಮದೊಂದಿಗೆ ಮಾತನಾಡಿ ಪೂಜಾ ಕಾರ್ಯಗಳ ಬಗ್ಗೆ ಮಾಹಿತಿಯನ್ನು ನೀಡಿ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗಬೇಕೆಂದು ಮನವಿ ಮಾಡಿಕೊಂಡರು. ಈ ಸಂದರ್ಭ ಭಕ್ತ ಜನ ಸಂಘದ ಕಾರ್ಯದರ್ಶಿ ಬಟ್ಟೀರ ಚೊಂದಮ್ಮ ಮೇದಪ್ಪ, ಖಜಾಂಚಿ ಅಂಜಪರವಂಡ ಕುಶಾಲಪ್ಪ, ಮಾಜಿ ಖಜಾಂಚಿ ನಬುಡುಮಂಡ ಸುಬ್ರಮಣಿ, ನಿರ್ದೇಶಕ ಪರದಂಡ ನರೇಂದ್ರ, ಪರದಂಡ ರಮೇಶ್, ಅನ್ನಡಿಯಂಡ ದಿಲೀಪ್ ಕುಮಾರ್, ಮಾಜಿ ಅಧ್ಯಕ್ಷ ಕಾಂಡಂಡ ಜೋಯಪ್ಪ, ಕಣಿಯರ ನಾಣಯ್ಯ, ಪಾರುಪತ್ತೆಗಾರ ಪರದಂಡ ಪ್ರಿನ್ಸ್, ಉದಿಯಂಡ ಸುಭಾಷ್, ಬಟ್ಟಿರ ಮೇದಪ್ಪ, ಕಾಂಡಂಡ ಉಷಾ ಜೋಯಪ್ಪ ಸೇರಿದಂತೆ ಭಕ್ತಾದಿಗಳು ಉಪಸ್ಥಿತರಿದ್ದರು.

ಸೋಮಪ್ಪ ನಿಧನ

ನಾಪೋಕ್ಲು: ಇಲ್ಲಿಗೆ ಸಮೀಪದ ಪಾಲೂರು



ಗ್ರಾಮದ ನಿವಾಸಿ ದಿ.ಕೇಪು ಪೂಜಾರಿ ಅವರ ಮಗ ಮಾಜಿ ಸೈನಿಕ ಬಿ.ಕೆ. ಸೋಮಪ್ಪ (83) ಅವರು ಗುರುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ಜರುಗಲಿದೆ.

ವಿದ್ಯಾರ್ಥಿಗಳು ಏಕಾಗ್ರತೆಯಿಂದ ಅಭ್ಯಾಸ ಮಾಡಿ ಗುರಿ ಸಾಧಿಸಿ



ಸಮಾರಂಭವನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಕೆ.ಆರ್.ಪೇಟೆ, ಮೇ 14– ವಿದ್ಯಾರ್ಥಿಗಳು ಏಕಾಗ್ರತೆಯಿಂದ ಅಭ್ಯಾಸ ಮಾಡಿ ಗುರಿ ಸಾಧಿಸಬೇಕು ಎಂದು ಪಾಂಡವಪುರ ಉಪವಿಭಾಗಾಧಿಕಾರಿ ಡಾ.ಕೆ.ಆರ್.ಶ್ರೀನಿವಾಸ್ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ, ಕ್ರೀಡಾ, ರಾಷ್ಟ್ರೀಯ ಸೇವಾ ಯೋಜನೆ, ರೆಡ್ ಕ್ರಾಸ್ ಹಾಗೂ ಸ್ಕೌಟ್ಸ್–ಗೈಡ್ಸ್ ಘಟಕಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ನಿರಂತರವಾಗಿ ಕಲಿಯುವ ಆಸಕ್ತಿ ಬೆಳೆಸಿಕೊಂಡು ಯಶಸ್ಸುಗಳಿಸಬೇಕು. ಅಲ್ಲದೇ ವಿದ್ಯಾರ್ಥಿ ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಬೇಕು. ನಿರಂತರ ಕಲಿಕೆಯಿಂದ ಜ್ಞಾನ ಹೆಚ್ಚಿಸಿಕೊಂಡು ಸಾಧನೆ ಮಾಡಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಹೆಚ್.ಟಿ.ಮಂಜು, ವಿದ್ಯಾರ್ಥಿ ಜೀವನದಲ್ಲಿ ಕಲಿಕೆಯು ನಿರಂತರವಾಗಿರಬೇಕು. ತಂದೆ ತಾಯಿ ಹಾಗೂ ಗುರು ಹಿರಿಯರನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಶಿಕ್ಷಣದ ಮೂಲಕ ಜ್ಞಾನವಂತರಾಗಿ ಸಾಧನೆ ಮಾಡಬೇಕು ಎಂದರು.

ಜಿಲ್ಲೆಯಲ್ಲಿ ನಡೆಯುತ್ತಿರುವ ಹೆಣ್ಣು ಭ್ರೂಣ ಹತ್ಯೆಯನ್ನು ಜವಾಬ್ದಾರಿಯುತ ಶಾಸಕನಾಗಿ ಖಂಡಿಸುತ್ತೇನೆ. ಕೆ.ಆರ್.ಪೇಟೆ ತಾಲೂಕಿನಲ್ಲಿ ಹೆಣ್ಣು ಭ್ರೂಣ ಹತ್ಯೆಯಂತಹ ಪ್ರಕರಣಗಳು ನಡೆದಿಲ್ಲ. ಭ್ರೂಣ ಹತ್ಯೆಯಂತಹ ಪಾಪದ ಕೆಲಸ ಮಾಡುವ ಯಾವುದೇ ವ್ಯಕ್ತಿಗಳನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಯಂತ್ರವಿದ್ದರೂ ಅದು ಕೆಲಸ ಮಾಡುತ್ತಿಲ್ಲ. ನಮ್ಮ ಆಸ್ಪತ್ರೆಯ ಮಹಿಳಾ ವೈದ್ಯರು ಖಾಸಗಿ ಆಸ್ಪತ್ರೆಗೆ ಸ್ಕ್ಯಾನಿಂಗ್ ಮಾಡಿಸಲು ಶಿಫಾರಸ್ಸು ಮಾಡಿದ್ದಾರೆ ಹೊರತು, ಭ್ರೂಣ ಹತ್ಯೆಯಂತಹ ಪಾಪದ ಕೆಲಸ ಮಾಡಿಲ್ಲ. ಈ ಬಗ್ಗೆ ನಿಷ್ಪಕ್ಷಪಾತ ತನಿಖೆ ಮಾಡಿಸಿ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ ಎಂದು ನಾನು ಹೇಳಿರುವುದನ್ನು ತಪ್ಪಾಗಿ ಅರ್ಥೈಸಲಾಗಿದೆ. ಹೆಣ್ಣು ಭ್ರೂಣ ಹತ್ಯೆಯು ನಾಗರಿಕ ಸಮಾಜಕ್ಕೆ ಅಂಟಿರುವ ಶಾಪವಾಗಿದ್ದು, ನಾಗರಿಕ ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬರೂ ಇದನ್ನು ಖಂಡಿಸಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಅನುರಾಧ ಅಧ್ಯಕ್ಷತೆ ವಹಿಸಿದ್ದರು. ಸಾಂಸ್ಕೃತಿಕ ವಿಭಾಗದ ಸಂಚಾಲಕ ಸಿ.ಎಸ್.ಕೆಂಡಗಣ್ಣೇಗೌಡ, ಕ್ರೀಡಾ ಸಮಿತಿ ಸಂಚಾಲಕ ಡಾ.ಹೆಚ್.ಆರ್.ಶ್ಯಾಮ್, ರೆಡ್ ಕ್ರಾಸ್ ಸಮಿತಿ ಸಂಚಾಲಕ ಮಹದೇವಸ್ವಾಮಿ, ಐಕ್ಯೂಎಸಿ ವಿಭಾಗದ ಸಂಚಾಲಕ ಜಿ.ಮಧು, ರಾಷ್ಟ್ರೀಯ ಸೇವಾ ಯೋಜನಾ ಸಮಿತಿ ಸಂಚಾಲಕ ಶಿವಸ್ವಾಮಿ, ನಫೀಸಾ ಡಾ.ಪ್ರತಿಮಾ ಇತರರಿದ್ದರು.

ಚಿಕ್ಕಲ್ಲೂರು ದೇವಾಲಯದ ಹುಂಡಿ ಎಣಿಕೆ ವೇಳೆ ಭಕ್ತರ ಆಕ್ರೋಶ, ಪೊಲೀಸರೊಂದಿಗೆ ಜಟಾಪಟಿ

- ಭಕ್ತರಿಂದ ಪೊಲೀಸರಿಗೆ ಧಿಕ್ಕಾರದ ಘೋಷಣೆ; ನಾವು ಕರ್ತವ್ಯ ಮಾಡುತ್ತಿದ್ದೇವೆ ಎಂದ ಪೊಲೀಸರು
- ಭಕ್ತರು ನ್ಯಾಯ ಕೇಳುವುದೇ ತಪ್ಪಾ, ಜಿಲ್ಲಾಡಳಿತ ದೇಗುಲ ಅಭಿವೃದ್ಧಿಗೆ ಹಣ ಬಳಸಲು ಒತ್ತಾಯ



ಮಾತಿನ ಚಕಮಕಿ ಹಿನ್ನೆಲೆಯಲ್ಲಿ ಹುಂಡಿಯನ್ನು ಬೇರೆಡೆಗೆ ಸಾಗಿಸುತ್ತಿರುವುದು.

ಕೊಳ್ಳೇಗಾಲ, ಮೇ 14– ತಾಲೂಕಿನ ಚಿಕ್ಕಲ್ಲೂರು ದೇವಾಲಯದಲ್ಲಿ ಹುಂಡಿ ಎಣಿಕೆ ಸಂದರ್ಭದಲ್ಲಿ ದೇವಸ್ಥಾನದ ಕಮಿಟಿ ಸದಸ್ಯರು, ಭಕ್ತರು ಮತ್ತು ಪೊಲೀಸರೊಂದಿಗೆ ಭಾರೀ ಮಾತಿನ ಚಕಮಕಿ ಉದ್ವಿಘ್ನ ಪರಿಸ್ಥಿತಿ ನಿರ್ಮಾಣಗೊಂಡಿದ್ದ ಘಟನೆ ಜರುಗಿತು.

ಹುಂಡಿ ಎಣಿಕೆ ಸಿದ್ಧತೆಗೆ ಮುಂದಾದ ಪೊಲೀಸ್ ಮತ್ತು ಕಂದಾಯ ಇಲಾಖಾಧಿಕಾರಿಗಳ ವಿರುದ್ಧ ಟ್ರಸ್ಟಿನ ಎಲ್ಲಾ ಸದಸ್ಯರು ಹಾಗೂ ಸುತ್ತೇಳು ಗ್ರಾಮದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಕಮಿಟಿ ಗಮನಕ್ಕೆ ತಾರದೆ ಅಧಿಕಾರಿಗಳು ಹುಂಡಿ ಎಣಿಕೆಗೆ ಮುಂದಾಗಿದ್ದಾರೆ ಎಂದು ನೂರಾರು ಭಕ್ತರು ವಿರೋಧಿಸಿದರಲ್ಲದೆ ಭಕ್ತರ ಹಣ ಪಾರದರ್ಶಕ ಬಳಕೆ ಆಗುತ್ತಿಲ್ಲ, ದೇವಸ್ಥಾನದ ಅಭಿವೃದ್ಧಿಗೂ ಬಳಕೆ ಮಾಡಿಕೊಳ್ಳುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ ಪೊಲೀಸರ ವಿರುದ್ಧ ಧಿಕ್ಕಾರ ಕೂಗಿದರು.

ಈ ವೇಳೆ ಜಮಾಯಿಸಿದ್ದ ನೂರಾರು ಭಕ್ತರು ಹುಂಡಿಯ ಹಣ ದೇಗುಲದ ಅಭಿವೃದ್ಧಿಗೆ ಬಳಕೆ ಆಗುತ್ತಿಲ್ಲ. ಭಕ್ತರು ಸಮರ್ಪಿಸಿದ ಕಾಣಿಕೆ ದೇಗುಲ ಅಭಿವೃದ್ಧಿ ಇಲ್ಲವೇ ಭಕ್ತರಿಗೆ ಅನುಕೂಲಕ್ಕಾಗಿ ಖರ್ಚು ಮಾಡುತ್ತಿಲ್ಲ. ಹಣದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುತ್ತಿಲ್ಲ. ಪ್ರಶ್ನಿಸಿದ ನಮಗೆ ನ್ಯಾಯ ಸಿಗುತ್ತಿಲ್ಲ. ನ್ಯಾಯ ಕೇಳುವುದೇ ತಪ್ಪಾ ಎಂದು ಪ್ರಶ್ನಿಸಿ ಹುಂಡಿ ಸಾಗಣೆಗೆ ಮುಂದಾದ ಪೊಲೀಸರು, ತಾಲೂಕು ಆಡಳಿತಕ್ಕೆ ಭಕ್ತರು ಅಡ್ಡಿಯುಂಟು ಮಾಡಿದರು. ನಮ್ಮ ಪಾಲಿನ ಕೆಲಸ ಮಾಡಲೇಬೇಕು. ಜಿಲ್ಲಾಡಳಿತ ಸೂಚನೆ ಹಿನ್ನೆಲೆ ನಾವು ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ಹುಂಡಿ ಸಾಗಣೆಗೆ ಮುಂದಾಗುತ್ತಿದ್ದಂತೆ ಭಕ್ತರು ಹಾಗೂ ಪೊಲೀಸರ ನಡುವೆ ಜಟಾಪಟಿಯೇ ನಡೆಯಿತು. ಪೊಲೀಸ್ ದಬ್ಬಾಳಿಕೆ ಮಾಡುತ್ತಿದ್ದಾರೆ ಎಂದು ಹಲವರು ಇದೇ ವೇಳೆ ಆರೋಪಿಸಿದರಲ್ಲದೆ ಪೊಲೀಸರಿಂದಲೇ ಭಕ್ತರಿಗೆ ಅನ್ಯಾಯವಾಗುತ್ತಿದೆ ಎಂಬ ಆಕ್ರೋಶವೂ ಕೇಳಿ ಬಂತು. ಈ ವೇಳೆ ನೂಕು ನುಗ್ಗಲು ನಿಯಂತ್ರಿಸಲು ಪೊಲೀಸರು ಏಳೆದಾಡಿ ನಂತರ ಸ್ಥಿತಿ ತಹಬದಿಗೆ ತರಲು ಹರಸಾಹಸ ಪಡಬೇಕಾಯಿತು. ಆದರೂ ಭಕ್ತರು ಪೊಲೀಸ್ ವ್ಯವಸ್ಥೆಗೆ ಧಿಕ್ಕಾರದ ಘೋಷಣೆ ಮೊಳಗುತ್ತಲೇ ಇತ್ತು.

ಇದರಿಂದ ಕೆಲಕಾಲ ಉದ್ವಿಗ್ನ ವಾತಾವರಣ ಉಂಟಾಗಿತ್ತು. ಕೊನೆಗೂ ಹುಂಡಿ ಎಣಿಕೆಯಲ್ಲಿ ದೇವಾಲಯದ ಸದಸ್ಯರ, ಭಕ್ತರ ಗಮನಕ್ಕೆ ತಂದು ಪಾರದರ್ಶಕತೆ ಕಾಯ್ದುಕೊಳ್ಳುತ್ತಿಲ್ಲ ಎಂದು ಭಕ್ತರು ದೂರಿದರಲ್ಲದೆ ಇನ್ನಾದರೂ ದೇಗುಲದ ಅಭಿವೃದ್ಧಿಗೆ ಭಕ್ತರ ಕಾಣಿಕೆ ಬಳಕೆಯಾಗಲಿ ಎಂದು ಆಗ್ರಹಿಸಿದರು.

ಭಕ್ತರ ವಿರೋಧದ ನಡುವೆ ಹುಂಡಿ ಬೇರೆಡೆ ಸಾಗಿಸಿ ಎಣಿಕೆ ಪ್ರಾರಂಭಿಸಲು ತಹಸೀಲ್ದಾರ್ ಬಸವರಾಜು, ಗ್ರಾಮಾಂತರ ಠಾಣೆ ಎಸ್ಐ ಇನ್ನಿತರರು ಕ್ರಮ ಕೈಗೊಂಡ ಹಿನ್ನೆಲೆಯಲ್ಲಿ ಹುಂಡಿ ಎಣಿಕೆ ಆರಂಭಗೊಂಡಿದ್ದು, ಶುಕ್ರವಾರ ಬೆಳಗ್ಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

ಒಟ್ಟಾರೆ ಶ್ರೀಕ್ಷೇತ್ರದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ ಟ್ರಸ್ಟ್ ರಚಿಸಲಾಗಿದ್ದರೂ, ಸಹಾ ಟ್ರಸ್ಟ್ ಸದಸ್ಯರಲ್ಲಿ ಒಮ್ಮತ ಇಲ್ಲದಂತಾಗಿದೆ. ಕ್ಷೇತ್ರದ ಪೀಠಾಧಿಕಾರಿ ಹಾಗೂ ಆಡಳಿತಾಧಿಕಾರಿ ಜ್ಞಾನಾನಂದ ಚನ್ನರಾಜೇಅರಸ್ ಅವರ ಮನವಿ ಮಾಡಿದರು.

ಶೀಘ್ರದಲ್ಲೇ ಹೈಟೆಕ್ ಸಾರ್ವಜನಿಕ ಆಸ್ಪತ್ರೆ ಉದ್ಘಾಟನೆ

ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಭರವಸೆ



ಹುಣಸೂರಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಸನ್ಮಾನಿಸಲಾಯಿತು.

ಹುಣಸೂರು, ಮೇ 14– ತಾಲೂಕಿನ ಜನತೆಯ ಬಹುದಿನಗಳ ಕನಸಾದ 100 ಹಾಸಿಗೆಗಳ ಹೈಟೆಕ್ ಸಾರ್ವಜನಿಕ ಆಸ್ಪತ್ರೆ ಕಾಮಗಾರಿ ಅಂತಿಮ ಹಂತ ತಲುಪಿದ್ದು, ಅತೀ ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಸ್ಪತ್ರೆಯನ್ನು ಸಾರ್ವಜನಿಕ ಸೇವೆಗೆ ಸಮರ್ಪಿಸಲಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಭರವಸೆ ನೀಡಿದರು.

ನಗರದ ಬಿ.ಎಂ.ಬೈಪಾಸ್ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ 31.5 ಕೋಟಿ ರೂ. ವೆಚ್ಚದ ನೂತನ ಆಸ್ಪತ್ರೆಯ ಕಾಮಗಾರಿ ಪ್ರಗತಿ ವೀಕ್ಷಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೊದಲ ಅವಧಿಯ ಆಡಳಿತದಲ್ಲಿ ಅಂದಿನ ಶಾಸಕ ಹೆಚ್.ಪಿ.ಮಂಜುನಾಥ್ ಅವರ ವಿಶೇಷ ಕಾಳಜಿಯ ಮೇರೆಗೆ ಈ ಹೈಟೆಕ್ ಆಸ್ಪತ್ರೆಗೆ ಅನುದಾನ ನೀಡಿ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಆದರೆ ನಂತರ ಬಂದ ಬಿಜೆಪಿ ಸರ್ಕಾರವು ಅನುದಾನ ಬಿಡುಗಡೆ ಮಾಡದೆ ಯೋಜನೆಯನ್ನು ನೆನೆಗುದಿಗೆ ತಳ್ಳಿತು. ಇದೀಗ ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಮತ್ತೆ 9.5 ಕೋಟಿ ರೂ. ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗೆ ವೇಗ ನೀಡಿದೆ. ಇನ್ನು 15 ದಿನಗಳಲ್ಲಿ ಕಟ್ಟಡದ ಸಂಪೂರ್ಣ ಕಾಮಗಾರಿ ಪೂರ್ಣಗೊಳ್ಳಲಿದ್ದು, ಅಗತ್ಯವಿರುವ 1.50 ಕೋಟಿ ರೂ. ಅನುದಾನ ಶೀಘ್ರ ಬಿಡುಗಡೆ ಗೊಳಿಸಲಾಗುವುದು. ಆಸ್ಪತ್ರೆಗೆ ಅಗತ್ಯವಿರುವ ಯಂತ್ರೋಪಕರಣಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಮುಂದಿನ 2 ತಿಂಗಳೊಳಗೆ ಎಲ್ಲಾ ವೈದ್ಯಕೀಯ ಉಪಕರಣಗಳನ್ನು ಅಳವಡಿಸಿ ಪ್ರಾಯೋಗಿಕ ಪರೀಕ್ಷೆ ನಡೆಸಲಾಗುವುದು ಎಂದರು.

ತಜ್ಞ ವೈದ್ಯರ ಸಂಖ್ಯೆ ದ್ವಿಗುಣ: ಈ ಹಿಂದೆ ತಾಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆಯಿತ್ತು. ನಾನು ಸಚಿವನಾದ ಮೇಲೆ ಪ್ರತಿ ತಾಲೂಕಿನಲ್ಲೂ ತಜ್ಞ ವೈದ್ಯರ ಸಂಖ್ಯೆಯನ್ನು ದ್ವಿಗುಣಗೊಳಿಸುವ ಗುರಿ ಹೊಂದಿದ್ದು, ಈಗಾಗಲೇ ರಾಜ್ಯದ 141 ತಾಲೂಕು ಆಸ್ಪತ್ರೆಗಳಲ್ಲಿ ನುರಿತ ತಜ್ಞರ ನೇಮಕಾತಿ ಪ್ರಕ್ರಿಯೆ ಯಶಸ್ವಿಯಾಗಿದೆ ಎಂದರು.

ರಾಜ್ಯದಲ್ಲಿ ರೇಡಿಯಾಲಜಿಸ್ಟ್‌ಗಳ ಕೊರತೆ ಒಪ್ಪಿಕೊಂಡ ಸಚಿವರು, ಈ ಸಮಸ್ಯೆಗೆ ತಾಂತ್ರಿಕ ಪರಿಹಾರ ಕಂಡುಕೊಳ್ಳಲಾಗುತ್ತಿದೆ. ಸಾರ್ವಜನಿಕ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ತೊಂದರೆಯಾಗದಂತೆ 'ಟೆಲಿ–ರೇಡಿಯಾಲಜಿ' ಯೋಜನೆಯನ್ನು ಜಾರಿಗೆ ತರಲು ಚಿಂತಿಸಲಾಗುತ್ತಿದೆ. ಇದರಿಂದ ತಾಲೂಕು ಆಸ್ಪತ್ರೆಗಳಲ್ಲಿ ರೇಡಿಯಾಲಾಜಿಸ್ಟ್ ಕೊರತೆಯಿಂದ ಎದುರಾಗಿರುವ ಸಮಸ್ಯೆಗಳಿಗೆ ಪರಿಹಾರ ದೊರೆಯಲಿದೆ ಎಂದರು.

ಇದೇ ವೇಳೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರು ಸಚಿವರಿಗೆ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹಳೆಯ ಸಾರ್ವಜನಿಕ ಆಸ್ಪತ್ರೆಯನ್ನು 'ತಾಯಿ ಮತ್ತು ಮಕ್ಕಳ ಆಸ್ಪತ್ರೆ'ಯನ್ನಾಗಿ ಪರಿವರ್ತಿಸಬೇಕು ಎಂದು ಕೋರಿದರು.

ನೀಟ್ ಪರೀಕ್ಷೆ ಅವಾಂತರ ಹಾಗೂ ಶಾಲೆಗಳಲ್ಲಿ ಹಿಜಾಬ್ ಧರಿಸುವ ಬಗ್ಗೆ ಪತ್ರಕರ್ತರ ಪಶ್ನೆಗೆ ಉತ್ತರಿಸಿದ ಸಚಿವರು ನೀಟ್ ಪರೀಕ್ಷೆ ಅದ್ವಾನ ಕೇಂದ್ರ ಸರ್ಕಾರದ ವೈಫಲ್ಯವಾಗಿದೆ. ಹಿಜಾಬ್, ಜನಿವಾರದ ಬಗ್ಗೆ ವಿಪಕ್ಷ ನಾಯಕ ಆರ್.ಅಶೋಕ್ ಇಲ್ಲಸಲ್ಲದ ಧಾರ್ಮಿಕ ಮಾತುಗಳನ್ನಾಡುತ್ತಾರೆ. ನಾವು ಎಲ್ಲಾ ಧರ್ಮದವರಿಗೂ ರಕ್ಷಣೆ ನೀಡಬೇಕಿದೆ. ಹೀಗಾಗಿ ಅವರವರ ಆಚರಣೆಗೆ ನಾವು ಯಾವುದೇ ನಿರ್ಬಂಧ ಹೇರುವುದಿಲ್ಲ ಎಂದರು.

ಈ ವೇಳೆ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷೆ ಪುಷ್ಪಾ, ತಹಸೀಲ್ದಾರ್ ಮಂಜುನಾಥ್, ನಗರಸಭಾ ಆಯುಕ್ತೆ ಮಾನಸ, ತಾಲೂಕು ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ರಾಘು, ಅಕ್ರಮ ಸಕ್ರಮ ಸಮಿತಿ ಸದಸ್ಯ ಕುಮಾರ್, ಕಾಂಗ್ರೆಸ್ ನಗರಾಧ್ಯಕ್ಷ ರವಿಪ್ರಸನ್ನ, ಕಾಂಗ್ರೆಸ್ ಓಬಿಸಿ ಘಟಕದ ಅಧ್ಯಕ್ಷ ಮಹದೇವ್, ರಕ್ಷಾ ಸಮಿತಿ ಸದಸ್ಯರಾದ ಪ್ರಭಾಕರ್, ನಾಗರಾಜು ಇನ್ನಿತರರಿದ್ದರು.

ಕೆರೆಗೆ ನೀರು ತುಂಬಿಸುವಂತೆ ಒತ್ತಾಯಿಸಿ ಪ್ರತಿಭಟನೆ



ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ಉಡಿಗಾಲ ರೈತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ: ತಾಲೂಕಿನ ಉಡಿಗಾಲ ಆನೆಮಡುವಿನ ಕೆರೆಗೆ ಚಿಕ್ಕಮೋರಿ ಕಾಲುವೆ ಮುಖಾಂತರ ಎರಡನೇ ಹಂತದಲ್ಲಿ ನೀರು ತುಂಬಿಸುವಂತೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ಉಡಿಗಾಲ ರೈತರು, ಗ್ರಾಮಸ್ಥರು ಗ್ರಾಮದ ಚಿಕ್ಕಮೋರಿ ಕಾಲುವೆ ಸಮೀಪ ಪ್ರತಿಭಟನೆ ನಡೆಸಿದರು.

ಕೆಲಹೊತ್ತು ಚಾಮರಾಜನಗರ–ಗುಂಡ್ಲುಪೇಟೆ ರಸ್ತೆಯಲ್ಲಿ ರಸ್ತೆತಡೆ ನಡೆಸಿದರು. ಇದರಿಂದ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ಅಧಿಕಾರಿಗಳು, ಇಂಜಿನಿಯರ್‌ಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಆಗಮಿಸಿದ ಎಇಇ ಮಹೇಶ್ ಅವರನ್ನು ಕೆರೆ ನೀರು ತುಂಬಿಸುವಂತೆ ಪ್ರತಿಭಟನಾಕಾರರು ಪಟ್ಟು ಹಿಡಿದಾಗ ಕೆರೆ ನೀರು ತುಂಬಿಸುವ ಅಧಿಕಾರ ನನಗಿಲ್ಲ ಎಂದು ಹೇಳಿದಾಗ ಪ್ರತಿಭಟನಾಕಾರರು ನಿಮಗೆ ಅಧಿಕಾರಿ ಇಲ್ಲವೆಂದ ಮೇಲೆ ನೀವ್ಯಾಕೆ ಬಂದಿದ್ದೀರಿ. ಇಇ ಕರೆಸುವಂತೆ ತರಾಟೆಗೆ ತೆಗೆದುಕೊಂಡರು. ಎಇಇ ಮಹೇಶ್ ನಿರಂತರವಾಗಿ ಇಇ ಫೋನ್ ಮಾಡಿದರು ಇಇ ಕರೆ ಸ್ವೀಕರಿಸದಿರುವುದನ್ನು ಗಮನಿಸಿದ ರೈತರು ಇಂಜಿನಿಯರ್ ವಿರುದ್ಧ ಘೋಷಣೆ ಕೂಗಿ ಕೆರೆಗೆ ನೀರು ತುಂಬಿ ಇಲ್ಲವೇ ವಿಷಕೊಡಿ ಎಂದು ಒತ್ತಾಯಿಸಿ ಪಟ್ಟು ಹಿಡಿದಾಗ ಡಿವೈಎಸ್‌ಪಿ ಸ್ನೇಹರಾಜು ಪ್ರತಿಭಟನಾಕಾರರನ್ನು ಸಮಾಧಾನ ಪಡಿಸಲು ಮುಂದಾದಾಗ ನೀನು ಕೆರೆ ನೀರು ತುಂಬಿಸುವ ಜವಾಬ್ದಾರಿ ತೆಗೆದುಕೊಳ್ಳಿ ನಾವು ಪ್ರತಿಭಟನೆ ಕೈ ಬಿಡುವುದಾಗಿ ಪ್ರತಿಭಟನಾಕಾರರು ಹೇಳಿದರು. ಆವಾಗ ಇಂಜಿನಿಯರ್‌ಗೆ ಒಂದು ತೀರ್ಮಾನ ತೆಗೆದುಕೊಳ್ಳಿ ಎಂದು ಸುಮ್ಮನಾದರು. ಕೆರೆಗೆ ನೀರು ಬಿಡುವುದಾಗಿ ಎಇಇ ಮಹೇಶ್ ಒಪ್ಪಿಕೊಂಡ ಮೇಲೆ ಪ್ರತಿಭಟನೆ ಕೈ ಬಿಡಲಾಯಿತು.

ರೈತ ಗುರುಪ್ರಸಾದ್ ಮಾತನಾಡಿ, ಆನೆಮಡುವಿನ ಕೆರೆಗೆ ನೀರು ತುಂಬಿಸುವಂತೆ ಮನವಿ ನೀಡಿದರು ಯಾವುದೇ ಪ್ರಯೋಜನವಾಗಿಲ್ಲ. ಕೆರೆ ನೀರು ತುಂಬಿಸುವಲ್ಲಿ ಅಧಿಕಾರಿಗಳು ಸಂಪೂರ್ಣವಾಗಿ ವಿಫಲವಾಗಿದ್ದಾರೆ. ಕೆರೆ ನೀರು ತುಂಬಿ ಇಲ್ಲವೇ ವಿಷಕೊಡಿಸಿ ಎಂದು ಇಂಜಿನಿಯರ್, ಪೊಲೀಸರನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಗುರುಪ್ರಸಾದ್, ರಘು, ಗುರು, ಸೂರ್ಯ, ರಾಜು, ಕುಮಾರ್, ಅಭಿ, ರೇವಣ್ಣ, ಮಹೇಶ್, ಮಾದೇಶ್, ಮಲ್ಲಿಕ್, ಉಡಿಗಾಲ, ವೀರನಪುರ ಹಾಗೂ ಸುತ್ತ ಮುತ್ತಲಿನ ರೈತರು, ಗ್ರಾಮಸ್ಥರು ಭಾಗವಹಿಸಿದ್ದರು.

ಮಹಿಳೆ ಹತ್ಯೆಗೈದ ಆರೋಪಿಗೆ ಜೀವಾವಧಿ ಶಿಕ್ಷೆ

ತಿ.ನರಸೀಪುರ, ಮೇ 14– ಮಹಿಳೆ ಹತ್ಯೆಗೈದ ಆರೋಪಿಗೆ ಮೈಸೂರಿನ 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ 75 ಸಾವಿರ ರೂ. ದಂಡ ವಿಧಿಸಿ ಆದೇಶ ಹೊರಡಿಸಿದೆ.

ತಾಲೂಕಿನ ಮೂಗೂರು ಗ್ರಾಮದ ಮಹೇಶ್ ಕುಮಾರ ಶಿಕ್ಷೆಗೆ ಒಳಗಾದವರು. ಈತ ಅದೇ ಗ್ರಾಮದ ಯುವತಿಯನ್ನು ಪ್ರೀತಿಸುತ್ತಿದ್ದ. ಈ ವಿಚಾರ ತಿಳಿದ ಯುವತಿಯ ತಾಯಿ ಭಾಗ್ಯಲಕ್ಷ್ಮಿ ಅವರು ಮಹೇಶ್ ಕುಮಾರ್ ಕಂಡಾಗಲೆಲ್ಲಾ ನಿಂದಿಸುತ್ತಿದ್ದರು. ಇದರಿಂದ ಭಾಗ್ಯಲಕ್ಷ್ಮಿಯನ್ನು ದ್ವೇಷಿಸುತ್ತಿದ್ದ ಮಹೇಶ್ ಕುಮಾರ 2021ರ ಆ.25ರಂದು ಸಂಜೆ ಭಾಗ್ಯಲಕ್ಷ್ಮಿ ಚಾಮರಾಜ ಬಲದಂಡೆ ನಾಲೆ ಕಚ್ಚಾ ರಸ್ತೆ ಬಳಿ ನಡೆದುಕೊಂಡು ಹೋಗುತ್ತಿದ್ದ ವೇಳೆ ಗದ್ದೆ ಕಡೆಗೆ ಹೋಗಲು ಸೈಕಲ್ ಹಿಂದೆ ಗುದ್ದಲಿ ಸಿಕ್ಕಿಸಿಕೊಂಡು ಹೋಗುತ್ತಿದ್ದ. ಈ ವೇಳೆಯೂ ಭಾಗ್ಯಲಕ್ಷ್ಮಿ ನಿಂದಿಸಿದ್ದರಿಂದ ಮಹೇಶ ಕುಮಾರ ಗುದ್ದಲಿಯಿಂದ ಆಕೆಯ ಮುಖ, ತಲೆ ಮತ್ತು ಮೈಮೇಲೆ ಹೊಡೆದು ಕೊಲೆ ಮಾಡಿ ಶವವನ್ನು ಹಳೆಯ ಗೋಣಿ ಚೀಲಕ್ಕೆ ಹಾಕಿ ನಾಲೆಯ ತೂಬಿನೊಳಗೆ ತುರುಕಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಕೈಗೊಂಡಿದ್ದರು. ಅಲ್ಲದೇ ಅಂದಿನ ತನಿಖಾಧಿಕಾರಿ ಸಿಪಿಐ ಎಸ್.ಜಿ. ಕೃಷ್ಣಪ್ಪ ಅವರು ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಬಳಿಕ ಪ್ರಕರಣ ಸಂಬಂಧ ವಿಚಾರಣೆ ನಡೆಸಿದ ಮೈಸೂರಿನ 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಮಲ್ಲನಗೌಡ ಅವರು ಅಭಿಯೋಜಕರು ಹಾಜರುಪಡಿಸಿದ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದಾಗ ಕೃತ್ಯ ಎಸಗಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗೆ ಭಾ.ದಂ.ಸಂ ಕಲಂ 302ರ ಅಪರಾಧಕ್ಕೆ ಜೀವಾವಧಿ ಶಿಕ್ಷೆ ಮತ್ತು 75 ಸಾವಿರ ರೂ. ದಂಡ, ಭಾದಂ ಸಂ ಕಲಂ 201ರ ಅಪರಾಧಕ್ಕೆ 5 ವರ್ಷಗಳ ಶಿಕ್ಷೆ ಹಾಗೂ 25 ಸಾವಿರ ರೂ. ದಂಡವನ್ನು ವಿಧಿಸಿದ್ದು, 1 ಲಕ್ಷ ರೂ.ಗಳನ್ನು ಮೃತಳ ಮಗಳು ಮತ್ತು ತಂದೆಗೆ ನೀಡುವಂತೆ ಆದೇಶಿಸಿ ತೀರ್ಪು ನೀಡಿರುತ್ತಾರೆ. ಸರ್ಕಾರಿ ಸದರಿ ಪ್ರಕರಣದಲ್ಲಿ ಮೈಸೂರಿನ 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಅಭಿಯೋಜಕಿ ಬಿ.ಎಂ.ವೀಣಾರವರು ಸರ್ಕಾರದ ಪರ ವಾದ ಮಂಡಿಸಿದರು.

ನೇಮಕ


ತಿ.ನರಸೀಪುರ ಮೇ 14– ಎಐಸಿಸಿ ಪರಿಶಿಷ್ಟ



ವಿಭಾಗದ ರಾಷ್ಟ್ರೀಯ ಸಂಯೋಜಕರಾಗಿ ವಿಧಾನ ಪರಿಷತ್ ಮಾಜಿ ಸದಸ್ಯ ಆರ್.ಧ್ರುವನಾರಾಯಣ ಅವರನ್ನು ನೇಮಕ ಮಾಡಿ ಎಐಸಿಸಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ರಾಜೇಂದ್ರ ಪೈ ಗೌತಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೊ.ಬಿ.ಶ್ರೀನಿವಾಸಮೂರ್ತಿ ನಿಧನ


ಬನ್ನೂರು, ಮೇ 14– ಪಟ್ಟಣದ ತೇರಿನ



ಬೀದಿ ನಿವಾಸಿ ಪ್ರೊ.ಬಿ. ಶ್ರೀನಿವಾಸ ಮೂರ್ತಿ(83) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಡ್ಯದ ಚಾಮುಂಡೇಶ್ವರಿ ನಗರದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

■ ಸತ್ಯಮೂರ್ತಿ ತೋಳಹುಣಸೆ

‘ಸೆಪ್ಟೆಂಬರ್ 21’ ಚಿತ್ರಕ್ಕೆ ಉಪೇಂದ್ರ ಸಾಥ್




ಅಲ್ಜೈಮರ್ ಖಾಯಿಲೆಯು ಇರುವ ರೋಗಿಯು ಸುತ್ತ ನಡೆಯುವ ಕಥಾಹಂದರ ಒಳಗೊಂಡ ಚಿತ್ರ ಸೆಪ್ಟೆಂಬರ್ 21. ಪ್ರಿಯಾಂಕಾ ಉಪೇಂದ್ರ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರಕ್ಕೆ ಕೇವಲ 22 ವರ್ಷದ ಕರೆನ್ ಕ್ಷಿತಿ ಸುವರ್ಣ ಆಕ್ಷನ್‌ಕಟ್ ಹೇಳಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೈಲರ್‌ನ್ನು ರಿಯಲ್‌ಸ್ಟಾರ್ ಉಪೇಂದ್ರ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ನಿರ್ದೇಶಕ ಇಂದ್ರಜಿತ್ ಲಂಕೇಶ್ ಉಪಸ್ಥಿತರಿದ್ದರು.


ನಿರ್ದೇಶಕಿ ಕರೆನ್ ಕ್ಷಿತಿ ಸುವರ್ಣ ಮಾತನಾಡುತ್ತ ಸೆಪ್ಟೆಂಬರ್ 21 ಹಿಂದಿ ಮತ್ತು ಕನ್ನಡ ಭಾಷೆಯಲ್ಲಿ ಏಕಕಾಲಕ್ಕೆ ಚಿತ್ರೀಕರಣಗೊಂಡಿದೆ. ಮೇ 22ರಂದು ಚಿತ್ರವನ್ನು ರಿಲೀಸ್ ಮಾಡುತ್ತಿದ್ದೇವೆ. ಅದಕ್ಕೂ ಮುನ್ನ ಕಾನ್ಸ್ ಫಿಲಂ ಫೆಸ್ಟಿವಲ್‌ನಲ್ಲಿ ಮೇ 15ರಂದು ಈ ಚಿತ್ರ ಪ್ರದರ್ಶನವಾಗುತ್ತಿದೆ. ನನ್ನ ಮೊದಲ ನಿರ್ದೇಶನದ ಚಿತ್ರ ಕಾನ್ಸ್ ಫಿಲಂ ಫೆಸ್ಟಿವಲ್‌ನಲ್ಲಿ ಪ್ರದರ್ಶನವಾಗುತ್ತಿರುವುದು ಖುಷಿಯಾಗಿದೆ. ಅಲ್ಜೈಮರ್(ಮರೆಗುಳಿತನ) ಖಾಯಿಲೆ ಇರುವ ರೋಗಿಗಿಂತ ಅವನನ್ನು ಪಾಲನೆ ಮಾಡುವವರು ತೆಗೆದುಕೊಳ್ಳುವ ನಿರ್ಧಾರ ಇಲ್ಲಿ ತುಂಬಾ ಮುಖ್ಯವಾಗಿರುತ್ತದೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇವೆ. ನಟಿ ಪ್ರಿಯಾಂಕ ಉಪೇಂದ್ರ ಅವರು ರೋಗಿಯನ್ನು ಶುಶ್ರೂಷೆ ಮಾಡುವ ಮನೆಕೆಲಸದ ಮಹಿಳೆಯಾಗಿ ಅಭಿನಯಿಸಿದ್ದಾರೆ. ಒಬ್ಬ ಸ್ಟಾರ್ ನಟಿ ಇಂಥ ಪಾತ್ರ ಮಾಡಲು ಒಪ್ಪುವುದು ಸುಲಭವಲ್ಲ ಎಂದು ಹೇಳಿದರು.

ಆಲ್ಜೈಮರ್ ರೋಗಿಯ ಪಾತ್ರದಲ್ಲಿ ನಟ ಪ್ರವೀಣ್‌ಸಿಂಗ್ ಸಿಸೋಡಿಯಾ ನಟಿಸಿದ್ದಾರೆ. ಹಾಡುಗಳ ಬಗ್ಗೆ ಸಂಗೀತ ನಿರ್ದೇಶಕ ವಿನಯ್‌ಚಂದ್ರ ಅವರು ಮಾಹಿತಿ ನೀಡಿದರು. ಈ ವೇಳೆ ನಿರ್ಮಾಪಕರಾದ ವಿಜಯ್ ಚೌಧರಿ, ಶ್ರೀನಿವಾಸ್ ಬೆಟ್ಟದಪುರ, ರಮೇಶ್ ಭಂಡಾರಿ, ಅಭಿಷೇಕ್ ಗೌತಮ್ ಗೋಷ್ಠಿಯಲ್ಲಿದ್ದರು.



ವಿನಯ್ ರಾಜ್‌ಕುಮಾರ್ ಹೊಸ ಚಿತ್ರ ‘ಮಾಚೀಸ್’





ಕನ್ನಡ ಚಿತ್ರರಂಗದ ಮೇರುನಟ ಡಾ.ರಾಜಕುಮಾರ್ ಅವರ ಮೊಮ್ಮಗ ಹಾಗೂ ರಾಘವೇಂದ್ರ ರಾಜ್‌ಕುಮಾರ್ ಪುತ್ರ ನಟ ವಿನಯ್ ರಾಜ್‌ಕುಮಾರ್ ಅವರು ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದಾರೆ. ರನ್ ಆಂಟನಿ, ಟೆನ್, ಅನಂತು ವರ್ಸಸ್ ನುಸ್ರತ್, ಒಂದು ಸರಳ ಪ್ರೇಮಕಥೆಯಂಥ ವಿಭಿನ್ನ ಚಿತ್ರಗಳಲ್ಲಿ ಅಭಿನಯಿಸುವ ಮೂಲಕ ಕನ್ನಡ ಚಿತ್ರರಂಗದಲ್ಲಿ ತನ್ನದೇ ಆದ ಸ್ಟಾರ್ ವ್ಯಾಲ್ಯೂ ಬೆಳೆಸಿಕೊಂಡಿರುವ ನಟ ವಿನಯ್ ರಾಜ್‌ಕುಮಾರ್ ಅವರ ಬರ್ತ್ ಡೇ ಅಂಗವಾಗಿ ಹಲವಾರು ಹೊಸ ಚಿತ್ರಗಳನ್ನು ನಿರ್ಮಾಪಕರು ಅನೌನ್ಸ್ ಮಾಡಿದ್ದಾರೆ. ಇದೇ ದಿನ ಮತ್ತೊಂದು ನೂತನ ಬ್ಯಾನರ್ ನಿರ್ಮಾಣದ ಹೊಸ ಚಿತ್ರವೊಂದನ್ನು ಕೂಡ ಅನೌನ್ಸ್ ಮಾಡಲಾಗಿದೆ. ವಿಭಿನ್ನ ಕಥಾಹಂದರ ಒಳಗೊಂಡ ಆ ಚಿತ್ರದ ಹೆಸರು ‘ಮಾಚೀಸ್’. ಈ ಹಿಂದೆ ‘ಮರ್ಫಿ’ ಎಂಬ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದ ನಿರ್ದೇಶಕ ಬಿ. ಎಸ್. ಪಿ. ವರ್ಮ ಅವರು ‘ಮಾಚೀಸ್’ ಚಿತ್ರಕ್ಕೆ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಈ ಚಿತ್ರಕ್ಕೆ ಉದ್ಯಮಿ ಸುರೇಶ್‌ಗೌಡ ಹೆಣ್ಣೂರು ಅವರು ದೊಡ್ಡ ಮಟ್ಟದ ಬಂಡವಾಳವನ್ನು ಹೂಡುತ್ತಿದ್ದಾರೆ. ಮಾಚೀಸ್ ಚಿತ್ರದ ಕ್ರಿಯೇಟಿವ್ ಪ್ರೊಡ್ಯೂಸರ್ ಆಗಿ ಶಿವುಗೌಡ ಕೈ ಜೋಡಿಸಿದ್ದಾರೆ.

ತನ್ನ ವಿಶೇಷ ಟೈಟಲ್ ಮೂಲಕವೇ ಸ್ಯಾಂಡಲ್‌ವುಡ್‌ನಲ್ಲಿ ಹೊಸದೊಂದು ಕುತೂಹಲ ಮೂಡಿಸಿರುವ ‘ಮಾಚೀಸ್’ ಚಿತ್ರದ ಛಾಯಾಗ್ರಾಹಕರಾಗಿ ಆದರ್ಶ ಆರ್. ಅವರು ಕೆಲಸ ಮಾಡುತ್ತಿದ್ದಾರೆ. ಅಲ್ಲದೆ ಚಿತ್ರದ ಸಂಕಲನಕಾರರಾಗಿ ಕಿರಣ್, ಕಲಾ ನಿರ್ದೇಶಕರಾಗಿ ಗುಣ ಅವರು ಕಾರ್ಯ ನಿರ್ವಹಿಸಲಿದ್ದಾರೆ. ಬರುವ ಜುಲೈ ತಿಂಗಳಿಂದ ‘ಮಾಚೀಸ್’ ಚಿತ್ರದ ಚಿತ್ರೀಕರಣವನ್ನು ಆರಂಭಿಸಲಿರುವುದಾಗಿ ಚಿತ್ರ ತಂಡ ತಿಳಿಸಿದೆ.

ಈ ವಾರ ತೆರೆಗೆ ‘ಶಿಖಂಡಿ’





ಮಹಾಭಾರತದ ಶಿಖಂಡಿಯ ಪಾತ್ರವನ್ನು ಸ್ಫೂರ್ತಿಯಾಗಿಟ್ಟುಕೊಂಡು ಗುರುಮೂರ್ತಿ ಅವರು ‘ಶಿಖಂಡಿ’ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ ಇಂದಿನಿಂದ ರಾಜ್ಯಾದ್ಯಂತ ‘ಶಿಖಂಡಿ’ ಬಿಡುಗಡೆಯಾಗುತ್ತಿದೆ ಟ್ರೈಲರ್ ಹಾಗೂ ಎಲ್ಲಮ್ಮನ ಹಾಡು ವೈರಲ್ ಆಗಿದೆ.


ಚಿತ್ರ ಕುರಿತಂತೆ ಮಾತನಾಡಿದ ನಿರ್ಮಾಪಕ ಪೊಲ್ಲಾ ಪ್ರವೀಣ್‌ಕುಮಾರ್, ಇದೊಂದು ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಜಾನರ್ ಚಿತ್ರವಾಗಿದ್ದು, ಚಿತ್ರದಲ್ಲಿರುವ ಸವದತ್ತಿ ಎಲ್ಲಮ್ಮನ ಕುರಿತಾದ ಅದ್ಭುತವಾದ ಹಾಡನ್ನು ಕೇಳಿಯೇ ನಾನೀ ಚಿತ್ರವನ್ನು ನಿರ್ಮಿಸಬೇಕೆಂದು ಮನಸ್ಸು ಮಾಡಿದೆ ಎಂದು ಹೇಳಿದರು.

ನಾಯಕ ಯುವರಾಜ್ ಗೌಡ ಮಾತನಾಡುತ್ತ ಈ ಚಿತ್ರದಲ್ಲಿ ಎಂ.ಎನ್.ಸಿ. ಕಂಪನಿಯಲ್ಲಿ ಕೆಲಸ ಮಾಡುವ ಸೂರ್ಯ ಎಂಬ ಪಾತ್ರ ಮಾಡಿದ್ದೇನೆ. ಮಹಾಭಾರತದ ಶಿಖಂಡಿಗೂ ಇರುವ ಸಂಬಂಧವೇನು ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಎಲ್ಲಾ ತರಹದ ಎಮೋಶನ್ಸ್ ಇರೋ ಚಿತ್ರವಿದು ಎಂದರು. ನಾಯಕಿ ಖ್ಯಾತಿ ಮಾತನಾಡುತ್ತ ಈ ಚಿತ್ರದಲ್ಲಿ ನಾನು ಸಂಗೀತಾ ಎಂಬ ಡಾಕ್ಟರ್ ಪಾತ್ರ ಮಾಡಿದ್ದೇನೆ ಎಂದರು. ನಿಖಿತಾ ಸ್ವಾಮಿ, ಬಿಗ್‌ಬಾಸ್ ನೀತು ಹಿರಿಯ ಕಲಾವಿದರಾದ ರಘು ರಾಮನಕೊಪ್ಪ, ದೀಪಕ್‌ಶೆಟ್ಟಿ, ವಿಜಯ್ ಚೆಂಡೂರ್ ಉಳಿದ ಪಾತ್ರಗಳಲ್ಲಿದ್ದಾರೆ. ಸ್ವಾಮಿ ಅವರ ಛಾಯಾಗ್ರಹಣ, ಮಂಜುಕವಿ ಅವರ ಸಂಗೀತ ಸಂಯೋಜನೆ, ಕಿನ್ನಾಳ್‌ರಾಜ್, ಪ್ರದ್ಯೋತನ್ ಅವರ ಸಾಹಿತ್ಯ ಈ ಚಿತ್ರಕ್ಕಿದೆ.

ಸಿನಿಪದಬಂಧ-626



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಸಾಂಸ್ಕೃತಿಕ ನಗರಿಯ ಪುಷ್ಪ ತೆರೆಯ ಮೇಲೂ ಪರಿಮಳ ಬೀರಿದೆ 6
4. ಅಂಬಿ – ಸುಧಾರಾಣಿಯ ಏಳು ಹೆಜ್ಜೆಗಳ ಸಂಬಂಧ ! 4
6. _ _ ಕಿಂಕರ 2
7. ಪುಣ್ಯದೊಂದಿಗೆ ಇರುವ ಕೆಟ್ಟದು 2
8. ವಿಷ್ಣುವರ್ಧನ್ – ಗಾಯತ್ರಿ ಅಭಿನಯಕ್ಕೆ ರಾಜಾಚಂದ್ರ ನಿರ್ದೇಶನವಿದೆ 8
10. ಆನೆಯ ಮುಖದ ದೇವರಿಗೆ ಹೀಗೂ ಹೇಳಿ 4
11. ವಿಷ್ಣುವರ್ಧನ್ – ಮಂಜುಳಾ ಶರ್ಮ ಅಭಿನಯದಲ್ಲಿ ಬಂದ ಅರಸನಿಗೆ ಭಾರ್ಗವ ನಿರ್ದೇಶಕ 5
13. ರಾಕ್‌ಲೈನ್ ವೆಂಕಟೇಶ್ ‘ಪರಾಕ್ರಾಮಿ’ 2
14. ಮಾಲೆಯ ನಡುವೆ ನಡೆದ ಕದನ 3
15. ನಟ ಮೋಹನ್ ವಿಷ್ಣುವಿನ ಅವತಾರದಲ್ಲಿ ಭಯಂಕರ ರೂಪ ತಾಳಿದ್ದಾನೆ 6
17. ಕೂಲಿ ರಾಜ ಚಿತ್ರದ ನಾಯಕಿ 3
18. ಹಕ್ಕಿಗಳು ವಾಪಸ್ಸು ತನ್ನ ನೆಲೆ ಸೇರಿದಾಗ ಚಿತ್ರವೊಂದು ಪ್ರತ್ಯಕ್ಷ! 6

ಮೇಲಿನಿಂದ ಕೆಳಕ್ಕೆ

1. ಪ್ರಭಾಕರ್ ನನ್ನು ಬಿರುದಿನೊಂದಿಗೆ ಪ್ರೀತಿಯಿಂದ ಕರೆಯಿರಿ ! 7
2. ಸಂಜನಾ ಹರಿಸಿದ ದೊಡ್ಡ ಹೊಳೆ ! 4
3. ಪೆದ್ದ _ _ 2
4. ಎರಡನೇ ಹೆಂಡತಿ ಬೀರಿದ ಛಾಯೆ 7
5. ಡಾರ್ಲಿಂಗ್ ಕೃಷ್ಣನಿಗೆ ಸಿಕ್ಕ ಬೇಕರಿಯ ಸಿಹಿ ! 5
8. ಸುರಪತಿಯನ್ನು ನವರಸ ನಾಯಕ ಜಯಿಸಿದ್ದಾನೆ 8
9. ವಿಷ್ಣುವರ್ಧನ್ – ರಾಶಿ, ಅಭಿನಯದ ಚಿತ್ರ 6
12. ಶಿವರಾಜ್ ಕುಮಾರ್ – ಶಿಲ್ಪಾ ಅಭಿನಯದ ಚಿತ್ರಕ್ಕೆ ನಾಗಾಭರಣ ನಿರ್ದೇಶಕ 6
15. ‘ನಿನ್ನಂಥ ಶ್ರೀಮತಿ ಕೈಹಿಡಿದಾಗ ನಿನ್ನಂಥ ಗುಣವತಿ......’, ಗೀತೆಯ ಚಿತ್ರ 2
16. ಜಿಪುಣ ನನ್ನ ಗಂಡ ಚಿತ್ರದ ನಾಯಕಿ 3

ಸಿನಿ ಪದಬಂಧ 625ರ ಉತ್ತರ

ಪ್ರೇ	ಮ	ಪ	ಲ್ಲ	ವಿ		ಅ				ಸ್ವ
ಮ				ಧಿ		ಜ್ಞಾ		ಕ		ಯಂ
ಸಿಂ		ವಿ	ಶ್ವ	ವಿ	ಜೇ	ತ		ನ		ವ
ಹಾ				ಲಾ		ವಾ	ರ	ಸು	ದಾ	ರ
ಸ		ಕೆ		ಸ		ಸ		ನ		
ನ	ವ	ರ	ಸ				ಜ	ನ	ಬ	ಲ
		ಳಿ		ಪ್ರಿ		ಪ್ರೇ		ಸು		ವ್
ಆ	ನಂ	ದ	ಜ್ಯೋ	ತಿ		ಮ				ಮಾ
ನಂ		ಸ		ಸಿ	ರಿ	ಚಂ	ದ	ನ		ಡಿ
ತ		ರ್ಪ		ನೋ		ದ್ರ				ನೋ
ರ				ಡು		ಮ	ದು	ವೆ	ಮಾ	ಡು

ವಿಜೇತರು: ನಾಗರಾಜ, ನಂ.16, 2ನೇ ಕ್ರಾಸ್, ಜಯದೇವನಗರ, ಮೈಸೂರು

ವಿಳಾಸ: ‘ಸಿನಿಬಂಧ’ ವಿಭಾಗ, ‘ಮೈಸೂರು ಮಿತ್ರ’ ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಕಾದಂಬರಿ ಆಧಾರಿತ ಚಿತ್ರ ‘ತಿಕ್ಲುರಾಮ’



ಪರಿಸರ ಪ್ರೇಮಿಯೊಬ್ಬನ ಹೃದಯಸ್ಪರ್ಶಿ ಕಥಾಹಂದರ ಒಳಗೊಂಡ ಚಿತ್ರ ತಿಕ್ಲುರಾಮ. ಡಾ.ನಟರಾಜ್ ಅವರ ಇದೇ ಹೆಸರಿನ ಕಾದಂಬರಿಯನ್ನಾಧರಿಸಿ ಈ ಚಿತ್ರ ನಿರ್ಮಿಸಲಾಗಿದ್ದು, ಚಿತ್ರವೀಗ ರಿಲೀಸ್ ಹಂತದಲ್ಲಿದೆ. ಇತ್ತೀಚೆಗೆ ತಿಕ್ಲುರಾಮನ ಕಾದಂಬರಿಯನ್ನು ಹಿರಿಯಸಾಹಿತಿ ಡಾ.ದೊಡ್ಡರಂಗೇಗೌಡ ಬಿಡುಗಡೆ ಮಾಡಿದರು, ಮಂಜುಕವಿ ಅವರು ನಿರ್ದೇಶನದ ಜವಬ್ದಾರಿಯನ್ನು ಹೊತ್ತುಕೊಂಡಿದ್ದು, ಡಾ.ರಾಜವೀರ್ ಚಿತ್ರದ ನಾಯಕನಾಗಿದ್ದಾರೆ. ಕರಿಷ್ಮ-ಶ್ರಾವ್ಯ ಕಂಬೈನ್ಸ್ ಬ್ಯಾನರ್ ಅಡಿಯಲ್ಲಿ ಶೃತಿ.ಜಿ.ಬಿ. ಮತ್ತು ಕೋಮಲ ನಟರಾಜು ಜಂಟಿಯಾಗಿ ಈ ಚಿತ್ರ ನಿರ್ಮಿಸಿದ್ದಾರೆ. ನಿರ್ದೇಶಕ ಮಂಜು ಕವಿ ಮಾತನಾಡಿ ಈ ಪುಸ್ತಕವನ್ನು ಪ್ರತಿಯೊಬ್ಬರೂ ಓದಲೇಬೇಕು. ಓದಿದ ಒಂದಷ್ಟು ಜನ ಖಂಡಿತ ಬದಲಾವಣೆಯಾಗ್ತಾರೆ. ಪರಿಸರದ ಬಗ್ಗೆ ನಾವು ಯಾವ ರೀತಿ ಕಾಳಜಿ ವಹಿಸಬೇಕು. ಪ್ರಕೃತಿ ನಮಗೆ ಎಲ್ಲವನ್ನು ಕೊಟ್ಟಿದೆ. ಇಂಥ ಹಲವಾರು ವಿಷಯಗಳನ್ನು ಈ ಚಿತ್ರದಲ್ಲಿ ಚರ್ಚಿಸಲಾಗಿದೆ ಎಂದರು.

ನಾಯಕ ಡಾ.ರಾಜ್‌ವೀರ್ ಮಾತನಾಡುತ್ತ ನಾನು ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ದೊಡ್ಡರಂಗೇಗೌಡರ ಮಾತುಗಳಿಂದ ಪ್ರೇರಿತನಾಗಿ, ಜೀವನದಲ್ಲಿ ಅವರಂತೇ ನಡೀಬೇಕು ಅಂದುಕೊಂಡಿದ್ದೆ. ಅದೇ ಇಂದು ಹಲವು ಕಥೆಗಳನ್ನು ಬರೆಯಲು ಸಹಕಾರಿಯಾಯಿತು. ನಮ್ಮ ಸುತ್ತಮುತ್ತಲಿನ ವಿದ್ಯಮಾನಗಳನ್ನು ಅಕ್ಷರ ರೂಪಕ್ಕೆ ತಂದಿದ್ದೇನೆ ಎಂದರಲ್ಲದೆ ಕಾದಂಬರಿಗೆ ತಿಕ್ಲುರಾಮ ಎಂಬ ಹೆಸರಿಡಲು ಕಾರಣವೇನು ಎಂಬುದಕ್ಕೆ ವಿವರಣೆ ನೀಡಿದರು.

ಸಾಹಿತಿ ಡಾ.ದೊಡ್ಡರಂಗೇಗೌಡ್ರು ಮಾತನಾಡುತ್ತ ಕನ್ನಡ ಸಾಹಿತ್ಯಲೋಕಕ್ಕೆ ಹಲವರು ತಮ್ಮ ಕೊಡುಗೆ ನೀಡಿದ್ದಾರೆ. ಈಗ ಕನ್ನಡದ ಸಂಸ್ಕೃತಿ ಎಲ್ಲಾ ಕಡೆ ರಾರಾಜಿಸುತ್ತಿದೆ. ‘ತಿಕ್ಲುರಾಮ’ ಕಾದಂಬರಿ ತುಂಬಾ ಚೆನ್ನಾಗಿದೆ ಎಂದರು. ಈ ಚಿತ್ರದಲ್ಲಿ ರಾಜ್‌ವೀರ್, ಸುಚೇಂದ್ರ ಪ್ರಸಾದ್, ಜಹಾಂಗೀರ್, ಚೈತ್ರರಾಮ್, ಪವಿತ್ರ, ಶ್ರಾವ್ಯ ಸೇರಿದಂತೆ ಅನೇಕ ಕಲಾವಿದರು ನಟಿಸಿದ್ದಾರೆ.

ಕುಮಾರ್ ಬಂಗಾರಪ್ಪ ಈಗ ‘ನ್ಯಾಯಬೆಲೆ ಅಂಗಡಿ ಮಾಲೀಕ’



ಸಾತ್ವಿಕ್ ಪವನ್‌ಕುಮಾರ್ ನಿರ್ದೇಶನದ ಸರ್ಕಾರಿ ನ್ಯಾಯ ಬೆಲೆ ಅಂಗಡಿ ಚಿತ್ರದಲ್ಲಿ ಕುಮಾರ್ ಬಂಗಾರಪ್ಪ ಅವರು ನ್ಯಾಯಬೆಲೆ ಅಂಗಡಿ ಮಾಲೀಕನಾಗಿ ಕಾಣಿಸಿಕೊಂಡಿದ್ದಾರೆ. ಈಗಾಗಲೇ ಈ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಅಂತಿಮಹಂತದ ಪೋಸ್ಟ್ ಪ್ರೊಡಕ್ಷನ್ ವರ್ಕ್ ನಡೆಯುತ್ತಿದೆ. ನಟಿ ರಾಗಿಣಿ ದ್ವಿವೇದಿ ಚಿತ್ರದ ನಾಯಕಿಯಾಗಿ ನಟಿಸಿದ್ದಾರೆ. ಇತ್ತೀಚೆಗೆ ನಾಯಕ ಕುಮಾರ್ ಬಂಗಾರಪ್ಪ ಅವರ ಕ್ಯಾರೆಕ್ಟರ್ ಟೀಸರನ್ನು ಶಾಸಕ ಎಸ್.ಆರ್.ವಿಶ್ವನಾಥ್ ಬಿಡುಗಡೆಗೊಳಿಸಿ ಮಾತನಾಡುತ್ತ ನಮ್ಮ ರಾಜ್ಯದಲ್ಲಿರುವಂಥ ವ್ಯವಸ್ಥಿತ ಪಡಿತರ ವಿತರಣಾ ಪದ್ದತಿ ಬೇರೆಲ್ಲೂ ಇಲ್ಲ, ಹೊಸ ಕಾನ್ಸೆಪ್ಟ್ ಇಟ್ಟುಕೊಂಡು ಈ ಸಿನಿಮಾ ಮಾಡಿದ್ದಾರೆ. ಪಡಿತರ ಗ್ರಾಹಕರ, ಮಾಲೀಕರ ಸಮಸ್ಯೆಗಳು, ಪಡಿತರ ವ್ಯವಸ್ಥೆಯಲ್ಲಿನ ಸಣ್ಣಪುಟ್ಟ ಲೋಪದೋಷಗಳು, ಹೀಗೆ ಎಲ್ಲವನ್ನೂ ತೋರಿಸಿರಬಹುದು. ನನ್ನ ಬಹಳ ವರ್ಷಗಳ ಸ್ನೇಹಿತ ಕುಮಾರ್ ಬಂಗಾರಪ್ಪ ನ್ಯಾಯಬೆಲೆ ಅಂಗಡಿ ಮಾಲೀಕನಾಗಿ ನಟಿಸಿದ್ದಾರೆ. ನಾನು ಈ ಚಿತ್ರವನ್ನು ಫಸ್ಟ್‌ಡೇನೇ ನೋಡ್ತೀನಿ. ಇವತ್ತು ಸಿನಿಮಾಗಳ ಸಕ್ಸಸ್ ರೇಟ್ ತುಂಬಾ ಕಮ್ಮಿಯಾಗಿದೆ, ಜನ ಇಂಥ ಒಳ್ಳೇ ಸಿನಿಮಾಗಳು ಬಂದಾಗ ಥಿಯೇಟರಿಗೆ ಹೋಗಿ ನೋಡಬೇಕು, ಈ ಹಿಂದೆ ನಾನು ಕೂಡ ಒಂದು ಸಿನಿಮಾದಲ್ಲಿ ಅಭಿನಯಿಸಿದ್ದೆ ಎಂದು ಹೇಳಿದರು.

ಕುಮಾರ್ ಬಂಗಾರಪ್ಪ ಮಾತನಾಡಿ ಚಿತ್ರದಲ್ಲಿ ಪ್ರತಿ ಪಾತ್ರವೂ ವಿಶೇಷವಾಗಿದೆ. ಈ ಪಾತ್ರಕ್ಕೆ ನೀವೇ ಬೇಕು ಅಂತ ಹಠ ಹಿಡಿದು ನನ್ನಿಂದ ಮಾಡಿಸಿದ್ದಾರೆ. ಹಿಂದೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿತ್ರ ಬಂದಿತ್ತು, ಅದರ ಸ್ಫೂರ್ತಿಯೂ ಈ ಚಿತ್ರದಲ್ಲಿದೆ ಎಂದರು. ಹಳ್ಳಿಯ ಮಹಿಳೆಯೊಬ್ಬಳು ಸರ್ಕಾರಿ ನ್ಯಾಯ ಬೆಲೆ ಅಂಗಡಿಯ ಸುತ್ತ ನಡೆಯುವ ಭ್ರಷ್ಟ ವ್ಯವಸ್ಥೆಯ ವಿರುದ್ದ ಹೇಗೆ ಹೋರಾಡುತ್ತಾಳೆ ಎಂದು ರಾಗಿಣಿ ಅವರ ಪಾತ್ರದ ಮೂಲಕ ತೋರಿಸಿದ್ದಾರೆ. ಜಯಶಂಕರ ಟಾಕೀಸ್ ಬ್ಯಾನರ್ ಅಡಿ ತೇಜುಮೂರ್ತಿ ಮತ್ತು ಪದ್ಮಾವತಿ ಈ ಚಿತ್ರ ನಿರ್ಮಿಸಿದ್ದಾರೆ, ನಿರ್ಮಾಪಕ ಭಾ.ಮ. ಹರೀಶ್, ಭಾ.ಮ.ಗಿರೀಶ್ ಸಹೋದರರು ಈ ಸಂದರ್ಭದಲ್ಲಿ ಹಾಜರಿದ್ದರು.

ಮೈಸೂರು ನಗರದಲ್ಲಿ ಸಾಧಾರಣ ಮಳೆ

ಭಾರೀ ಗಾಳಿಗೆ ಬುಡಸಮೇತ ನೆಲಕ್ಕುರುಳಿದ ಮರ; ಅದೃಷ್ಟವಶಾತ್ ಯಾವುದೇ ಅಪಾಯವಿಲ್ಲ



ವಿದ್ಯಾರಣ್ಯಪುರಂನ ಸಾರ್ವಜನಿಕ ಹಾಸ್ಟೆಲ್ ರಸ್ತೆಯಲ್ಲಿ ಕೊಂಬೆಗಳು ಮುರಿದು ಬಿದ್ದಿರುವುದು.



ವಿಶ್ವೇಶ್ವರನಗರ ಕೈಗಾರಿಕಾ ಪ್ರದೇಶದ ಸಾಯಿ ಬೃಂದಾವನ ಅಪಾರ್ಟ್‌ಮೆಂಟ್ ಸಮೀಪ ಫುಟ್‌ಪಾತ್‌ನಲ್ಲಿದ್ದ ಮರವೊಂದು ಬುಡಸಮೇತ ನೆಲಕ್ಕುರುಳಿರುವುದು.

ಮೈಸೂರು,ಮೇ 14(ಪಿಎಂ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಗುರುವಾರ ಮಧ್ಯಾಹ್ನ ಸಾಧಾರಣ ಮಳೆಯಾಗಿದ್ದು, ಆರಂಭದಲ್ಲಿ ಭಾರೀ ಗಾಳಿ ಇದ್ದ ಹಿನ್ನೆಲೆಯಲ್ಲಿ ನಗರದ ವಿವಿಧೆಡೆ ಮರದ ಕೊಂಬೆಗಳು ನೆಲಕ್ಕುರಳಿದ್ದರೆ, ವಿಶ್ವೇಶ್ವರನಗರದಲ್ಲಿ ಫುಟ್‌ಪಾತ್‌ನಲ್ಲಿದ್ದ ಮರವೊಂದು ಬುಡ ಸಮೇತ ನೆಲಕ್ಕುರಳಿದೆ.

ಮಧ್ಯಾಹ್ನ ಸುಮಾರು 2.30ರ ವೇಳೆಯಲ್ಲಿ ಗುಡುಗು ಕೇಳಿ ಬಂದ ಹಿನ್ನೆಲೆಯಲ್ಲಿ ಜೋರು ಮಳೆಯಾಗುವ ನಿರೀಕ್ಷೆ ಮೂಡಿತಾದರೂ ಸುಮಾರು 15 ನಿಮಿಷವಷ್ಟೇ ಸುರಿದ ಮಳೆ, ನಂತರ ಮಾಯವಾಯಿತು. ಹೆಚ್ಚು ಕಾಲ ಮಳೆಯಾಗದ ಹಿನ್ನೆಲೆಯಲ್ಲಿ ಸೆಕೆಯ ಪ್ರಮಾಣ ಮತ್ತಷ್ಟು ಹೆಚ್ಚಾಯಿತು.

ಮೈಸೂರಿನ ಹೃದಯಭಾಗ ಮಾತ್ರವಲ್ಲದೆ, ಜೆಪಿ ನಗರ, ವಿದ್ಯಾರಣ್ಯಪುರಂ, ಶ್ರೀರಾಂಪುರ, ಬೋಗಾದಿ, ರಾಮಕೃಷ್ಣನಗರ ಮೊದಲಾದೆಡೆ ಮಳೆಯಾಗಿದೆ. ನಗರದ ಕೆಆರ್ ವೃತ್ತ, ಚಾಮರಾಜ ವೃತ, ಸಯ್ಯಾಜಿರಾವ್ ರಸ್ತೆ ಸೇರಿದಂತೆ ನಗರದ ಹೃದಯ ಭಾಗದ ರಸ್ತೆಗಳು ಹಾಗೂ ವಿವಿಧ ಬಡಾವಣೆಗಳ ರಸ್ತೆಗಳಲ್ಲಿ ತಗ್ಗು ಜಾಗಗಳು ಮಳೆ ನೀರಿನಿಂದ ಜಲಾವೃತಗೊಂಡಿದ್ದವು. ಗಾಳಿ ಪರಿಣಾಮ ಕೆಲವೆಡೆ ಮರದ ಕೊಂಬೆಗಳು ಮುರಿದು ಬಿದ್ದಿದ್ದವು.

ವಿದ್ಯಾರಣ್ಯಪುರಂನ ಸಾರ್ವಜನಿಕ ಹಾಸ್ಟೆಲ್ ರಸ್ತೆ, ಇಲ್ಲಿನ 4ನೇ ಮೇನ್ 3ನೇ ಕ್ರಾಸ್, ಜೆಎಸ್‌ಎಸ್ ಆಸ್ಪತ್ರೆ ಸಮೀಪ ಮುರಿದು ಬಿದ್ದಿದ್ದ ಕೊಂಬೆಗಳನ್ನು ಪಾಲಿಕೆ ಅಭಯ ತಂಡದಿಂದ ತೆರವುಗೊಳಿಸಲಾಯಿತು. ಅಂತೆಯೇ ಚೆಲುವಾಂಬ ಅಗ್ರಹಾರದ ರಮಾವಿಲಾಸ ರಸ್ತೆಯಲ್ಲಿ ಎರಡು ಮರಗಳ ಕೊಂಬೆಗಳು ಮುರಿದು ಬಿದ್ದಿದ್ದವು. ಅಲ್ಲದೆ, ಉದಯಗಿರಿಯ 2ನೇ ಹಂತ ಹಾಗೂ ರಾಮಕೃಷ್ಣನಗರದ ಶ್ರೀರಾಮಕೃಷ್ಣ ಪರಮಹಂಸ ವೃತ್ತ ಸಮೀಪ ಸೇರಿದಂತೆ ವಿವಿಧೆಡೆ ಮುರಿದು ಬಿದ್ದಿದ್ದ ಕೊಂಬೆಗಳನ್ನು ಪಾಲಿಕೆಯ ಅಭಯ ತಂಡಗಳು ತೆರವು ಮಾಡಿದವು.

ಬುಡಸಮೇತ ಬಿದ್ದ ಮರ: ವಿಶ್ವೇಶ್ವರನಗರ ಕೈಗಾರಿಕಾ ಪ್ರದೇಶದ ಸಾಯಿ ಬೃಂದಾವನ ಅಪಾರ್ಟ್‌ಮೆಂಟ್ ಸಮೀಪ ಫುಟ್‌ಪಾತ್‌ನಲ್ಲಿದ್ದ ಮರವೊಂದು ಬುಡಸಮೇತ ನೆಲಕ್ಕುರಳಿತ್ತು. ಬೇರು ದುರ್ಬಲಗೊಂಡಿದ್ದರಿಂದ ಈ ಮರ ನೆಲಕ್ಕುರುಳಿದೆ. ಪರಿಣಾಮ ಇಲ್ಲಿ ನಿಲುಗಡೆ ಮಾಡಿದ್ದ ಬೈಕ್‌ವೊಂದು ಜಖಂಗೊಂಡಿತ್ತು. ಅದೃಷ್ಟವಶಾತ್ ಯಾವುದೇ ಸಾವು ನೋವು ಸಂಭವಿಸಿಲ್ಲ.

ಮಳೆ–ಗಾಳಿಗೆ ಮರಗಳು, ಅದರ ಕೊಂಬೆಗಳು ಮಾತ್ರವಲ್ಲದೆ, ವಿದ್ಯುತ್ ಕಂಬಗಳೂ ನೆಲಕ್ಕುರುಳುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮ ಅಗತ್ಯವಾಗಿದೆ. ಹಾಗಾಗಿ ಮೈಸೂರು ಮಹಾನಗರ ಪಾಲಿಕೆ, ಸೆಸ್ಕ್ ಸೇರಿದಂತೆ ವಿವಿಧ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಅನಾಹುತಕ್ಕೆ ಆಸ್ಪದ ನೀಡದಂತೆ ಮುನ್ನಚ್ಚರಿಕೆ ಕ್ರಮಗಳನ್ನು ವಹಿಸುವುದು ಒಳಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬಿಲ್ಲಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕೆಡಿ (ಕ)	4 ಪ್ರದರ್ಶನಗಳು
ಲಿಡೋ	
ಶಿಖಂಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಶೇರ್ (ಕ)	4 ಪ್ರದರ್ಶನಗಳು

ಮೂರನೇ ಪುಟದಿಂದ

ಮತದಾರರ ಪಟ್ಟಿ ಪರಿಷ್ಕರಣೆ

ಅರುಣಾಚಲ ಪ್ರದೇಶ, ಹರ್ಯಾಣ, ಚಂಡೀಗಢ, ತೆಲಂಗಾಣ, ಪಂಜಾಬ್, ಕರ್ನಾಟಕ, ಮೇಘಾಲಯ, ಮಹಾರಾಷ್ಟ್ರ, ಜಾರ್ಖಂಡ್, ನಾಗಾಲ್ಯಾಂಡ್, ತ್ರಿಪುರಾ ಹಾಗೂ ದಾದ್ರಾ ಮತ್ತು ನಗರ್ ಹವೇಲಿ, ಡಿಯು ಡಾಮನ್ ಸೇರಿವೆ.

ಚುನಾವಣಾ ಆಯೋಗದ ಮಾಹಿತಿ ಪ್ರಕಾರ, ಈ ಹಂತದಲ್ಲಿ 3.94 ಲಕ್ಷಕ್ಕಿಂತ ಹೆಚ್ಚು ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಇದಕ್ಕೂ ಮೊದಲು ನಡೆದ ಮೊದಲ ಎರಡು ಹಂತಗಳಲ್ಲಿ 13 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 59 ಕೋಟಿಗೂ ಹೆಚ್ಚು ಮತದಾರರನ್ನು ಒಳಗೊಂಡ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿತ್ತು. ಅದರಲ್ಲಿ 6.3 ಲಕ್ಷಕ್ಕೂ ಹೆಚ್ಚು ಬಿಎಲ್‌ಒಗಳು ಹಾಗೂ 9.2 ಲಕ್ಷ ಬಿಎಲ್‌ಎಗಳು ಸಹಕರಿಸಿದ್ದರು ಎಂದು ಆಯೋಗ ತಿಳಿಸಿದೆ. ಈ ಪರಿಷ್ಕರಣೆ ಪ್ರಕ್ರಿಯೆಯನ್ನು ಹಲವು ಹಂತಗಳಲ್ಲಿ ರೂಪಿಸಲಾಗಿದ್ದು, ತರಬೇತಿ, ಎಣಿಕೆ, ಕರಡು ಪಟ್ಟಿ ಪ್ರಕಟಣೆ, ಆಕ್ಷೇಪಣೆ ಮತ್ತು ದೂರುಗಳ ಪರಿಶೀಲನೆ, ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಮುಂತಾದ ಹಂತಗಳನ್ನು ಒಳಗೊಂಡಿದೆ.

ಇದಕ್ಕೂ ಮುನ್ನ ಬಿಹಾರ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಪುದುಚೇರಿ, ಉತ್ತರ ಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್, ಛತ್ತೀಸ್‌ಗಢ, ಗೋವಾ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮತ್ತು ಲಕ್ಷದ್ವೀಪಗಳುಗಳಲ್ಲಿ ಈ ವಿಶೇಷ ತೀವ್ರ ಪರಿಷ್ಕರಣೆ ಪೂರ್ಣಗೊಂಡಿದೆ. ಇದಲ್ಲದೆ ಅಸ್ಸಾಂನಲ್ಲಿ ಪ್ರತ್ಯೇಕ ವಿಶೇಷ ಪರಿಷ್ಕರಣೆ ಪ್ರಕ್ರಿಯೆಯನ್ನೂ ನಡೆಸಲಾಗಿದೆ ಎಂದು ಆಯೋಗ ತಿಳಿಸಿದೆ.

ಕೇಸರಿ ಶಾಲು, ಪೇಟಾ ಹಾಕಬಾರದು!!

ಅವಕಾಶ ನೀಡುವುದಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು.

ಸಚಿವ ಸಂಪುಟ ಪುನಾರಚನೆ ಮಾಡುತ್ತೇನೆ!: ರಾಜ್ಯದಲ್ಲಿ ಸಚಿವ ಸಂಪುಟ ಪುನಾರಚನೆ ಮಾಡಬೇಕು, ಮಾಡುತ್ತೇನೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಆದರೆ ಹೈಕಮಾಂಡ್ ಕರೆಯದ ಹಿನ್ನೆಲೆಯಲ್ಲಿ ನಾನು ಸದ್ಯಕ್ಕೆ ದೆಹಲಿಗೆ ಹೋಗುವುದಿಲ್ಲ. ಒಂದು ವೇಳೆ ಚರ್ಚೆ ಮಾಡಲು ಆಹ್ವಾನ ನೀಡಿದರೆ ಹೋಗುತ್ತೇನೆ ಎಂದರು. ಮೇ 15 ರಂದು ದೆಹಲಿ ಭೇಟಿ ಮಾಹಿತಿ ಇದೆಯಲ್ಲ ಎಂಬ ಪತ್ರಕರ್ತರ ಪ್ರಶ್ನೆಗೆ ಸಿದ್ದರಾಮಯ್ಯ ಸಿಟ್ಟಾದರು. ಅದು ಯಾವ ಆಧಾರದ ಮೇಲೆ ಮೇ 15 ರಂದೇ ದೆಹಲಿಗೆ ಹೋಗುತ್ತೇನೆ ಎಂದು ದಿನಾಂಕ ವನ್ನು ನೀವೇ ನಿಗದಿ ಮಾಡಿದ್ದೀರಾ. ನಾನೇ ನಾದರೂ ಹೇಳುದ್ದೇನೆಯೇ ಅಥವಾ ಹೈಕಮಾಂಡ್ ಏನಾದರೂ ಹೇಳಿದೆಯೇ ಎಂದು ಕೋಪೋದ್ರಿಕ್ತರಾಗಿ ಪ್ರಶ್ನಿಸಿದರು.

ಕೇಂದ್ರ ಸರ್ಕಾರ ಟೀಕಿಸಿ: ಕರ್ನಾಟಕದಲ್ಲಿ ಸಿಇಟಿ ಪರೀಕ್ಷೆಯನ್ನು ಬಹಳ ಜವಾಬ್ದಾರಿಯಿಂದ ಮಾಡಿದ್ದೇವೆ. ಕೇಂದ್ರ ಸರ್ಕಾರ ಕೂಡ ನೀಟ್ ಪರೀಕ್ಷೆಯನ್ನು ನಮ್ಮಷ್ಟೆ ಜವಾಬ್ದಾರಿಯಿಂದ ಮಾಡಬೇಕಿತ್ತು ಎಂದು ಅಭಿಪ್ರಾಯಪಟ್ಟರು. ಕೇಂದ್ರ ಸರ್ಕಾರ ಮಕ್ಕಳ ಪರೀಕ್ಷೆಯನ್ನು ಹಾಳು ಮಾಡಿದ್ದು, ಅವರ ಬೇಜವಾಬ್ದಾರಿಗೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ ಎಂದು ಪ್ರಶ್ನಿಸಿದರು. ಎಲ್ಲಾ ಮಾಧ್ಯಮಗಳು ಕೇಂದ್ರ ಸರ್ಕಾರ ವನ್ನು ಮೊದಲು ಟೀಕಿಸಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು. ನಿನ್ನೆ ಮೈಸೂರಿಗೆ ಆಗಮಿಸಿದ್ದ ಸಿದ್ದ ರಾಮಯ್ಯ ಅವರು ನಗರದಲ್ಲೆ ವಾಸ್ತವ್ಯ ಹೂಡಿದ್ದರು. ಇಂದು ಬೆಳಿಗ್ಗೆ ಮನೆಯ ಬಳಿ ಸೇರಿದ್ದ ಜನರಿಂದ ಸಿದ್ದರಾಮಯ್ಯ ಅಹವಾಲು ಸ್ವೀಕರಿಸಿದರು.

ಯುವಕನ ಅಪಹರಿಸಿ ಹಲ್ಲೆ ; ನಾಲ್ವರ ವಿರುದ್ಧ ಪ್ರಕರಣ ದಾಖಲು

ಮೈಸೂರು,ಮೇ 14(ಪಿಎಂ)– ಗುಂಪೊಂದು ಯುವಕನೊಬ್ಬನ ಅಪಹರಿಸಿ ಹಲ್ಲೆ ನಡೆಸಿರುವ ಆರೋಪದಡಿ ಕೆಆರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಲಿತಾದ್ರಿಪುರದ ಎಂ.ಮನೋಜ್‌ಕುಮಾರ್ (21) ಹಲ್ಲೆಗೆ ಒಳಗಾದ ಯುವಕ. ಈತ ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ.

ಮೇ 10ರಂದು ಬೆಳಗ್ಗೆ ಚಾಮುಂಡಿಬೆಟ್ಟದಿಂದ ವಾಪಸ್ ಬರುತ್ತಿದ್ದೆ. ಆಗ ಲೋಕೇಶ್, ಶೇಖರ್ ಅಲಿಯಾಸ್ ಅಭಿ ಎಂಬುವವರು ಕಾರ್‌ನಲ್ಲಿ ನನ್ನನ್ನು ಅಪಹರಿಸಿ, ಯರಗನಹಳ್ಳಿಯ ಸ್ಮಶಾನ ಸಮೀಪದ ಕೋಳಿಶೆಡ್‌ಗೆ ಎಳೆದೊಯ್ದು ರಾಡು, ದೊಣ್ಣೆಯಿಂದ ಹಲ್ಲೆ ನಡೆಸಿದರು. ನಂತರ ಅಲ್ಲಿಂದ ಅದೇ ಕಾರಿನಲ್ಲಿ ಲಲಿತಾದ್ರಿಪುರ ಗ್ರಾಮದ ಇಟ್ಟಿಗೆ ಶೆಡ್‌ಗೆ ಕರೆದೊಯ್ದು ಲೋಕೇಶ್‌ನ ಅಣ್ಣ ಮಹೇಂದ್ರ, ಅವರ ತಂದೆ ಮಹದೇವಸ್ವಾಮಿ ಸೇರಿ ದೊಣ್ಣೆಯಿಂದ ಹಲ್ಲೆ ಮಾಡಿದರು. ಅಲ್ಲದೆ ಹಲ್ಲೆಯ ವಿಡಿಯೋ ಸಹ ಮಾಡಿಕೊಂಡರು. ಬಳಿಕ ಸ್ಥಳದಿಂದ ಓಡಿ ಹೋದರು ಎಂದು ಮನೋಜ್‌ಕುಮಾರ್ ದೂರಿನಲ್ಲಿ ಆರೋಪಿಸಿದ್ದಾರೆ.

ಪ್ರಜ್ಞೆ ತಪ್ಪಿದ್ದ ನಾನು, ಎಚ್ಚರಗೊಂಡ ಬಳಿಕ ಮನೆಗೆ ಮರಳಿದ್ದೆ. ಓಡಾಡಲು ಆಗದ ಕಾರಣ ಮಾರನೇ ದಿನ ಕೆಆರ್ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದೆ ಎಂದು ಮನೋಜ್‌ಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

ತಂಪಾದ ತಾವಲ್ಲಿ ತಾವೂರುವ ಹಾವುಗಳು!

● ಅಡುಗೆ ಪರಿಕರ ಟ್ರೇನಲ್ಲಿ ವಿಶ್ರಾಂತಿಗೆ ಜಾರಿದ್ದ ನಾಗಪ್ಪ ● ನಿಮ್ಮ ಮನೆಯ ಯಾವ ಜಾಗದಲ್ಲಿಯೂ ಆಶ್ರಯ ಪಡೆಯಬಹುದು; ಎಚ್ಚರ





ಅಡುಗೆ ಮನೆಗಳಲ್ಲಿ ಆಶ್ರಯ ಪಡೆದ ಹಾವುಗಳ ಸಂರಕ್ಷಿಸುತ್ತಿರುವ ಸ್ನೇಕ್ ಶ್ಯಾಂ

ಮೈಸೂರು,ಮೇ 14(ಪಿಎಂ)– ಬೇಸಿಗೆಯ ತೀವ್ರ ತಾಪದ ಹಿನ್ನೆಲೆಯಲ್ಲಿ ಉರಗಗಳು ತಂಪಾದ ತಾವು (ಜಾಗ) ಹುಡುಕುತ್ತಾ ನಿಮ್ಮ ಮನೆಯ ಯಾವುದೇ ಸ್ಥಳ ಹೊಕ್ಕರು ಅಚ್ಚರಿ ಇಲ್ಲ!

ಗುರುವಾರ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಹೊಸಳ್ಳಿ ಗ್ರಾಮದ ಮನೆಯೊಂದರ ಅಡುಗೆ ಮನೆಯಲ್ಲಿ ಅಡುಗೆ ಪರಿಕರ ಇರಿಸಿದ್ದ ಟ್ರೇನಲ್ಲಿ ಸುಮಾರು ಒಂದೂವರೆ ವರ್ಷ ಪ್ರಾಯದ ನಾಗರ ಹಾವು ಆಶ್ರಯ ಪಡೆದಿತ್ತು. ಅದನ್ನು ಉರಗ ಸಂರಕ್ಷಕ ಸ್ನೇಕ್ ಶ್ಯಾಮ್ ಸಂರಕ್ಷಿಸಿ, ಆ ಮನೆಯವರು ನಿಟ್ಟುಸಿರು ಬಿಡುವಂತೆ ಮಾಡಿದ್ದಾರೆ.

ಹಾವುಗಳು ಶೀತ ರಕ್ತದ ಜೀವಿಗಳಾಗಿದ್ದು, ತಮ್ಮ ದೇಹದ ಉಷ್ಣತೆ ನಿಯಂತ್ರಿಸಲು ತಂಪಾದ ತೇವಾಂಶಭರಿತ ಸ್ಥಳಗಳನ್ನು ಆಶ್ರಯಿಸುತ್ತವೆ. ಬೇಸಿಗೆಯ ಬಿಸಿಲಿನಿಂದ ಪಾರಾಗಲು ಅವು ಮನೆ, ಗಾರ್ಡನ್, ಕಿಚನ್‌ಗಳಿಗೂ ಲಗ್ಗೆ ಇಡುತ್ತವೆ. ಅವು ವಿಷಕಾರಿಯಾಗದೇ ಇದ್ದರೆ ಪಾರಾಗಬಹುದು. ಆದರೆ ವಿಷಕಾರಿಯಾದಲ್ಲಿ ಅಪಾಯಕ್ಕೆ ಸಿಲುಕಬೇಕಾಗುತ್ತದೆ. ಹಾಗಾಗಿ ಎಚ್ಚರಿಕೆ ಅಗತ್ಯ.

ಧಗೆಯ ಕಾರಣ ತಂಪಾದ ವಾತಾವರಣಕ್ಕೆ ಹಾತೊರೆಯುವ ಹಾವುಗಳು, ಜನ ವಾಸಿಸುವ ಮನೆಗಳತ್ತ ಮುಖ ಮಾಡುತ್ತವೆ. ಮನೆ ಆವರಣದ ಹೂದೋಟ, ಗಿಡಗಳನ್ನು ಬೆಳೆಸಿರುವ ಕುಂಡಗಳು ಮಾತ್ರವಲ್ಲದೆ, ಮನೆಯೊಳಕ್ಕೂ ಪ್ರವೇಶ ಪಡೆಯುತ್ತವೆ. ಅಡುಗೆ ಮನೆಯ ಪಾತ್ರೆ ಪಗಡೆ ಹೊಕ್ಕರೂ ಅಚ್ಚರಿಬೇಡ. ಮನೆಯಲ್ಲಿನ ಯಾವುದೇ ಪದಾರ್ಥಗಳಲ್ಲಿ ಹಾವುಗಳು ಸೇರಿಕೊಳ್ಳುವ ಹಿನ್ನೆಲೆಯಲ್ಲಿ ಗುರುತಿಸಲಾಗದೇ ಅವುಗಳ ಕಡಿತಕ್ಕೆ ಒಳಗಾಗಿರುವ ಸಾಕಷ್ಟು ನಿದರ್ಶನಗಳು ಇವೆ.

ಹಾಗಾಗಿ ಬೇಸಿಗೆಕಾಲದಲ್ಲಿ ಎಚ್ಚರ ವಹಿಸುವುದು ಅಗತ್ಯವಾಗಿದೆ. ಅಡುಗೆ ಪರಿಕರಗಳ ಸಂಗ್ರಹಿಸಿಡುವ ಸ್ಥಳವೂ ಅವುಗಳಿಗೆ ಒಳ್ಳೆಯ ಆಶ್ರಯ ತಾಣವಾಗುತ್ತವೆ. ಬೊಂಬೆ, ಶೋಕೇಸ್, ಮಂಚ, ಹಾಸಿಗೆ, ಬಟ್ಟೆಬರೆ, ಶೂ, ಚಪ್ಪಲಿ ಯಾವುದಾದರೂ ಸರಿಯೇ ತಂಪಾದ ಜಾಗವಾಗಿದ್ದರೆ ಅವುಗಳಿಗೆ ಅಷ್ಟೇ ಸಾಕು. ತರಕಾರಿ ಸಂಗ್ರಹಿಸುವ ಸ್ಥಳ, ಎಳನೀರು ಚಿಪ್ಪು ಇಟ್ಟಿರುವ ಜಾಗ ಸೇರಿದಂತೆ ತನಗೆ ಹಿತಕರವೆಂದು ಕಂಡು ಬರುವ ಜಾಗಗಳಲ್ಲಿ ವಿಶ್ರಾಂತಿಗೆ ಜಾರುತ್ತವೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಉರಗ ಸಂರಕ್ಷಕ ಸ್ನೇಕ್ ಶ್ಯಾಮ್, ಸಿಲಿಂಡರ್ ಕೆಳಗೆ, ವಾಟರ್ ಹೀಟರ್, ವಾಷಿಂಗ್ ಮೆಷಿನ್, ಫ್ಲವರ್‌ಪಾಟ್ಸ್ ಸೇರಿದಂತೆ ತಂಪಾದ ಸ್ಥಳದಲ್ಲಿ ಆಶ್ರಯ ಪಡೆಯುತ್ತವೆ. ಜೊತೆಗೆ ಈಗ ಮರಿಗಳ ಸಂಖ್ಯೆ ಹೆಚ್ಚಾಗಿದ್ದು, ಇಂದು ದೇವಸ್ಥಾನವೊಂದರಲ್ಲಿ ಹಾವೊಂದು ಸಿಕ್ಕಿತು. ಗ್ರಾನೆಟ್ ತಣ್ಣಗಿದ್ದ ಕಾರಣಕ್ಕೆ ಅದು ಅಲ್ಲಿಗೆ ಬಂದಿತ್ತು. ಬೆಳಗ್ಗೆ ಸರಸ್ವತಿಪುರಂನ ಮನೆಯೊಂದಲ್ಲಿ ಗ್ಯಾಸ್ ಸಿಲಿಂಡರ್ ಕೆಳಗೆ ಹಾವೊಂದು ಸಿಕ್ಕಿತು. ಫ್ಯಾನ್, ಎಸಿ ಸೌಲಭ್ಯ ಬಳಸುವ ಮನುಷ್ಯರಿಗೆ ಇಷ್ಟೊಂದು ಸೆಕೆ ಇದೆ. ಇನ್ನು ಇಂತಹ ಯಾವುದೇ ಸೌಲಭ್ಯ ಹೊಂದದ ಹಾವುಗಳು ಭೂಮಿಯಲ್ಲಿನ ಧಗೆ ತಾಳಲಾರದೇ ಹೊರ ಬರುತ್ತಿವೆ. ಆದ್ದರಿಂದ ಮರಿಗಳು ಹೆಚ್ಚುತ್ತಿವೆ. ಇಂತಹ ಸನ್ನಿವೇಶದಲ್ಲಿ ನಾವು ಎಚ್ಚರ ವಹಿಸುವುದು ಅಗತ್ಯ ಎಂದು ತಿಳಿಸಿದರು.

ವಾರದಲ್ಲಿ 9 ಮಂಡಲ, 18 ನಾಗರ ರಕ್ಷಣೆ: ಈ ವಾರದಲ್ಲಿ 9 ಮಂಡಲ ಹಾವಿನ ಮರಿ ಹಾಗೂ 18 ನಾಗರ ಹಾವಿನ ಮರಿಗಳನ್ನು ಸಂರಕ್ಷಣೆ ಮಾಡಿದ್ದೇನೆ. ಆದ್ದರಿಂದ ಶೂ–ಚಪ್ಪಲಿಗಳನ್ನು ಯಾವುದೇ ಕಾರಣಕ್ಕೂ ಮನೆಯಿಂದ ಹೊರಗೆ ಇರಿಸುವುದು ಸೂಕ್ತವಲ್ಲ. ಮನೆ ಮುಂದೆ ರಾತ್ರಿ ವೇಳೆ ಪ್ರಕಾಶಮಾನವಾದ ಬೆಳಕು ಸೂಸುವ ಬಲ್ಬ್‌ಗಳನ್ನು ಬೆಳಗಿಸಬೇಕು. ಮೊನ್ನೆ ಗೃಹಿಣಿಯೊಬ್ಬರು ಮಂಡಲ ಹಾವಿನ ಮರಿ ಕಡಿತಕ್ಕೆ ಒಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದೇ ರೀತಿ ಬಾಲಕನ ಕಾಲಿಗೆ ಮಂಡಲ ಹಾವು ಕಚ್ಚಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಮೈಸೂರು ಜಿಲ್ಲೆಯಲ್ಲಿ ಈ ತಿಂಗಳಲ್ಲೇ ಸುಮಾರು 8ರಿಂದ 10 ಮಂದಿ ಹಾವಿನ ಕಡಿತಕ್ಕೆ ಒಳಗಾಗಿದ್ದಾರೆ ಎಂದರು.

ಹಾವು ಶೀತ ರಕ್ತ ಜೀವಿಯಾದ ಹಿನ್ನೆಲೆಯಲ್ಲಿ ಬೆವರಿನ ಗ್ರಂಥಿ ಇಲ್ಲದ ಕಾರಣ ಬೇಸಿಗೆಕಾಲದಲ್ಲಿ ತಂಪಾದ ಜಾಗಕ್ಕೆ ಹಾಗೂ ಚಳಿ–ಮಳೆಗಾಲದಲ್ಲಿ ಬೆಚ್ಚಗಿರುವ ಜಾಗ ಹುಡುಕುತ್ತವೆ. ಮನೆ, ಮತ್ತಿತರ ಸ್ಥಳಗಳಲ್ಲಿ ಹಾವು ಸೇರಿಕೊಂಡಿದ್ದರೆ ದಿನದ 24 ಗಂಟೆಯೂ ಸಾರ್ವಜನಿಕರು ನನಗೆ ಕರೆ (99805 57797) ಮಾಡಬಹುದು ಎಂದು ಹೇಳಿದರು.

ತಮಿಳುನಾಡಿನಲ್ಲಿ ಮದ್ಯ ಖರೀದಿಗೆ 21 ವರ್ಷ ಕಡ್ಡಾಯ

ಟಿವಿಕೆ ಸರ್ಕಾರ ಆದೇಶ



ಚೆನ್ನೈ: ಜೋಸೆಫ್ ವಿಜಯ್ ನೇತೃತ್ವದ ತಮಿಳುನಾಡು ಸರ್ಕಾರ ರಾಜ್ಯದಲ್ಲಿ ಮದ್ಯಪಾನದ ನಿಯಮಗಳನ್ನು ಕಠಿಣಗೊಳಿಸುವ ಮಹತ್ವದ ನಿರ್ಧಾರ ಕೈಗೊಂಡಿದೆ. ಇನ್ನು ಮುಂದೆ ಮದ್ಯ ಖರೀದಿ ಅಥವಾ ಮಾರಾಟ ಮಾಡಲು ಕನಿಷ್ಠ 21 ವರ್ಷ ನಿಗದಿಪಡಿಸಿ ಮಹತ್ವದ ಆದೇಶ ಹೊರಡಿಸಿದೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ವಿಜಯ್ ಸರ್ಕಾರ ಈ ಕ್ರಮ ಜಾರಿಗೆ ತಂದಿದೆ. ರಾಜ್ಯದಲ್ಲಿ ಮದ್ಯಪಾನ ನಿಯಂತ್ರಣ ಮತ್ತು ಸಾರ್ವಜನಿಕ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈಗಾಗಲೇ ದೇವಾಲಯಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಬಸ್ ನಿಲ್ದಾಣಗಳ ಸಮೀಪದಲ್ಲಿದ್ದ 717 ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮದ ಮದ್ಯದಂಗಡಿಗಳನ್ನು ಮುಚ್ಚಲು ಸರ್ಕಾರ ಆದೇಶಿಸಿದ ಬೆನ್ನಲ್ಲೇ ಮತ್ತೊಂದು ಕ್ರಮವನ್ನು ಕೈಗೊಂಡಿದೆ.

ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮ ಅಂಗಡಿಗಳ ಸಿಬ್ಬಂದಿಗೆ ಗ್ರಾಹಕರ ವಯಸ್ಸನ್ನು ಕಟ್ಟುನಿಟ್ಟಾಗಿ ಪರಿಶೀಲಿಸುವಂತೆ ಸೂಚನೆ ನೀಡಲಾಗಿದೆ. ಅನುಮಾನ ಬಂದಲ್ಲಿ ಆಧಾರ್ ಕಾರ್ಡ್ ಸೇರಿದಂತೆ ಗುರುತಿನ ಚೀಟಿಗಳನ್ನು ಪರಿಶೀಲಿಸಿ, 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಮಾರಾಟ ಮಾಡಬಾರದು ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಇದೇ ವೇಳೆ ಮದ್ಯದಂಗಡಿಗಳ ಕಾರ್ಯಾಚರಣೆ ಸಮಯವನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ. ಪ್ರಸ್ತುತ ಮಧ್ಯಾಹ್ನ 12ರಿಂದ ರಾತ್ರಿ 10ರವರೆಗೆ ಕಾರ್ಯನಿರ್ವಹಿಸುತ್ತಿರುವ ಅಂಗಡಿಗಳನ್ನು ರಾತ್ರಿ 8 ಗಂಟೆಗೆ ಮುಚ್ಚುವ ಪ್ರಸ್ತಾಪವೂ ಚರ್ಚೆಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್‌ನಿಂದ ಸಿದ್ದರಾಮಯ್ಯರ ರಾಜ್ಯಸಭೆಗೆ ಕಳಿಸಿ ಡಿಕೆಶಿ ಸಿಎಂ ಮಾಡುವ ಚಿಂತನೆ!



ಬೆಂಗಳೂರು, ಮೇ 14(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಾಜ್ಯಸಭೆಗೆ ಕಳುಹಿಸಿ ಕರ್ನಾಟಕದಲ್ಲಿ ಅಧಿಕಾರ ಹಸ್ತಾಂತರ ಗೊಂದಲಕ್ಕೆ ತೆರೆ ಎಳೆಯಲು ಎಐಸಿಸಿ ಮುಂದಾಗಿದೆ.

ಬಿಹಾರದಲ್ಲಿ ನಿತೀಶ್ ಕುಮಾರ್ ಅವರನ್ನು ಅಧಿಕಾರದಿಂದ ಕೆಳಗಿಸಲು ಬಿಜೆಪಿ ಮಾಡಿದ ಕಾರ್ಯತಂತ್ರವನ್ನೇ ಕಾಂಗ್ರೆಸ್ ಅನುಸರಿಸಲು ಹೊರಟಿದೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ನಾಲ್ವರ ರಾಜ್ಯಸಭಾ ಸದಸ್ಯತ್ವ ಅವಧಿ ಬರುವ ಜೂನ್ 30ಕ್ಕೆ ಅಂತ್ಯಗೊಳ್ಳಲಿದೆ. ವಿಧಾನಸಭೆಯಲ್ಲಿನ ಪಕ್ಷಗಳ ಸಂಖ್ಯಾಬಲದ ಆಧಾರದ ಮೇಲೆ ಕಾಂಗ್ರೆಸ್‌ಗೆ ಮೂರು, ಬಿಜೆಪಿಗೆ ಒಂದು ಸ್ಥಾನ ಲಭ್ಯವಾಗಲಿದೆ. ಸಿದ್ದರಾಮಯ್ಯ ಅವರನ್ನು ರಾಜ್ಯ ಸಭೆಗೆ ಕಳಿಸುವ ಮೂಲಕ ರಾಷ್ಟ್ರ ರಾಜ ಕಾರಣಕ್ಕೆ ಬಳಸಿಕೊಳ್ಳಲು ಸ್ವತಃ ರಾಹುಲ್ ಗಾಂಧಿ ಆಸಕ್ತಿ ತೋರಿದ್ದಾರೆ.

ರಾಜ್ಯಸಭಾ ಸದಸ್ಯತ್ವ ಕಲ್ಪಿಸುವ ಮೂಲಕ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಗೌರವದಿಂದ ಇಳಿಸಿದಂತಾಗುತ್ತದೆ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೇಡಿಕೆ ಈಡೇರಿಸಲು ಸಾಧ್ಯವಾಗಲಿದೆ ಎಂಬುದು ಎಐಸಿಸಿ ಲೆಕ್ಕಾಚಾರವಾಗಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಗೆ ಮುನ್ನ ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವಿನ ಮುಖ್ಯಮಂತ್ರಿ ಗಾದಿ ತಿಕ್ಕಾಟ ಪರಿಹರಿಸಲು ತಲಾ ಎರಡೂವರೆ ವರ್ಷ ಅಧಿಕಾರ ಸೂತ್ರ ರೂಪಿಸಲಾಗಿತ್ತು. ಇದರಂತೆ 2025ರ ನವೆಂಬರ್ 20ಕ್ಕೆ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡಬೇಕಿತ್ತು. ಆದರೆ, ಮುಖ್ಯಮಂತ್ರಿ ಸ್ಥಾನ ತ್ಯಜಿಸದೆ ಎಲ್ಲವನ್ನೂ ರಾಹುಲ್ ಗಾಂಧಿ ನಿರ್ಧಾರಕ್ಕೆ ಬಿಟ್ಟಿರುವುದಾಗಿ ಹೇಳಿ ನುಣಚಿಕೊಂಡಿದ್ದಾರೆ.

ಆದರೆ, ಪಟ್ಟುಬಿಡದ ಶಿವಕುಮಾರ್ ಅಧಿಕಾರ ಹಸ್ತಾಂತರಕ್ಕೆ ಪಕ್ಷದ ವರಿಷ್ಠರ ದುಂಬಾಲು ಬಿದ್ದಿದ್ದಾರೆ.

ಈ ಗೊಂದಲ ನಿವಾರಣೆಗೆ ರಾಜ್ಯಸಭಾ ಚುನಾವಣೆಯನ್ನು ಬಳಸಿಕೊಂಡು ಕರ್ನಾಟಕ ಕಾಂಗ್ರೆಸ್‌ನಲ್ಲಿನ ಗೊಂದಲ ಪರಿಹರಿಸಲು ವರಿಷ್ಠರು ಮುಂದಾಗಿದ್ದಾರೆ.

ಉಚಿತ ನೀಟ್ ರಿವಿಷನ್ ಕ್ರ್ಯಾಶ್ ಕೋರ್ಸ್ ಪ್ರಾರಂಭ

ಮೈಸೂರು, ಮೇ 14– ಮೈಸೂರಿನ ಡಾ.ಚಂದ್ರಶೇಖರ್ ಫೌಂಡೇಷನ್ ಹಾಗೂ ಕಾವೇರಿ ಸಮೂಹ ವಿದ್ಯಾ ಸಂಸ್ಥೆಗಳ ಅಂಗ ಸಂಸ್ಥೆಯಾದ ಕಾವೇರಿ ಎಕ್ಸಲೆನ್ಸ್ ಪಿಯು ಕಾಲೇಜು ವತಿಯಿಂದ 2026ನೇ ಸಾಲಿನ ರೀ–ನೀಟ್ ಪರೀಕ್ಷೆಗಾಗಿ ಉಚಿತ ಪರಿಷ್ಕರಣೆ ಮತ್ತು ಕ್ರ್ಯಾಶ್ ಕೋರ್ಸ್ ಹಮ್ಮಿಕೊಳ್ಳಲಾಗಿದೆ. ನೀಟ್ ಪರೀಕ್ಷೆಯು ರದ್ದಾದ ಪ್ರಯುಕ್ತ ಪುನರ್ ನೀಟ್ ಪರೀಕ್ಷೆ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ನೆರವಾಗಲು ನುರಿತ ತಜ್ಞ ಉಪನ್ಯಾಸಕರಿಂದ ಉಚಿತ ಕ್ರ್ಯಾಶ್ ಕೋರ್ಸ್ ತರಬೇತಿ ನೀಡಲಾಗುತ್ತಿದೆ. ತರಗತಿಯು ಮೇ 18ರಿಂದ ನೀಟ್ ಪರೀಕ್ಷೆವರೆಗೆ ಬೆಳಗ್ಗೆ 9ರಿಂದ ಸಂಜೆ 4 ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9459456585, 9609675158 ಸಂಪರ್ಕಿಸಿ.

ಔಪಚಾರಿಕ ಪಂದ್ಯದಲ್ಲಿ ಗೆದ್ದು ಬೀಗಿದ ಮುಂಬೈ



ತಿಲಕ್ ವರ್ಮಾ ಬ್ಯಾಟಿಂಗ್ ವೈಖರಿ.

ಧರ್ಮಶಾಲಾ, ಮೇ 14(ವಿವಿಹೆಚ್)– ತಿಲಕ್ ವರ್ಮಾ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ ಮುಂಬೈ ಇಂಡಿಯನ್ಸ್, ಬಲಿಷ್ಠ ಪಂಜಾಬ್ ಕಿಂಗ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿತು. ಟೂರ್ನಿಯ ಮೊದಲಾರ್ಧದಲ್ಲಿ ಸತತ 6 ಪಂದ್ಯಗಳಲ್ಲಿ ಗೆದ್ದು ಬೀಗಿದ್ದ ಪಂಜಾಬ್ ಈಗ ಎರಡನೇ ಭಾಗದ ಮೊದಲ ಐದೂ ಪಂದ್ಯಗಳಲ್ಲಿ ಸೋತು ಹಿನ್ನಡೆ ಅನುಭವಿಸಿದೆ.

ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಪಿಎಲ್–2026ರ 58ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್‌ಗಳನ್ನು ಕಳೆದುಕೊಂಡು 200 ರನ್ ಕಲೆಹಾಕಿತು.

ಪಂಜಾಬ್ ಪರ ಇನ್ನಿಂಗ್ಸ್ ಆರಂಭಿಸಿದ ಪ್ರಿಯಾಂಶ್ ಆರ್ಯ ಮತ್ತು ಪ್ರಭ್‌ಸಿಮ್ರನ್ ಸಿಂಗ್ ಜೋಡಿ, ಮೊದಲ ವಿಕೆಟ್‌ಗೆ ಕೇವಲ 5.3 ಓವರ್‌ಗಳಲ್ಲೇ 50 ರನ್ ಕಲೆಹಾಕಿತು. ಆರ್ಯ 22(17) ರನ್ ಗಳಿಸಿ ನಿರ್ಗಮಿಸಿದರೆ, ಪ್ರಭ್‌ಸಿಮ್ರಾನ್ 32 ಎಸೆತಗಳಲ್ಲಿ 6ಬೌಂಡರಿ, 4 ಸಿಕ್ಸರ್ ಸಹಿತ 57 ರನ್ ಕಲೆಹಾಕಿದರು.

ಕೂಪರ್ ಕೊನೊಲಿ 21(22) ಉಳಿದಂತೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಮತ್ತೊಮ್ಮೆ ವೈಫಲ್ಯ ಅನುಭವಿಸಿದರು. ನಾಯಕ ಶ್ರೇಯಸ್ ಅಯ್ಯರ್ 4(2), ಸೂರ್ಯಾಂಶ್ ಶೆಡ್ಗೆ 8(5), ಶಶಾಂಕ್ ಸಿಂಗ್ 2(3) ಮಾರ್ಕೋ ಏನ್ಸನ್ 2(7) ಒಂದಂಕಿ ಮೊತ್ತಕ್ಕೆ ಕುಸಿದು ಮತ್ತೊಮ್ಮೆ ನಿರಾಸೆ ಮೂಡಿಸಿದರು.

ಕೊನೆಯಲ್ಲಿ ಅಬ್ಬರಿಸಿದ ಅಜ್ಮತ್ತುಲ್ಲಾ ಓರ್ಮರ್ಜೈ 17 ಎಸೆತಗಳಲ್ಲಿ 38 ರನ್ ಬಾರಿಸಿ ತಂಡದ ಮೊತ್ತ ಇನ್ನೂರರ ಗಡಿ ದಾಟಲು ಸಹಕರಿಸಿದರು. ವಿಷ್ಣು ವಿನೋದ್ 15(8), ಜೇವಿಯರ್ ಬಾರ್ಟ್ಲೆಟ್ 18(7) ತಂಡದ ರನ್ ಹೆಚ್ಚಿಸಲು ಸಹಕರಿಸಿದರು.

ಮುಂಬೈ ಪರ ಶಾರ್ದೂಲ್ ಠಾಕೂರ್ ಪ್ರಮುಖ 4 ವಿಕೆಟ್ ಕಿತ್ತರು. ದೀಪಕ್ ಚಾಹರ್ 2, ಕಾರ್ಬಿನ್ ಬಾಷ್ ಹಾಗೂ ರಾಜ್ ಬಾವಾ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಮುಂಬೈಗೆ ಉತ್ತಮ ಆರಂಭ ದೊರೆಯಿತು. ರೋಹಿತ್, ರಿಕೆಲ್ಟನ್ ಜೋಡಿ ಮೊದಲ ವಿಕೆಟ್‌ಗೆ ಅರ್ಧಶತಕದ ಜೊತೆಯಾಟ ಒದಗಿಸಿದರು. ರಿಯಾನ್ ರಿಕೆಲ್ಟನ್ 23 ಎಸೆತಗಳಲ್ಲಿ 48 ರನ್, ರೋಹಿತ್ ಶರ್ಮಾ 25(26) ರನ್ ಗಳಿಸಿ ಔಟಾದರೆ, ಬಳಿಕ ಬಂದ ನಮನ್ ಧಿರ್ 9(6) ರನ್ ಬಾರಿಸಿ ಬಂದಷ್ಟೆ ವೇಗವಾಗಿ ಮರಳಿದರು.

ಈ ವೇಳೆ ಏಕಾಂಗಿಯಾಗಿ ನಿಂತು ಹೋರಾಡಿದ ತಿಲಕ್ ವರ್ಮಾ 33 ಎಸೆತ ಎದುರಿಸಿ 6 ಬೌಂಡರಿ, 6 ಸಿಕ್ಸರ್ ಸಹಿತ 75 ರನ್ ಗಳಿಸಿ ಅಜೇಯರಾಗಿ ಉಳಿದು ತಂಡಕ್ಕೆ ಗೆಲುವು ತಂದು ಕೊಟ್ಟರು. ವಿಲ್ ಜಾಕ್ಸ್ 10 ಎಸೆತಗಳಲ್ಲಿ 25 ರನ್ ಬಾರಿಸಿ ತಿಲಕ್‌ಗೆ ನೆರವಾದರು. ರುದರ್‌ಫೋರ್ಡ್ 20(21) ರನ್ ಗಳಿಸಿದರು. ಪಂಜಾಬ್ ಪರ ಓರ್ಮರ್ಜೈ 2 ವಿಕೆಟ್, ಮಾರ್ಕೋ ಏನ್ಸನ್ ಹಾಗೂ ಚಾಹಲ್ ತಲಾ ಒಂದೊಂದು ವಿಕೆಟ್ ಕಿತ್ತರು.

ಕಾಂಗ್ರೆಸ್ ಸರ್ಕಾರಕ್ಕೆ ಹುಚ್ಚು ಹಿಡಿದಿದೆ



ಬೆಂಗಳೂರು: ಶಾಲೆಗಳಲ್ಲಿ ಹಿಜಾಬ್ ಧರಿಸಲು ಅಧಿಕೃತ ಮಾಡಿದ್ದು ಸರಿಯಲ್ಲ. ಕಾಂಗ್ರೆಸ್ ಸರ್ಕಾರಕ್ಕೆ ಹುಚ್ಚು ಹಿಡಿದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ.

ವಸ್ತ್ರಸಂಹಿತೆ ಕುರಿತು ರಾಜ್ಯ ಸರ್ಕಾರದ ಆದೇಶ ವಿಚಾರವಾಗಿ ಬೆಂಗಳೂರಿನಲ್ಲಿ ಅವರು ಮಾತನಾಡಿದರು. ಈ ವೇಳೆ, ಸರ್ಕಾರದ ಪಾಪದ ಕೊಡ ತುಂಬಿದೆ. ಇವರ ಯೋಗ್ಯತೆಗೆ ಆಡಳಿತ ನಡೆಸಲು ಸಾಧ್ಯವಾಗದೇ, ಧರ್ಮ ಧರ್ಮಗಳ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಾ ಬರುತ್ತಿದ್ದಾರೆ. ರಾಜ್ಯದಲ್ಲಿ ಮಾಡಬೇಕಾದ ಸಾಕಷ್ಟು ಕೆಲಸಗಳಿವೆ. ಸರ್ಕಾರದ ನಿರ್ಧಾರಕ್ಕೆ ಮುಂದಿನ ದಿನಗಳಲ್ಲಿ ರಾಜ್ಯದ ಜನ ಉತ್ತರ ಕೊಡುತ್ತಾರೆ. ಹಿಜಾಬ್ ವಿಚಾರ ಇನ್ನೂ ಕೋರ್ಟ್‌ನಲ್ಲಿದೆ. ಅಲ್ಪಸಂಖ್ಯಾತರನ್ನು ಓಲೈಸಲು ಕಾಂಗ್ರೆಸ್ ಯಾವ ಮಟ್ಟಕ್ಕೂ ಹೇಸುವುದಿಲ್ಲ ಎಂದು ತೋರಿಸಿದ್ದಾರೆ. ಹಿಂದೂಗಳಿಗೆ ಕಾಂಗ್ರೆಸ್ ಸರ್ಕಾರ ನಿರಂತರ ಅಪಮಾನ ಮಾಡುತ್ತಿದೆ. ರಾಜ್ಯದಲ್ಲಿ ಪ್ರಚೋದನೆ ಮಾಡುವ, ಪರಸ್ಪರ ಎತ್ತಿ ಕಟ್ಟುವ ಷಡ್ಯಂತ್ರ ಕಾಂಗ್ರೆಸ್ ಸರ್ಕಾರದ ನಿರ್ಧಾರಗಳಲ್ಲಿ ಇದೆ ಎಂದು ಆರೋಪಿಸಿದ್ದಾರೆ. ಉಪಚುನಾವಣೆ ಗೆದ್ದ ಅಮಲಿನಲ್ಲಿ ಈ ರೀತಿ ತೀರ್ಮಾನ ತೆಗೆದುಕೊಳ್ಳುತ್ತಿರಬಹುದು. ಸರ್ಕಾರ ಅಭಿವೃದ್ಧಿ ಮರೆತು ಹಿಂದೂಗಳಿಗೆ ಅಪಮಾನ ಮಾಡಿಕೊಂಡು ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಮಾಡಿಕೊಂಡು ಬರುತ್ತಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ.


ಜನ್ಮದಿನದ ಹಾರ್ದಿಕ ಶುಭಾಶಯಗಳು
ಸಪ್ತಪದಿ ಅಸೋಸಿಯೇಟ್ಸ್ ಹಾಗೂ ದಿ ಕಾಂಟಿನೆಂಟಲ್ ಇನ್ & ಸೂಟ್ಸ್‌ನ
ವ್ಯವಸ್ಥಾಪಕ ಪಾಲುದಾರರು, ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ
ಉಪಾಧ್ಯಕ್ಷರು,ಸಾಮಾಜಿಕ ಹೋರಾಟಗಳ ಮೂಲಕ ಜನಸಾಮಾನ್ಯರ ಧ್ವನಿಯಾಗಿ
ಗುರುತಿಸಿಕೊಂಡಿರುವ ಹೋರಾಟದ ಮುಖಂಡರು,
ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದಿಂದ ನೀಡುವ
ಪ್ರತಿಷ್ಠಿತ "ಆತಿಥ್ಯರತ್ನ" ಪುರಸ್ಕಾರಕ್ಕೆ ಭಾಜನರಾದವರು,
ಹಾಗೂ ಹೋಟೆಲ್ ಮಾಲಿಕರ ಸಂಘದ ಅಧ್ಯಕ್ಷರಾಗಿರುವ
ಶ್ರೀ ಸಿ. ನಾರಾಯಣಗೌಡ
ರವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು
ತಮ್ಮ ನಾಯಕತ್ವ, ಸಮಾಜಮುಖಿ ಚಿಂತನೆ, ಸೇವಾ ಮನೋಭಾವ ಮತ್ತು ಸಂಘಟನಾ ಶಕ್ತಿಯಿಂದ ಅನೇಕ ಜನರ ಬದುಕಿಗೆ ಸ್ಫೂರ್ತಿಯಾಗಿರುವ ನೀವು, ಸದಾ ಆರೋಗ್ಯ, ಆಯುಷ್ಯ, ಯಶಸ್ಸು ಮತ್ತು ಸಂತೋಷದಿಂದ ಕಂಗೊಳಿಸಲಿ. ಸಮಾಜದ ಅಭಿವೃದ್ಧಿ ಹಾಗೂ ಹೋಟೆಲ್ ಕ್ಷೇತ್ರದ ಪ್ರಗತಿಗಾಗಿ ನಿಮ್ಮ ಸೇವೆ ಇನ್ನಷ್ಟು ಉನ್ನತ ಮಟ್ಟಕ್ಕೇರಲಿ ಎಂಬುದು ನಮ್ಮ ಹಾರೈಕೆ. ನಿಮ್ಮ ಜೀವನದಲ್ಲಿ ಹೊಸ ಉತ್ಸಾಹ, ಅನೇಕ ಸಾಧನೆಗಳು ಮತ್ತು ಅಪಾರ ಗೌರವಗಳನ್ನು ತರಲಿ. ದೇವರು ನಿಮಗೆ ಸುಖ, ಶಾಂತಿ, ಸಮೃದ್ಧಿ ಮತ್ತು ದೀರ್ಘಾಯುಷ್ಯವನ್ನು ಕರುಣಿಸಲಿ.
ಶುಭಾಶಯ ಕೋರುವವರು
ಕೆ. ಆರ್. ಸತ್ಯನಾರಾಯಣ್
ಅಧ್ಯಕ್ಷರು, ಕರ್ನಾಟಕ ಹೋಯ್ಸಳ ಸಂಘ (ರಿ.)
ಪಾಲುದಾರರು, ಸಪ್ತಪದಿ ಅಸೋಸಿಯೇಟ್ಸ್ ಹಾಗೂ
ದಿ ಕಾಂಟಿನೆಂಟಲ್ ಇನ್ & ಸೂಟ್ಸ್
ಮೈಸೂರು
ಚಿಕ್ಕಕೆಂಪೇಗೌಡ
ಪಾಲುದಾರರು, ಸಪ್ತಪದಿ ಅಸೋಸಿಯೇಟ್ಸ್
ಹಾಗೂ ದಿ ಕಾಂಟಿನೆಂಟಲ್ ಇನ್ & ಸೂಟ್ಸ್
ಮೈಸೂರು
ಕೆ. ಸಿ. ಕಾರ್ತಿಕ್
ಪಾಲುದಾರರು, ಸಪ್ತಪದಿ ಅಸೋಸಿಯೇಟ್ಸ್
ಹಾಗೂ ದಿ ಕಾಂಟಿನೆಂಟಲ್ ಇನ್ & ಸೂಟ್ಸ್
ಮೈಸೂರು
ಕೆ. ಎಸ್. ಸುದರ್ಶನ್
ಪಾಲುದಾರರು, ಸಪ್ತಪದಿ ಅಸೋಸಿಯೇಟ್ಸ್
ಹಾಗೂ ದಿ ಕಾಂಟಿನೆಂಟಲ್ ಇನ್ & ಸೂಟ್ಸ್, ಮೈಸೂರು
ಎಮ್. ಎನ್. ಸುದೀಪ್‌ಗೌಡ
ಪಾಲುದಾರರು, ಸಪ್ತಪದಿ ಅಸೋಸಿಯೇಟ್ಸ್
ಹಾಗೂ ದಿ ಕಾಂಟಿನೆಂಟಲ್ ಇನ್ & ಸೂಟ್ಸ್, ಮೈಸೂರು